ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

SRI RAMAKRISHNA MATH

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14

ಜುಲೈ-2015

ಪ್ರವಾಸ 2015 ಹೋಟೆಲ್ ರೂಂ ಹಾಗೂ ನಮ್ಮ ಊಟೋಪಚಾರದೊಂದಿಗೆ

ಚಾರೋಧಾಮ್ - ಕಾಶಿ - ಗಯಾ : 19/26 ದಿನಗಳು

Sep 18 Oct 06

ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ಕೇದಾರ, ತ್ರಿಯುಗಿ (Optional), ಮಾನಾ, ವ್ಯಾಸ ಗುಹ, ಗಣೇಶ ಗುಹ, ಕೇಶವ ಪ್ರಯಾಗ್, ಬದರಿ, ಋಷಿಕೇಶ್, ನವದೆಹಲಿ, ಅಲಹಾಬಾದ್, ಅಯೋಧ್ಯಾ, ಸಾರಾನಾಥ್, ಗಯಾ, ಬುದ್ಧಗಯಾ, ಕಾಶಿ

ದ್ವಾರಕ ಮತ್ತು ಜ್ಯೋತಿರ್ಲಿಂಗ : 24 ದಿನಗಳು

Oct 25 Nov 15

ಪುಷ್ಕರ, ಅಜ್ಮೀರ್, ನಾಥದ್ವಾರ, ಕಾಂಕ್ರೋಲಿ, ಏಕಲಿಂಗ್ಜಿ, ಉದಯಪುರ, ಮೌಂಟ್ ಅಬು, ಮಾತೃಗಯಾ, ದ್ವಾರಕ, ಬೇಟ್‌ದ್ವಾರಕ, ನಾಗೇಶಂ, ಮೂಲ ದ್ವಾರಕ, ಪೋರಬಂದರ್, ವಿರಾವಲ್, ಸೋಮನಾಥ್, ಡಾಕೋರ್, ಅಹಮದಾಬಾದ್, ಉಜ್ಜೈನಿ, ಓಂಕಾರೇಶ್ವರ, ಪರ್ಲಿ, ಔರಂಗಾಬಾದ್, ಎಲ್ಲೊರ, ಘೃಷ್ಣೇಶ್ವರ, ನಾಸಿಕ್, ತ್ರಿಯಂಬಕ್, ಶಿರಡಿ, ಶನಿಸಿಂಗನಾಪುರ, ಭೀಮಾಶಂಕರ್.

ಶಕ್ತಿಪೀಠ ಮನಾಲಿ ಸ್ಪೆಷಲ್ : 18 ದಿನಗಳು

Sep 24 Oct 25

ವಾಘಾ ಬಾರ್ಡರ್ (ಇಂಡೋ-ಪಾಕ್ ಬಾರ್ಡರ್), ಅಮೃತ್‌ಸರ್, ವೈಷ್ಣವೀದೇವಿ, ಚಾಮುಂಡ, ಖಾಂಘ್ಡಾ, ಚಿಂತಪೂರ್ಣಿ, ಜ್ವಾಲಾಮುಖಿ, ಬೈಜ್‌ನಾಥ್, ಕುಲು-ಮನಾಲಿ, ವಶಿಷ್ಠ, ರೋತಾಂಗ್ ಪಾಸ್ (Optional), ನೈನಾದೇವಿ, ಕುಫ್ರಿ, ಸಿಮ್ಲಾ, ಚಂಡೀಘರ್, ಕುರುಕ್ಷೇತ್ರ, ನವದೆಹಲಿ

ಕೋಲ್ಕತ್ತಾ - ಡಾರ್ಜಿಲಿಂಗ್ : 16 ದಿನಗಳು

Sep 22 Nov 18

ಡಾರ್ಜಿಲಿಂಗ್, ಗ್ಯಾಂಗ್‌ಟಕ್, ಸಿಲಿಗುರಿ, ಕೋಲ್ಕತ್ತಾ, ಪೂರಿ, ಕೊನಾರ್ಕ್, ಚಿಲ್ಕ ಲೇಕ್, ಭುವನೇಶ್ವರ್

ದಕ್ಷಿಣ ಭಾರತ : 10 ದಿನಗಳು

Aug 26 Nov 25

ಗುರುವಾಯೂರ್, ಕಾಲಡಿ, ತಿರುವನಂತಪುರ, ಸುಚೀಂದ್ರಂ, ಕೋವಲಂ ಬೀಚ್, ಕನ್ಯಾಕುಮಾರಿ, ರಾಮೇಶ್ವರಂ, ಮಧುರೈ, ತಿರುಚಿ, ಶ್ರೀರಂಗಂ, ತಂಜಾವೂರ್, ಕುಂಭಕೋಣಂ, ಚಿದಂಬರಂ, ತಿರುವಣ್ಣಾಮಲೈ, ನವಗ್ರಹ ದೇವಸ್ಥಾನಗಳು

SINGAPORE MALAYSIA THAILAND : 11 Days

DUBAI - 5 Days

ಶ್ರೀ ಹನ್ಸಾ ಟ್ರಾವೆಲ್ಸ್

ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ

ನಂ. 640, 40ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು - 560070.

hansaatravels@gmail.com

www.kailashyatra.in

0-9341215612
0-9341415612
080-26643276
080-26543891

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಮುಕ್ತಿದಾನಂದ
ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು
ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:

ಬಳಿಗೆ ಬಂದ ಹಣತೆಗಳಿಗೆ
ಬೆಳಕನಿತ್ತ ಕಿರಣವೆ

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ): ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ): $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಜುಲೈ-2015 ಸಂಪುಟ 16 ಸಂಚಿಕೆ 07

ವಿವೇಕ ಪ್ರಭ

ಪರಿವಿಡಿ





ರಾಜನೇ, ಯಾವ ಬಗೆಯ ಚಿತ್ರಹಿಂಸೆಯೂ ನಮ್ಮನ್ನು ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ನಮ್ಮಿಬ್ಬರ ಮುಂದಿರುವ ಜಗತ್ತು ಏನು ಗೊತ್ತೆ? ನಮ್ಮಿಬ್ಬರ ಆಕಾರಗಳು ಮಾತ್ರ.





ಪ್ರಾರ್ಥನೆ

ಗುರೂಪಸತ್ತಿ

ಸ್ವಾಮಿನ್ನಮಸ್ತೇ ನತಲೋಕಬಂಧೋ
ಕಾರುಣ್ಯಸಿಂಧೋ ಪತಿತಂ ಭವಾಬ್ಧೌ ।
ಮಾಮುದ್ಧರಾತ್ಮೀಯ-ಕಟಾಕ್ಷದೃಷ್ಟ್ಯಾ
ಋಜ್ವ್ಯಾಽತಿಕಾರುಣ್ಯ-ಸುಧಾಭಿವೃಷ್ಟ್ಯಾ ॥

ನಮಿಸುತ್ತಿರುವ ಜನರ ಬಂಧುವೆ, ಕರುಣಾಸಾಗರನೆ, ಸ್ವಾಮಿನ್, ನಿನಗೆ ನಮಸ್ಕಾರ ! ಸಂಸಾರಸಾಗರದಲ್ಲಿ ಬಿದ್ದಿರುವ ನನ್ನನ್ನು ಕರುಣಾಮೃತವನ್ನು ವರ್ಷಿಸುತ್ತಿರುವ ನಿನ್ನ ಸರಳವಾದ ಕಟಾಕ್ಷದೃಷ್ಟಿಯಿಂದ ಉದ್ಧರಿಸು!



ಶಾಂತಾ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾನ್ಯಾನಪಿ ತಾರಯಂತಃ ॥

ಭಯಂಕರವಾದ ಸಂಸಾರಸಾಗರವನ್ನು ತಾವು ದಾಟಿ, ಯಾವ ನಿಮಿತ್ತವೂ ಇಲ್ಲದೆ ಇತರ ಜನರನ್ನು ದಾಟಿಸುವ ಶಾಂತರೂ ಮಹನೀಯರೂ ಆದ ಸತ್ಪುರುಷರು ವಸಂತಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತಾ ಇರುತ್ತಾರೆ.

ಕಥಂ ತರೇಯಂ ಭವಸಿಂಧುಮೇತಂ
ಕಾ ವಾ ಗತಿರ್ಮೇ ಕತಮೋಽಸ್ತ್ಯುಪಾಯೋ ।
ಜಾನೇ ನ ಕಿಂಚಿತ್ ಕೃಪಯಾಽವ ಮಾಂ ಪ್ರಭೋ
ಸಂಸಾರದುಃಖ-ಕ್ಷತಿಮಾತನುಷ್ವ ॥

ಈ ಸಂಸಾರಸಾಗರವನ್ನು ಹೇಗೆ ದಾಟಬಲ್ಲೆನು? ನನಗೆ ಗತಿ ಯಾವುದು? ನನಗೆ ಮೋಕ್ಷೋಪಾಯವು ಯಾವುದು? ಇದಾವುದನ್ನೂ ನಾನು ಅರಿಯೆನು. ಹೇ ಪ್ರಭೋ, ನನ್ನನ್ನು ಕೃಪೆಯಿಂದ ಕಾಪಾಡು. ನನ್ನ ಸಂಸಾರದುಃಖವನ್ನು ಪೂರ್ಣವಾಗಿ ನಾಶಮಾಡು.

(‘ವಿವೇಕಚೂಡಾಮಣಿ’ ಯಿಂದ)

ಸೂಕ್ತಿಪ್ರಭ

ವೇಮನನ ಸೂಕ್ತಿಗಳು

* ಚಿತ್ತ ಶುದ್ಧಿ ಹೊಂದಿ ಮಾಡಿದ ಪುಣ್ಯಕಾರ್ಯ ಸಣ್ಣ ಕೆಲಸವಾದರೇನಂತೆ, ಅದು ಕ್ಷುಲ್ಲಕವಲ್ಲ. ಆಲದ ಮರದ ಬೀಜ ಅತ್ಯಂತ ಚಿಕ್ಕದಾದರೂ, ಅದರ ಮಹಿಮೆ ತಿಳಿಯುವುದು ಹೆಮ್ಮರವಾದಾಗಲಲ್ಲವೆ?

* ನೀರಿನಲ್ಲಿರುವ ಮೀನು ಮಾಂಸದ ಚೂರಿಗಾಗಿ ಆಸೆಪಟ್ಟು , ಗಾಳದಲ್ಲಿ ಸಿಲುಕಿ ತನ್ನ ಜೀವವನ್ನೇ ಕಳೆದುಕೊಳ್ಳುವುದು. ಅದೇ ರೀತಿ ಆಸೆಯಿಂದ ಮಾನವನು ಸಂಸಾರದ ಬಲೆಯಲ್ಲಿ ಸಿಲುಕಿ ನಾಶವಾಗುವನು.

* ಜಗತ್ತೆಲ್ಲ ತಿರುಗಾಡಿ, ತೀರ್ಥಯಾತ್ರೆ ಮಾಡಿ ಪಡೆಯುವ ಪುಣ್ಯವನ್ನೆಲ್ಲ ಸಾಧುಸಂತರ ದರ್ಶನದಿಂದಲೇ ಪಡೆಯಬಹುದು. ಮಳೆಯಿಂದ ನೆಲಕ್ಕೆ ಬಿದ್ದ ನೀರೇ ನೆಲದ ತಳದಲ್ಲಿ ಇಂಗಿ ಶುದ್ಧಜಲವಾಗುವುದು, ಅಂತೆಯೇ ಎಲ್ಲ ಪುಣ್ಯಗಳೂ ಸಾಧುಜನರಲ್ಲಿ ಹರಿದು ಬಂದಿರುತ್ತದೆ.

* ಆತ್ಮಶುದ್ಧಿಯಿಲ್ಲದ ಆಚಾರವೇಕೆ? ಮಡಕೆ ಶುದ್ಧಿಯಿಲ್ಲದ ಅಡುಗೆಯೇಕೆ? ಭಾವಶುದ್ಧಿಯಿಲ್ಲದ ದೇವರ ಪೂಜೆಯೇಕೆ?

* ಡೊಂಕಿಲ್ಲದಂತೆ ನುಡಿಯನ್ನು ತಿದ್ದಬಹುದು. ಓರೆಕೋರೆಯಿಲ್ಲದಂತೆ ಕಲ್ಲನ್ನು ಕಡೆದು ವಿಗ್ರಹ ಮಾಡಬಹುದು. ಆದರೆ ಜಗತ್ತಿನಲ್ಲಿ ಮನಸ್ಸನ್ನು ತಿದ್ದುವ ಕೆಲಸ ಮಾತ್ರ ಅಸಾಧ್ಯವಾದದ್ದು.

* ಧಾರ್ಮಿಕನಾಗದೆ ಧರ್ಮ ತಿಳಿಯದು. ದುಷ್ಟನಿಗೆ ಅದು ಕಾಣುವುದೆ? ನೀರಿಳಿಯದೆ ನೀರಿನ ಆಳ ತಿಳಿಯುವುದೆ?

Narmada Jhabua Gramin Bank, Indore

आपका अपना बैंक

(A Joint Venture of Govt. of India, M.P. Govt. & Bank of India)

Education Loan




Home Loan




Retail Trade Loan



Personal Loan



KCC Loan Facility



Locker Facility



More than 355 Fully Computerised Branches

Winner of Inclusive Finance India Award for year 2014

Deposit Schemes of Our Bank

- Current Deposit
- Recurring / Flexi Recurring
- Saving Deposit
- Monthly/Quarterly Income Deposit (MIC/QIC)
- FDR/DBD (Quarterly compunding interest)
- Sunidhi Deposit scheme (Tax Saving Deposit Scheme) etc.

Loan Schemes of Our Bank

- Home Loan
- Education Loan
- Personal Loan
- Mortgage Loan
- Micro Finance
- Consumer Loan
- Business Loan – (with CC/OD Limit)
- Vehicle & SRTO Loan
- SHG, JLG, SCC, GCC, ACC, WCC etc..

Kollegal V. Raghavendra
Chairman & CEO

Head Office : Arcade Silver, Near Chappan Shop, New Palasia, Indore (M.P.) 452 001
☎ : (0731) 2549053-56, Fax : (0731) 2432432 • Website : www.njgb.in • Email : njgbhoindore@yahoo.com

ಸಂಪಾದಕೀಯ

ಧರ್ಮ ಮತ್ತು ಶ್ರದ್ಧೆ

ಮತ, ಧರ್ಮ ಎಂದ ಕೂಡಲೆ ಕೋಮು ಗಲಭೆಯ, ಗೊಂದಲದ, ರಕ್ತಪಾತದ ಚಿತ್ರ ಕಣ್ಣಮುಂದೆ ಬಂದು ನಿಲ್ಲುತ್ತದೆ. ಇತ್ತೀಚೆಗೆ ಅನಾಚಾರ, ಯುದ್ಧ, ಉಗ್ರವಾದಿಗಳ ತನಕವೂ ಅದು ಮುಂದುವರೆದಿದೆ. ಶಾಂತಿ, ನೆಮ್ಮದಿ, ಸಂಸ್ಕೃತಿ, ಸಮನ್ವಯ, ಉದಾತ್ತತೆಗಳನ್ನು ಪ್ರತಿಪಾದಿಸಬೇಕಾಗಿದ್ದ ಮತ, ಧರ್ಮಗಳ ವ್ಯಾಖ್ಯೆ ದಿಕ್ಕು ತಪ್ಪುತ್ತಿದೆಯೆ? ಧರ್ಮದ ನಿಜವಾದ ಅರ್ಥವೇನು? ಸಾಮಾಜಿಕ, ರಾಜಕೀಯ ಸನ್ನಿವೇಶಗಳಲ್ಲಿ ಅದು ಪಡೆದುಕೊಳ್ಳುತ್ತಿರುವ ಬಣ್ಣ ಯಾವುದು? ಈ ದಿಕ್ಕಿನಲ್ಲಿ ಯೋಚಿಸುವಾಗ ಕೆಲವು ಸೂಕ್ಷ್ಮ ಅಂಶಗಳನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು.

೧. ಧರ್ಮ ಕಂಡುಬರುವ ರೀತಿ

ಮತ, ಧರ್ಮಗಳಿಲ್ಲದ ಮಾನವ ಜೀವನವನ್ನು ನಾವು ಕಲ್ಪಿಸಿಕೊಂಡರೆ, ಯಾವುದೇ ಸಮಸ್ಯೆ ಅಥವಾ ಸಂಘರ್ಷವಿಲ್ಲದ ಒಂದು ಸುಂದರ ಸಮಾಜ ಸೃಷ್ಟಿಯಾಗುತ್ತದೆ ಎಂಬುದು ಅರ್ಥವಿಲ್ಲದ ಮಾತು. ನಾಸ್ತಿಕವಾದ ಅಥವಾ ಧರ್ಮವಿರೋಧಿ ವಿಚಾರಧಾರೆಗಳು ಪ್ರತಿಪಾದಿಸುವ ಈ ಸಮಾಜ ಚಾರಿತ್ರಿಕವಾಗಿ ಒಂದು ಮಿಥ್ಯೆ. ಆದಿಮ ಜನಾಂಗದಿಂದ ಹಿಡಿದು, ಹಲವು ಶತಮಾನಗಳ ಸಾಂಸ್ಕೃತಿಕ ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಸಾಗಿಬಂದ ಮಾನವ ಇತಿಹಾಸದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಭಾವನೆಗಳು ಎಲ್ಲ ಕಾಲದಲ್ಲೂ ಇದ್ದುದನ್ನು ನಾವು ಕಾಣುತ್ತೇವೆ. ಹಲವು ಅಂಧಶ್ರದ್ಧೆ, ಸಾಂಪ್ರದಾಯಿಕ ನಂಬಿಕೆಗಳನ್ನೆಲ್ಲ ಬುಡಮೇಲು ಮಾಡಿದ ವೈಜ್ಞಾನಿಕ ಬೆಳವಣಿಗೆಯ ಪ್ರಖರ ಹೊಡೆತಗಳನ್ನೂ ಎದುರಿಸಿ ನಿಂತಿದೆ ಧಾರ್ಮಿಕ ಭಾವನೆ. ಮತ, ಧರ್ಮಗಳು ಅಡಿಪಾಯವಿಲ್ಲದ ಕಟ್ಟಡವಾಗಿದ್ದರೆ, ೧೮–೧೯ ನೇ ಶತಮಾನದ ವೈಜ್ಞಾನಿಕ ಕ್ರಾಂತಿಯನ್ನು ಎದುರಿಸಿ ನಿಲ್ಲದೆ, ಕುಸಿದು ಭೂಗತವಾಗಿ ಬಿಡುತ್ತಿದ್ದವು. ಆದರೆ ಇಂದು ನಾವು ಕಾಣುವುದೇನನ್ನು? ಮತಾಂಧತೆಯ ತೀವ್ರತರ ಸಂಘರ್ಷವನ್ನು ಹಲವು ದೇಶಗಳಲ್ಲಿ, ಹಲವು ನೆಲೆಗಳಲ್ಲಿ ಕಾಣುತ್ತಿದ್ದೇವೆ. ನೇರವಾಗಿಯೋ, ಪರೋಕ್ಷವಾಗಿಯೋ ಒಂದು ದೇಶದ, ಒಂದು ಜನಾಂಗದ ಗೊತ್ತುಗುರಿಯನ್ನು ನಿರ್ಣಯಿಸುವಲ್ಲಿ ಮತ, ಧರ್ಮಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಯಾರೂ ಸಮರ್ಥಿಸಲಾಗದ ಭಯೋತ್ಪಾದಕ ಆಕ್ರಮಣ, ನೂರಾರು ಜನರ ಬರ್ಬರ ಹತ್ಯೆ, ಉಗ್ರವಾದೀ ಸಂಘಟನೆಗಳ ಪ್ರಚೋದನೆ, ಹಿಂಸಾಚಾರವನ್ನು ಪ್ರೇರೇಪಿಸುವ ವಿಕೃತ ಪಿತೂರಿಗಳನ್ನು ಯಾವ ಧರ್ಮದಲ್ಲಿ ಪ್ರತಿಪಾದಿಸಲಾಗಿದೆ? ಯಾವ ಧರ್ಮದ, ಮತದ ತತ್ತ್ವಗಳು ಇಂಥ ಘಟನೆಗಳನ್ನು ಎತ್ತಿ ಹಿಡಿಯುತ್ತವೆ? ಯಾವ ಧರ್ಮದ ಸಂತರು ಈ ಬಗೆಯ ಕೃತ್ಯಗಳಿಗೆ ಪ್ರೇರಣೆ ನೀಡುತ್ತಾರೆ?

ಮತಧರ್ಮಗಳನ್ನು ಕುರಿತು ಅಧ್ಯಯನ ಮಾಡಿದರೆ, ಎಲ್ಲೂ ಇವುಗಳಿಗೆ ಸಮರ್ಥನೆ ನೀಡಿರುವುದು ಕಂಡುಬರುವುದಿಲ್ಲ. ಆದ್ದರಿಂದ, ಈ ಬಗೆಯ ಅನಾಚಾರಗಳಿಗೆ ಮೂಲ ಇನ್ನೆಲ್ಲೋ ಇದೆಯೆನ್ನಬೇಕು.

೨. ಧರ್ಮಶ್ರದ್ಧೆ ಹಾಗೂ ಮತಾಂಧತೆ

ಈ ಎರಡು ಪದಗಳನ್ನು ಸಕಾರಾತ್ಮಕವಾಗಿಯೂ, ನಕಾರಾತ್ಮಕವಾಗಿಯೂ ಬಳಸುತ್ತೇವೆ. ಆದರೆ ಇವೆರಡರ ವ್ಯತ್ಯಾಸವನ್ನು ಗುರುತಿಸುತ್ತಾ ಹೋದಾಗ, ಈ ವ್ಯತ್ಯಾಸದ ಅಂತರ ಕಡಿಮೆಯಾಗುತ್ತ, ಅತ್ಯಂತ ಸೂಕ್ಷ್ಮ ಭಿನ್ನತೆ ಮಾತ್ರ ಉಳಿಯುವುದನ್ನು ಕಾಣುತ್ತೇವೆ. ಎಲ್ಲ ತಪ್ಪು ತಿಳುವಳಿಕೆ, ಅನರ್ಥಗಳಿಗೆ ಇದೇ ಕಾರಣವಾಯಿತು ಅನ್ನಿಸುತ್ತದೆ.

ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಒಬ್ಬ ಸಾಧಕ ಮುಂದುವರಿಯಬೇಕಾದರೆ ತಾನು ನಂಬುವ ದೇವರಲ್ಲಿ, ತನ್ನ ಸಾಧನೆಯ ಮಾರ್ಗದಲ್ಲಿ (ಅದೇ 'ಧರ್ಮ'), ಹಾಗೂ ತನ್ನ ಪರಂಪರೆಯಲ್ಲಿ ಅಚಲ ನಿಷ್ಠೆಯಿರಬೇಕೆಂದು ಎಲ್ಲ ಧರ್ಮಗುರುಗಳು, ಎಲ್ಲ ಧರ್ಮಗ್ರಂಥಗಳು ಬೋಧಿಸುತ್ತವೆ. ಇದನ್ನು 'ಧರ್ಮಶ್ರದ್ಧೆ' ಎನ್ನಬಹುದು. ಇಷ್ಟನಿಷ್ಠೆ, ದೈವಭಕ್ತಿ, ಆಸ್ತಿಕತೆ ಎಂಬ ಮಾತಿನಿಂದಲೂ ಇದನ್ನು ಕರೆಯುತ್ತೇವೆ. ಇಲ್ಲಿ ಧಾರ್ಮಿಕ ಮುನ್ನಡೆಗೆ ಅಗತ್ಯವಾದ ಮಾನಸಿಕ ದೃಢತೆ, ನೈತಿಕ ಶಕ್ತಿ ಹಾಗೂ ಆಂತರಿಕ ಪ್ರೇರಣೆಯನ್ನು ಈ ಧರ್ಮಶ್ರದ್ಧೆ ನೀಡುತ್ತದೆ. ಇಲ್ಲಿ ಇದು ಸಂಪೂರ್ಣ ಸಕಾರಾತ್ಮಕ ಭಾವನೆಯಾಗಿದೆ. ಇಷ್ಟರಿಂದಲೇ ಯಾವುದೇ ಅನಾಹುತ, ಅನಾಚಾರ, ಗೊಂದಲ ಸೃಷ್ಟಿಯಾಗದು.

ಆದರೆ ತನ್ನ ಧರ್ಮ, ದೇವರುಗಳಲ್ಲಿ ನಿಷ್ಠೆ ಹಾಗೂ ಶ್ರದ್ಧೆ ಇದ್ದರೆ ಸಾಕೆ? ಅದೇ ನಿಷ್ಠೆ, ಶ್ರದ್ಧೆಗಳು ಅನ್ಯಮತ, ಅನ್ಯಧರ್ಮ, ಅನ್ಯದೇವತೆಗಳನ್ನು ದ್ವೇಷಿಸುವ ಪ್ರವೃತ್ತಿಯನ್ನುಂಟುಮಾಡದೆ? ಕೃಷ್ಣ ಅಥವಾ ಬುದ್ಧನನ್ನು ಏಕನಿಷ್ಠೆಯಿಂದ ಪೂಜಿಸುವ ಭಕ್ತನಿಗೆ

ಅನ್ಯಧರ್ಮದ ದೇವರನ್ನು ಅದೇ ನಿಷ್ಠೆಯಿಂದ ಪೂಜಿಸಲಾಗುವುದೆ? ಇದೇ ಧಾರ್ಮಿಕ ದ್ವೇಷ. ಎಲ್ಲ ಅನಾಹುತಗಳ ಮೂಲ ಇಲ್ಲೇ ಇದೆ ಎನ್ನುತ್ತದೆ ಒಂದು ವಾದ. ಈ ಕಾರಣದಿಂದ, ಧರ್ಮಗಳ ಮೂಲದಲ್ಲೇ ಅಸಹನೆ, ದ್ವೇಷ ಹಾಗೂ ಅಂಧಶ್ರದ್ಧೆ ಅಡಗಿವೆ; ನಿಷ್ಠೆ ಅಥವಾ ಶ್ರದ್ಧೆ ಎನ್ನುವುದು ಈ ದುಷ್ಟ ಭಾವನೆಗಳ ಇನ್ನೊಂದು ಹೆಸರಷ್ಟೇ ಎಂದು ಆ ವಾದ ಪ್ರತಿಪಾದಿಸುತ್ತದೆ.

ಈ ವಾದಕ್ಕೆ ಪ್ರತಿಯಾಗಿ ಹೇಳುತ್ತಾರೆ: ಶ್ರದ್ಧೆ ಅಥವಾ ಏಕನಿಷ್ಠೆ ದ್ವೇಷವನ್ನು ಪ್ರಚೋದಿಸುತ್ತದೆ ಎಂಬ ಮಾತೇ ಸುಳ್ಳು; ಅವೆರಡೂ ಬೇರೆ ಬೇರೆ ಪ್ರೇರಕ ಶಕ್ತಿಗಳು. ಶ್ರದ್ಧೆಯುಳ್ಳವನು ಅನ್ಯಧರ್ಮ, ಅನ್ಯದೇವತೆಯನ್ನು ದ್ವೇಷಿಸಬೇಕೆಂದೇ ಇಲ್ಲವಲ್ಲ? 'ಎಲ್ಲ ಧರ್ಮಗಳನ್ನೂ ಗೌರವಿಸು, ಆದರೆ ನಿನ್ನ ಧರ್ಮದಲ್ಲಿ ನಿಷ್ಠೆಯನ್ನು ಹೊಂದು' ಎಂಬ ಶ್ರೀರಾಮಕೃಷ್ಣರ ಮಾತಾಗಲಿ, 'ಇತರ ಎಲ್ಲ ಮಾರ್ಗಗಳನ್ನೂ ತ್ಯಜಿಸಿ, ನನ್ನಲ್ಲೇ ಶರಣಾಗತನಾಗು' ಎಂಬ ಗೀತೆಯ ಮಾತಾಗಲಿ ಈ ಭಾವನೆಯನ್ನೇ ಹೇಳುತ್ತವೆ. 'ಸರ್ವಧರ್ಮಾನ್ ಪರಿತ್ಯಜ್ಯ' ಎಂದರೆ ತನ್ನ ಆಯ್ಕೆಯ ಪಥವನ್ನು, ಭಾವನೆಯನ್ನು ತಾನು ಕಂಡುಕೊಳ್ಳುವಲ್ಲಿ ಅದು ನೆರವಾಗಬೇಕು ಎಂದರ್ಥವೇ ಹೊರತು, ಇತರ ಧರ್ಮಗಳನ್ನು ದ್ವೇಷಿಸಬೇಕು ಎಂದಲ್ಲ. ಈ ವಿಷಯದಲ್ಲಿ ಗೊಂದಲವುಂಟಾದಾಗಲೇ ಎಲ್ಲ ದ್ವೇಷ, ಹಿಂಸೆ, ಅನಾಚಾರಗಳು ಹುಟ್ಟುವುವು. ಇವೆರಡರ ನಡುವಿನ ವ್ಯತ್ಯಾಸ ಅತ್ಯಂತ ಸೂಕ್ಷ್ಮವಾದದ್ದು; ಅದರಿಂದಲೇ ಹಲವರು ಅದನ್ನು ತಪ್ಪು ತಿಳಿದುಕೊಳ್ಳುತ್ತಾರೆ. ಹಲವು ಮಂದಿ ಬುದ್ಧಿವಂತರು ಇಂತಹ ಗೊಂದಲಗಳನ್ನು ತಮ್ಮ ರಾಜಕೀಯ, ಸಾಮಾಜಿಕ ಹಿತಾಸಕ್ತಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ. ಅನೇಕ ಸಲ ಅದು ಹಲವು ಅನಾಚಾರಗಳಿಗೆ ಕಾರಣವಾಗುತ್ತದೆ. ಇದು ಎರಡನೆಯ ವಾದ.

ದ್ವೇಷದ, ತಿರಸ್ಕರಿಸುವ ಭಾವನೆ ಉಂಟಾಗದಂತೆ ಧರ್ಮಶ್ರದ್ಧೆ, ನಿಷ್ಠೆ , ಆಧ್ಯಾತ್ಮಿಕ ವಿಕಾಸ ಸಾಧ್ಯವಿಲ್ಲವೆ? ಖಂಡಿತ ಸಾಧ್ಯವಿದೆ. ಅಷ್ಟೇ ಅಲ್ಲ, ದ್ವೇಷಭಾವನೆಯನ್ನು ತ್ಯಜಿಸಿದಲ್ಲದೆ ನಿಜವಾದ ಶ್ರದ್ಧೆಯುಂಟಾಗದು, ಆಧ್ಯಾತ್ಮಿಕ ವಿಕಾಸ ಸಾಧ್ಯವಾಗದು ಎಂದೇ ಎಲ್ಲ ಧರ್ಮಗಳ ಮೂಲಪುರುಷರು, ಸಂತರು ಹಾಗೂ ಮೂಲಗ್ರಂಥಗಳು ಸಾರುತ್ತವೆ. ಎಲ್ಲ ಸಮಸ್ಯೆಗಳ ಮೂಲ ಇನ್ನೆಲ್ಲೋ ಅಡಗಿದೆ – ಮುಖ್ಯವಾಗಿ ಧರ್ಮಕ್ಕೆ ಹೊರತಾದ ಹಿತಾಸಕ್ತಿಗಳಿಂದ.

೩. ಧರ್ಮದ ವಿವಿಧ ಹಂತಗಳು

ಧರ್ಮಗಳು ಕೇವಲ ಕೆಲವು ವ್ಯಕ್ತಿಗಳ, ಕೆಲವು ಕುಟುಂಬಗಳ ಪದ್ಧತಿ ಅಥವಾ ಸಂಪ್ರದಾಯವಾಗಿ ಉಳಿದಿದ್ದರೆ ಸಮಾಜದಲ್ಲಿ ಇಷ್ಟೊಂದು ಗೊಂದಲವಿರುತ್ತಿರಲಿಲ್ಲ. ತೀರ ಸೀಮಿತ ವಲಯದ ಕೆಲವು ಆಚರಣೆಗಳು ಸುರಕ್ಷಿತವಾಗಿ, ತಮ್ಮ ವಲಯದಲ್ಲಿ ಮಾತ್ರ ಉಳಿದಿರುತ್ತಿದ್ದವು. ಆದರೆ ಧರ್ಮವು ಇಡೀ ಸಮಾಜವನ್ನೇ ವಿವಿಧ ಹಂತಗಳಲ್ಲಿ, ವಿವಿಧ ಪಂಗಡಗಳಲ್ಲಿ ವ್ಯಾಪಿಸಿ ನಿಂತಿದೆ; ಅದು ಸಮಾಜದ ಅವಿಭಾಜ್ಯ ಅಂಗವಾಗಿದೆ. 'ಧರ್ಮನಿರಪೇಕ್ಷ', 'ಸ್ವತಂತ್ರ ಭಾವನೆ' (free thinking) ಹಾಗೂ 'ಧರ್ಮರಹಿತ ಸಮಾಜ' ಎಂಬ ವಿಚಾರಧಾರೆಗಳೆಲ್ಲ ಎಷ್ಟು ಪ್ರಯತ್ನಪಟ್ಟರೂ ಸಮಾಜದಿಂದ ಧರ್ಮವನ್ನು ನಿವಾರಿಸುವುದು ಸಾಧ್ಯವಿಲ್ಲವೆಂಬುದು ಇಂದು ಸಾಬೀತಾಗಿದೆ. ಸಮಾಜ ಹಾಗೂ ಸಂಸ್ಕೃತಿಗೆ ಧರ್ಮ ಇಷ್ಟೊಂದು ಮುಖ್ಯವಾದ ಒಂದು ಪ್ರೇರಕ ಸಂಗತಿಯಾಗಬೇಕಾದರೆ, ಅದರ ಹಿಂದಿನ ಶಕ್ತಿಯೇನು ಎನ್ನುವುದನ್ನು ಮನಗಾಣಬೇಕು. ರೋಗ ನಿವಾರಣೆಗಾಗಿ ಕೈಯನ್ನೇ ಕತ್ತರಿಸುವ ಬದಲು, ರೋಗಕ್ಕೆ ಕಾರಣವಾದ ಅಂಶವನ್ನು ನಿವಾರಿಸುವುದೇ ಸೂಕ್ತ. ಅಂತೆಯೇ, ಧರ್ಮಕ್ಕೆ ಹತ್ತಿರುವ ರೋಗದ ಮೂಲ ಎಲ್ಲಿದೆ ಎಂದು ಕಂಡುಕೊಳ್ಳಲು, ಧರ್ಮದ ವಿವಿಧ ಹಂತಗಳ ಅಧ್ಯಯನ ನಡೆಸಬೇಕು.

ಆಧ್ಯಾತ್ಮಿಕ ಹಂತ: ಎಲ್ಲ ಧರ್ಮಗಳ ತಿರುಳು ಆಧ್ಯಾತ್ಮಿಕತೆ. ಅಲೌಕಿಕ ಅನುಭವ, ಸಾಕ್ಷಾತ್ಕಾರ ಹಾಗೂ ದಿವ್ಯ ಸತ್ಯಗಳ ಈ ಹಂತದಲ್ಲಿ ಪ್ರಾಪಂಚಿಕ ದ್ವಂದ್ವ, ಗೊಂದಲಗಳ ಮಾತೇ ಇರುವುದಿಲ್ಲ. ಈ ಹಂತ ಧರ್ಮದ ಆವಶ್ಯಕತೆಗೂ, ಅದರ ನೈಜ ಅಸ್ತಿತ್ವಕ್ಕೂ ಆಧಾರವಾಗಿದೆ. ಪ್ರತಿಯೊಂದು ಧರ್ಮಗಳೂ ಅಂತಿಮವಾಗಿ ಈ ಬಗೆಯ ಅನುಭವಗಳನ್ನೇ ಪ್ರತಿಪಾದಿಸುತ್ತವೆ. ಪ್ರಪಂಚ, ಮಾನವಜೀವನ, ಹಾಗೂ ಎಲ್ಲ ಅಪರಿಪೂರ್ಣತೆಗಳನ್ನು ಮೀರಿರುವ ಈ ಹಂತ ಕೇವಲ ಉನ್ನತ ಧ್ಯೇಯ, ಆದರ್ಶ ಹಾಗೂ ಅತ್ಯುಚ್ಚ ಗುಣಗಳನ್ನು ಪ್ರೇರೇಪಿಸುತ್ತದೆ. ಇಲ್ಲಿ ಮತಾಂಧತೆ, ಮತೀಯ ದ್ವೇಷಗಳಿಗೆ ಯಾವ ಸ್ಥಾನವೂ ಇಲ್ಲ; ಧರ್ಮಗಳ ಶುದ್ಧವಾದ, ಕಲುಷಿತಗೊಳ್ಳದ ಹಂತವಿದು.

ತಾತ್ತ್ವಿಕ ಹಂತ: ಅನುಭವವೇ ನೆಲೆಯಾಗಿರುವ ಆಧ್ಯಾತ್ಮಿಕ ಹಂತದ ಧರ್ಮವು ಸಾಧಕನ ಅಪರಿಣತ ಮನಸ್ಸನ್ನು ತಲುಪುವುದು ಗುರುವಿನ ಉಪದೇಶ ಹಾಗೂ ತರಬೇತಿಯ ಮೂಲಕ. ಆ ತರಬೇತಿಯಲ್ಲಿ ಸಾಧಕನ ಮನಸ್ಸು , ಬುದ್ಧಿಗಳನ್ನು ವಿಕಸನಗೊಳಿಸುವುದಕ್ಕೆ ಅಗತ್ಯವಾದ ಅಂಶವೇ ತಾತ್ತ್ವಿಕ ನಿರೂಪಣೆ. ಆಧ್ಯಾತ್ಮಿಕ ಅನುಭವಗಳನ್ನೇ ಆಧರಿಸಿ ನಿರೂಪಿಸುವ ತತ್ತ್ವಗಳನ್ನು ವಿವರಿಸುವಾಗ ಪ್ರತಿಯೊಬ್ಬ ಗುರು ಕೂಡ ತನ್ನದೇ ವಿಧಾನವನ್ನು ಅನುಸರಿಸುತ್ತಾನೆ. ಆದರೆ ಅದೇ ವಿಧಾನಗಳು ಮುಂದೆ ಒಂದೊಂದು ಪರಂಪರೆಯಾಗುತ್ತವೆ. ತಾತ್ತ್ವಿಕ ನೆಲೆಯನ್ನು ಹೊಂದುವಾಗ ಆಧ್ಯಾತ್ಮಿಕತೆಯು ವೈಯಕ್ತಿಕ ಹಂತವನ್ನೇ ಅವಲಂಬಿಸಬೇಕು ನಿಜ; ಆದರೂ ತತ್ತ್ವವು ಸಾರ್ವತ್ರಿಕತೆಯನ್ನೇ ಅವಲಂಬಿಸಿರುವುದರಿಂದಲೂ, ತತ್ತ್ವದ ಮೂಲ ನಿರೂಪಕರು ವೈಯಕ್ತಿಕ ಗುಣಲಕ್ಷಣಗಳನ್ನು ಮೀರಿದ ಸ್ವಭಾವವನ್ನು ಹೊಂದಿರುವುದರಿಂದಲೂ ಈ ಹಂತ ಇನ್ನೂ 'ವೈಯಕ್ತಿಕ ಹಂತ'ದ ಮಟ್ಟಕ್ಕೆ ಪೂರ್ಣವಾಗಿ ಇಳಿದಿರುವುದಿಲ್ಲ. ಆದರೆ ವಿವಿಧ ಪಂಥಗಳ, ಧರ್ಮಗಳ ವಿಶಿಷ್ಟ ಲಕ್ಷಣಗಳನ್ನು ಇವು ರೂಪಿಸುವುದರಿಂದ, ಈ ಹಂತವು 'ಆಧ್ಯಾತ್ಮಿಕ ಹಂತ'ಕ್ಕಿಂತ ಒಂದು ಮೆಟ್ಟಿಲು ಕೆಳಗಿನದು ಎನ್ನಬೇಕು.

ವೈಯಕ್ತಿಕ ಹಂತ: ಧರ್ಮವು ತನ್ನ ಎಲ್ಲ ಹಂತಗಳಲ್ಲೂ ಆಚರಣೆಯ ಮೂಲಕವೇ ಅಸ್ತಿತ್ವದಲ್ಲಿದೆ ಎನ್ನಬೇಕು. ಈ ಅರ್ಥದಲ್ಲಿ ವೈಯಕ್ತಿಕ ಹಂತ ಮುಖ್ಯವಾಗುತ್ತದೆ. ಮೊದಲ ಎರಡು ಹಂತ (ಆಧ್ಯಾತ್ಮಿಕ, ತಾತ್ತ್ವಿಕ)ಗಳಲ್ಲೂ ವೈಯಕ್ತಿಕತೆ ಎನ್ನುವುದು ಇದ್ದೇ ಇರುತ್ತದೆ; ಆದರೆ ಆ ಹಂತಗಳಲ್ಲಿ ವ್ಯಕ್ತಿ ತನ್ನ ಸೀಮಿತ ಅನುಭವ, ದೃಷ್ಟಿಕೋನ ಹಾಗೂ ಅರಿವಿನ ಪರಧಿಯನ್ನು ಮೀರಿ ಹೋಗುವುದರಿಂದಲೇ ಅಸಾಧಾರಣ ಸತ್ಯ ಗೋಚರವಾಗುವುದರಿಂದ, ವೈಯಕ್ತಿಕತೆಗಿಂತ ಸಾರ್ವತ್ರಿಕತೆಗೇ ಪ್ರಾಮುಖ್ಯತೆಯಿದೆ. ಆದರೆ ವ್ಯಕ್ತಿ ತನ್ನ ಸಾಮಾನ್ಯ ನೆಲೆಯಿಂದ ಆರಂಭಿಸಿ, ಧರ್ಮದ ಪಥದಲ್ಲಿ ಮುಂದುವರಿಯುವಾಗ ಅವನು ಹಲವು ಮೂಲಗಳಿಂದ ಮಾಹಿತಿ, ಪ್ರೇರಣೆ, ಮಾರ್ಗದರ್ಶನ ಪಡೆಯುತ್ತಲೂ, ತನ್ನ ಮಾನಸಿಕ-ಬೌದ್ಧಿಕ ವಿಕಸನದೊಂದಿಗೆ ಹೋರಾಡುತ್ತಲೂ ಬೆಳೆಯುತ್ತಾನೆ. ಶ್ರದ್ಧೆಯ ಅಥವಾ ನಿಷ್ಠೆಯ ವಿಚಾರ ಬಂದಾಗ ಈ ಹಂತ ಅತ್ಯಂತ ಮುಖ್ಯವಾದುದು. ಧರ್ಮವನ್ನು ಸರಿಯಾದ ಕ್ರಮದಲ್ಲಿ ಗ್ರಹಿಸುವ, ಅದನ್ನು ತನ್ನ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನೊಂದಿಗೆ ಆರೋಗ್ಯಕರ ರೀತಿಯಲ್ಲಿ ಅನುಷ್ಠಾನಗೊಳಿಸುವ ಬಗೆ ಸಂಪೂರ್ಣವಾಗಿ ಒಬ್ಬ ವ್ಯಕ್ತಿಯ ಸ್ವಭಾವವನ್ನು ಅವಲಂಬಿಸಿದೆ. ಮತಾಂಧತೆಗೂ ಶ್ರದ್ಧೆಗೂ ನಡುವೆ ಇರುವ ಅತ್ಯಂತ ತೆಳುವಾದ ಭಿನ್ನತೆಯನ್ನು ಗ್ರಹಿಸಲಾಗದಿದ್ದರೆ, ಮತಾಂಧತೆಯನ್ನೇ ಶ್ರದ್ಧೆಯೆಂದು ತಿಳಿದುಕೊಳ್ಳುವ ಅಪಾಯವಿದೆ. ಇದು ಒಂದು ಬಗೆಯ ಅಜ್ಞಾನವೇ; ಎಲ್ಲಿ ಇದು ಭಾವುಕತೆ, ಅಭಿಮಾನ ಹಾಗೂ ಗುಂಪುಗಾರಿಕೆಯ ಜಾಲದಲ್ಲಿ ಸಿಲುಕಿಕೊಳ್ಳುವುದೋ, ಆಗ ಅದು ಸಾಂಕ್ರಾಮಿಕ ರೋಗದ ಸ್ವರೂಪವನ್ನು ಪಡೆದುಕೊಳ್ಳುತ್ತದೆ; ವಿವಿಧ ಬಗೆಯ ಧರ್ಮವಿರೋಧಿ ('ಧರ್ಮ'-ನಿಜವಾದ ಅರ್ಥದಲ್ಲಿ) ವಾದಗಳು ಹುಟ್ಟಿಕೊಳ್ಳುತ್ತವೆ. ಸಮಾಜದಲ್ಲಿ ಎಲ್ಲ ಬಗೆಯ ಭಯಂಕರ ದುರಂತಗಳು ಸಂಭವಿಸುತ್ತವೆ.

ಕೌಟುಂಬಿಕ ಹಂತ: ವ್ಯಕ್ತಿಗೂ ಸಮಾಜಕ್ಕೂ ನಿಕಟ ಬಾಂಧವ್ಯವನ್ನು ಬೆಸೆಯುವ ಒಂದು ಅಂಶವೇ ಕುಟುಂಬ. ಧಾರ್ಮಿಕ ಕ್ಷೇತ್ರದಲ್ಲಿ ಇದು ಒಂದು ಪರಂಪರೆಯನ್ನು ಮುಂದುವರೆಸುವಲ್ಲಿ ಹಾಗೂ ಒಂದು ಮಾರ್ಗವನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಕುಟುಂಬಗಳು ಆಧ್ಯಾತ್ಮಿಕ, ತಾತ್ತ್ವಿಕ ಹಂತದ ಧರ್ಮವನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆಯೇ, ಕಲುಷಿತ ಸಾಮಾಜಿಕ ಪರಿಸರದಲ್ಲಿ ಮತಾಂಧ ದೃಷ್ಟಿಯನ್ನು ಹಬ್ಬಿಸುವಲ್ಲೂ ಕ್ರಿಯಾಶೀಲವಾಗುತ್ತದೆ. ಭಾರತದಂತಹ ದೇಶ, ಸಂಸ್ಕೃತಿಗಳಲ್ಲಿ ಕೌಟುಂಬಿಕ ಪರಿಸರವು ವೈಯಕ್ತಿಕ ದೃಷ್ಟಿ ಹಾಗೂ ಹಿತಾಸಕ್ತಿಗಳನ್ನು ಮೀರಿ ಕೆಲಸ ಮಾಡುತ್ತದೆ. ಆದರೆ ಕುಟುಂಬಗಳು ಜಾತಿಗೆ ಸಂಬಂಧಿಸಿದ ಪದ್ಧತಿ, ಪರಂಪರೆಗಳಿಗೆ ಬದ್ಧವಾಗಿರುವುದರಿಂದ, ಅವುಗಳ ಪ್ರತ್ಯೇಕ ಅಸ್ತಿತ್ವ ಎದ್ದು ಕಾಣಿಸುವುದಿಲ್ಲ; ಜಾತಿಗಳೇ ಪ್ರಧಾನ ಪಾತ್ರ ವಹಿಸುತ್ತವೆ.

ಸಾಮಾಜಿಕ ಹಂತ: ಮಾನವ ಜೀವನದಲ್ಲಿ 'ಸಮಾಜ'ವೆನ್ನುವ ಪರಿಕಲ್ಪನೆಯೇ ಅತ್ಯಂತ ವಿಶಿಷ್ಟವಾದದು. ವ್ಯಕ್ತಿ-ವ್ಯಕ್ತಿಗಳ ಸಂಬಂಧವನ್ನೂ, ಕೌಟುಂಬಿಕ ಬಾಂಧವ್ಯವನ್ನೂ, ಅದೇರೀತಿ ಸಾಂಸ್ಕೃತಿಕ ಒಡನಾಟ ಹಾಗೂ ಕೊಡು-ಕೊಳ್ಳುವಿಕೆಯನ್ನೂ ಅವಲಂಬಿಸಿ ಬೆಳೆಯುವ ಸಮಾಜದ ಚಟುವಟಿಕೆಗಳು ಅತ್ಯಂತ ಸಂಕೀರ್ಣವಾದ, ವೈವಿಧ್ಯಮಯವಾದ ಹಾಗೂ ಪ್ರಭಾವಶಾಲಿಯಾದ ವಲಯಗಳನ್ನು ಸೃಷ್ಟಿಸುತ್ತವೆ. ಇಂಥ ವಲಯಗಳಲ್ಲಿ ಜಾತಿ, ಆರ್ಥಿಕ ಅಂತಸ್ತು, ಧಾರ್ಮಿಕ ಪಂಥಗಳು ಪ್ರಮುಖವಾದವುಗಳು. ಧರ್ಮದ ಮೂಲಸ್ವರೂಪ ಇಲ್ಲಿ ಸಾಮೂಹಿಕ, ಸಾಮಾಜಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಇದರ ಪರಿಣಾಮವಾಗಿ ಅನುಭವ ಮೂಲವಾದ ಆಧ್ಯಾತ್ಮಿಕತೆಗಿಂತ ಆಚರಣಾತ್ಮಕವಾದ ಸಂಕೇತ, ಕ್ರಿಯಾವಿಧಿ ಹಾಗೂ ಸಂಪ್ರದಾಯಗಳು ಪ್ರಧಾನವಾಗುತ್ತವೆ. ಇವುಗಳೊಂದಿಗೆ ಅನೇಕ ಮೂಢನಂಬಿಕೆ, ಅರ್ಥಹೀನ ವಿಧಿವಿಧಾನಗಳೂ ಸೇರಿಕೊಂಡು 'ಧರ್ಮ'ವನ್ನು ಮರೆಮಾಚುತ್ತವೆ. ಆದರೆ ವೈಯಕ್ತಿಕ ಸಾಧನೆ, ತಿಳುವಳಿಕೆಗಳ ಬಲದಿಂದ ಆಧ್ಯಾತ್ಮಿಕತೆಯ ಹಂತವೂ ಇದರ ಒಳಪ್ರವಾಹವಾಗಿ ಹರಿಯುತ್ತಿರುತ್ತದೆ. ಅಂತೆಯೇ, ಮತಾಂಧತೆ ವ್ಯಾಪಕಗೊಳ್ಳುವ ಪ್ರಮುಖ ಸಂದರ್ಭವೂ ಇದೇ ಆಗಿದೆ.

ರಾಜಕೀಯ ಹಂತ: ಪ್ರಪಂಚದ ಇತಿಹಾಸವನ್ನು ಗಮನಿಸಿದಾಗ, ಮಾನವಜೀವನದಲ್ಲಿ ಅತ್ಯಂತ ಪ್ರಬಲವಾದ ಚಲನೆಗಳನ್ನು ಉಂಟುಮಾಡುವ ರಾಜಕಾರಣದಲ್ಲಿ ಧರ್ಮ ಅತ್ಯಂತ ಪ್ರಧಾನ ಪಾತ್ರ ವಹಿಸಿದ ಸಂದರ್ಭಗಳು ಅನೇಕ. ಭಾರತದಲ್ಲಿ ವೈದಿಕ, ಬೌದ್ಧ, ಜೈನ, ಹಾಗೂ ಇಸ್ಲಾಂ ಧರ್ಮಗಳು ರಾಜಕೀಯ ಸ್ಥಿತಿಗಳನ್ನು ನಿಯಂತ್ರಿಸಿದ ಉದಾಹರಣೆಗಳಿವೆ. ಅಂತೆಯೇ ಪಶ್ಚಿಮದಲ್ಲಿ ಕ್ರೈಸ್ತ, ಯೆಹೂದಿ ಹಾಗೂ ಇಸ್ಲಾಂ ಧರ್ಮಗಳು ಹಲವು ದೇಶಗಳ ರಾಜಕೀಯ ಬದಲಾವಣೆಗಳಲ್ಲಿ ಕೆಲಸ ಮಾಡಿವೆ. ಧರ್ಮಪ್ರಚಾರಕ್ಕೂ, ಆಧ್ಯಾತ್ಮಿಕ ವಿಕಾಸಕ್ಕೂ ಅವು ನೆರವಾಗಿರುವಷ್ಟೇ ಧರ್ಮಯುದ್ಧ ಹಾಗೂ ರಾಜಕೀಯ ಕಲಹಗಳಿಗೂ ಕಾರಣವಾಗಿವೆ. ಇಲ್ಲಿ ಧರ್ಮದೊಂದಿಗೆ ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸೆಳೆತಗಳೂ ಸೇರಿಕೊಂಡಿರುವುದು, ಧರ್ಮವು ತನ್ನ ನೈಜಸ್ವರೂಪ ಕಳೆದುಕೊಳ್ಳುವಂತೆ ಮಾಡುತ್ತದೆ. ಇಂದಿಗೂ ರಾಜಕೀಯ ಹಂತದಲ್ಲಿ ಧರ್ಮ ಪ್ರಭಾವ ಶಾಲಿಯಾಗಿರುವುದಕ್ಕೆ ಅದರ ಆಧ್ಯಾತ್ಮಿಕ ಸ್ವರೂಪಕ್ಕಿಂತ, ವಿವಿಧ ನೆಲೆಗಳಿಂದ ಉಂಟಾಗುವ ಸೆಳೆತಗಳೇ ಕಾರಣವಾಗಿರುವುದು ಎಲ್ಲ ದುರಂತಗಳ ಮೂಲ ಎನ್ನಬೇಕು.

೪. ವಿಜ್ಞಾನ - ಆಧ್ಯಾತ್ಮಿಕತೆ

ಈ ಎಲ್ಲ ಬದಲಾವಣೆಗಳ ನಡುವೆ ಧರ್ಮಶ್ರದ್ಧೆ, ಧಾರ್ಮಿಕ ನಿಷ್ಠೆ ಇವುಗಳನ್ನು ಅಸಾಧಾರಣ ರೀತಿಯಲ್ಲಿ ಪ್ರಭಾವಗೊಳಿಸಿದ ಒಂದು ಕ್ಷೇತ್ರವೇ ವಿಜ್ಞಾನ. ಅದು ಧರ್ಮಕ್ಕೆ ಹಾನಿ ಮಾಡಿರುವುದಕ್ಕಿಂತ, ಧರ್ಮದ ಹಾನಿಕಾರಕವಾದ, ಅರ್ಥಶೂನ್ಯವಾದ ಅಂಶ

ಗಳನ್ನು ನಿವಾರಿಸುವ ಕೆಲಸವನ್ನು ಮಾಡಿ, ಅದಕ್ಕೆ ಉಪಕಾರವನ್ನೇ ಮಾಡಿದಂತಾಗಿದೆ. ತತ್ತ್ವಶಾಸ್ತ್ರ, ವಿಜ್ಞಾನ, ದೇವತಾಶಾಸ್ತ್ರ (theology) ಇವೆಲ್ಲ ಜೊತೆಯಾಗಿ ವಿಕಸನಹೊಂದಿದ ಗ್ರೀಕ್–ರೋಮನ್ ವಿದ್ವಾಂಸರಿಂದ ಆರಂಭಿಸಿ, ಪುನರುತ್ಥಾನ ಹಾಗೂ ವಿವಿಧ ಸಾಮಾಜಿಕ–ರಾಜಕೀಯ ಕ್ರಾಂತಿಗಳ ಮೂಲಕ ವೈಜ್ಞಾನಿಕ ಅನ್ವೇಷಣೆ ಸಾಗಿಬಂತು; ಪಶ್ಚಿಮದಲ್ಲಿ ಧರ್ಮದ ಅನೇಕ ಮೂಢ ನಂಬಿಕೆಗಳನ್ನು ಅದು ಬಯಲು ಮಾಡಿತು. ಅದರ ಪ್ರಭಾವ ಸಹಜವಾಗಿ ಪ್ರಪಂಚದ ಇತರ ದೇಶಗಳಿಗೂ, ಭಾರತಕ್ಕೂ ಹಬ್ಬಿತು. ನೂತನ ವೈಜ್ಞಾನಿಕ ವಿಚಾರಗಳ ಬೆಳಕಿನಲ್ಲಿ ಹೊಸದಾಗಿ ಧರ್ಮವನ್ನು ಅರಿತು ಕೊಳ್ಳುವ ಹಾಗೂ ವಿಶ್ಲೇಷಿಸುವ ಕಾರ್ಯ ಎಲ್ಲ ಧರ್ಮ ಗಳಲ್ಲೂ ನಡೆಯಿತು; ಅದರಲ್ಲೂ ಭಾರತದಲ್ಲಿ ೧೯–೨೦ನೇ ಶತಮಾನದಲ್ಲಿ ನಡೆದ ಧಾರ್ಮಿಕ ಪುನರುತ್ಥಾನ ನೂತನ ಧಾರ್ಮಿಕ ಜಾಗೃತಿಗೆ ಕಾರಣವಾಯಿತು.

ಪಶ್ಚಿಮದಲ್ಲಿ ನಡೆದಂತೆ ಇಲ್ಲೂ ವೈಜ್ಞಾನಿಕ ದೃಷ್ಟಿಯಿಂದ ಧರ್ಮವನ್ನು ಖಂಡಿಸುವ, ಧರ್ಮದ ಅಗತ್ಯವನ್ನೇ ನಿರಾಕರಿಸುವ ಪ್ರವೃತ್ತಿ ಬೆಳೆದುಬಂದರೂ, ಇಲ್ಲಿನ ಸಾಂಸ್ಕೃತಿಕ, ಧಾರ್ಮಿಕ ಪರಂ ಪರೆಯಲ್ಲೇ ಹುಟ್ಟಿಬಂದ ಹಲವು ಮಂದಿ ಧಾರ್ಮಿಕ ಸುಧಾರಕರ ಜೀವನ, ದರ್ಶನಗಳ ಪ್ರಭಾವದ ಮುಂದೆ ಆ ಪ್ರವೃತ್ತಿ ಮಂಕಾ ಯಿತು ಎನ್ನಬೇಕು. ಸಾಮಾಜಿಕ, ಆರ್ಥಿಕ ಧ್ರುವೀಕರಣಗಳು ನಗರ ಜೀವನವನ್ನು ಪ್ರಭಾವಿಸಿದ್ದರ ಪರಿಣಾಮವಾಗಿಯೂ, ಸಮೂಹ ಮಾಧ್ಯಮಗಳ ಪ್ರಭಾವವು ಸಾಂಪ್ರದಾಯಿಕತೆಯನ್ನು ಕುಗ್ಗಿಸಿದ್ದ ರಿಂದಲೂ, ಇತ್ತೀಚೆಗೆ ನಾಸ್ತಿಕ ವಿಚಾರಧಾರೆಗಿಂತ ನಿರಾಸಕ್ತ ಜಡ ಪ್ರವೃತ್ತಿ ಅಧಿಕವಾಗುತ್ತಿದೆಯೆನ್ನಬೇಕು. ಆದರೆ, ವೈಜ್ಞಾನಿಕ ದೃಷ್ಟಿಯ ಅನ್ವೇಷಕರಲ್ಲಿ ಕೆಲವರು ವೈಯಕ್ತಿಕ ಪ್ರಯತ್ನಗಳ ಮೂಲಕ ಧರ್ಮದ ಮೂಲಸ್ವರೂಪವನ್ನು ಕಂಡುಕೊಳ್ಳಲು ಯತ್ನಿಸುತ್ತಿರುವುದು ಅತ್ಯಂತ ಸಮಾಧಾನಕರವಾದ ಅಂಶವಾಗಿದೆ.

೫. ಮುಂದಿನ ನೋಟ

ಸ್ವಾಮಿ ವಿವೇಕಾನಂದರು ಧರ್ಮವನ್ನು ವೈಜ್ಞಾನಿಕ ದೃಷ್ಟಿಕೋನ ದಿಂದ ವಿವರಿಸುವ, ವೈಜ್ಞಾನಿಕವಾಗಿ ಅನುಷ್ಠಾನಗೊಳಿಸುವ ಒಂದು ಮಾರ್ಗವನ್ನು ತೋರಿಸಿಕೊಟ್ಟರು. ನೂರೈವತ್ತು ವರ್ಷಗಳಿಗೆ ಹಿಂದೆ ಆ ದೃಷ್ಟಿಕೋನ ಎಷ್ಟು ನೂತನವಾಗಿತ್ತೋ, ಇಂದಿನ ಸಂದರ್ಭ ದಲ್ಲೂ ಅದು ಅಷ್ಟೇ ನೂತನವಾಗಿದೆ. ಶ್ರೀರಾಮಕೃಷ್ಣರು ಎಲ್ಲ ಧರ್ಮಗಳನ್ನೂ ಅವುಗಳ ಮೂಲಸ್ವರೂಪದಲ್ಲಿ ಅರಿತುಕೊಂಡು, ಅವುಗಳ ತಿರುಳಾದ ಆಧ್ಯಾತ್ಮಿಕ ಅನುಭವವನ್ನೂ ಆಯಾ ವಿಧಾನ ದಲ್ಲಿ ಮಾಡಿಕೊಂಡು, 'ಎಷ್ಟು ಮತಗಳೋ, ಅಷ್ಟು ಪಥಗಳು; ಪ್ರತಿಯೊಂದೂ ಸತ್ಯ' ಎಂದು ಸಾರಿದರು. ಧಾರ್ಮಿಕ ಮತಾಂಧ ತೆಯ ಅಪಾಯವನ್ನು ಕುರಿತು ಎಚ್ಚರಿಸುವ ಕೆಲಸವನ್ನೂ ಅವರು ಮಾಡಿದರು. 'ನನ್ನ ಧರ್ಮವೇ ಸತ್ಯ ಎನ್ನುವುದು ಅಜ್ಞಾನ. ಒಂದು ಧರ್ಮವನ್ನು ಅನುಸರಿಸು; ಆದರೆ ಇತರ ಧರ್ಮವನ್ನು ದೂರ ಬೇಡ' ಎಂದರು ಅವರು. ಸ್ವಾಮಿ ವಿವೇಕಾನಂದರ ವೈಜ್ಞಾನಿಕ ದೃಷ್ಟಿ ಹಾಗೂ ಶ್ರೀರಾಮಕೃಷ್ಣರ ಧರ್ಮಸಾಮರಸ್ಯದ ದೃಷ್ಟಿ – ಇವುಗಳೇ ನಿಜವಾದ ಧರ್ಮವನ್ನು ಅರಸುವವರಿಗೆ ದಾರಿದೀಪವಾಗಿವೆ. ✷

ಸ್ವಾಮಿ ವಿವೇಕಾನಂದರ ಗುರುಶಕ್ತಿ



ಸ್ವಾಮೀಜಿ ತಮ್ಮ ಒಬ್ಬ ಶಿಷ್ಯನಿಗೆ ಹೇಳಿದರು, ''ಯಾರ ದೇಹ, ಮನಸ್ಸು ಪವಿತ್ರವಾಗಿ ದೆಯೋ, ಯಾರಲ್ಲಿ ನಿತ್ಯ–ಅನಿತ್ಯ ವಸ್ತು ವಿವೇಕ ಜ್ಞಾನವಿದೆಯೋ, ಊರ್ಜಿತ ಭಕ್ತಿ ಇದೆಯೋ, ಯಾರು ಧ್ಯಾನಶೀಲನಾಗಿದ್ದಾನೆಯೋ ಅವನಿಗೆ ಮಾತ್ರ ಭಗವತ್ಕೃಪೆಯಾಗುತ್ತದೆ.''

ಸ್ವಾಮೀಜಿ ಸದ್ಗುರುವಾಗಿದ್ದರು, ಸಿದ್ಧಗುರುವಾಗಿದ್ದರು. ಸ್ವಾಮೀಜಿಯವರ ಗುರುಭಾವ ದರ್ಶನೀಯವಾಗಿತ್ತು. ಒಂದು ದಿನ ಅವರು ಸ್ವಾಮಿ ಸ್ವರೂಪಾನಂದರಿಗೆ ಹೇಳಿದರು, ''ನೋಡು, ಸ್ವರೂಪ್, ನಾನು ಯಾರ ತಲೆಯ ಮೇಲೆ ಕೈ ಇಟ್ಟಿದ್ದೇನೊ, ಅವರು ಚಿಂತಿಸಬೇಕಾ ಗಿಲ್ಲ.'' ಇನ್ನೊಮ್ಮೆ ಸ್ವಾಮೀಜಿ, ''ನನ್ನ ಶಿಷ್ಯರು ಸಾವಿರ ಸಲ ನರಕಕ್ಕೆ ಹೋದರೆ, ನಾನು ಅವ ರನ್ನು ಸಾವಿರ ಸಲ ನರಕದಿಂದ ಮೇಲೆತ್ತುತ್ತೇನೆ. ಇದು ಸತ್ಯವಲ್ಲದಿದ್ದರೆ ಶ್ರೀರಾಮಕೃಷ್ಣರೂ ಸತ್ಯವಲ್ಲ'' ಎಂದಿದ್ದರು.

ಸ್ವಾಮೀಜಿಯವರ ಗುರುಶಕ್ತಿಯನ್ನು ಕಂಡು ಅವರ ಶಿಷ್ಯರು ಬೆರಗಾಗಿದ್ದರು.ಅವರ ದೈವೀ ಶಕ್ತಿ ಅವರ ಶಿಷ್ಯರಿಗೂ ಹರಿದು, ಅವರನ್ನು ಮಹಾತ್ಮರನ್ನಾಗಿಸಿತು. ಸ್ವಾಮೀಜಿಯವರ ಶಕ್ತಿ ಅವರ ಶಿಷ್ಯರಿಗಷ್ಟೇ ಸೀಮಿತವಾಯಿತೆ? ಇಲ್ಲ, ಅದು ಸಾಧ್ಯವಿಲ್ಲ. ಸ್ವಾಮೀಜಿಯವರದು ದೇಶಕಾಲಾತೀತ ವ್ಯಕ್ತಿತ್ವ. ಆದ್ದರಿಂದ ವಿಶ್ವದಾದ್ಯಂತ ಎಲ್ಲೆಡೆ, ಎಲ್ಲರೂ ಅವರ ವಿಚಾರ, ಚಿಂತನೆ–ಬೋಧನೆಗಳಿಂದ ಪ್ರಭಾವಿತರಾಗಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ; ರೂಪಿಸಿಕೊಳ್ಳುತ್ತಿದ್ದಾರೆ. ***'ನೌಮಿ ಗುರು ವಿವೇಕಾನಂದಂ...'***

(ಮೂಲ: ಸ್ವಾಮಿ ಚೇತನಾನಂದರ ಇಂಗ್ಲಿಷ್ ಲೇಖನ, 'Naumi Guru Vivekanandam', ವೇದಾಂತ ಕೇಸರಿ, ಡಿಸೆಂಬರ್ ೨೦೧೪; ಸಂಗ್ರಹ–ಅನುವಾದ: ಮಾತಾ ತ್ಯಾಗಮಯೀ)

ಗುರುಕೃಪೆ

ಸ್ವಾಮಿ ಕರುಣಾಕರಾನಂದ



ನಮ್ಮ ಪರಂಪರೆಯಲ್ಲಿ ಗುರುವಿಗಿರುವ ಸ್ಥಾನ ತುಂಬ ದೊಡ್ಡದು. ಯಾವುದೇ ಮಹತ್ತರ ಸಾಧನೆಗೆ ಗುರುಕೃಪೆ ಅನಿವಾರ್ಯ. ಕೆಲವು ಪ್ರಸಿದ್ಧ ಕಥಾನಕಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ನಿರೂಪಿಸಿರುವ ಸ್ವಾಮೀಜಿಯವರು ಸಂಸ್ಕೃತ, ದರ್ಶನ ಮತ್ತು ವೇದಾಂತ ವಿಷಯಗಳಲ್ಲಿ ಆಳವಾದ ಅಧ್ಯಯನ ಮಾಡಿದ್ದಾರೆ. ಈಗ ಅವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಆಹ್! ಈ ಹೆಸರು ಸಾಧಕನ ಮನಸ್ಸಿನಲ್ಲಿ ಒಮ್ಮೆಲೆ ತಂದೆಯಲ್ಲಿನ ರಕ್ಷಣೆ, ತಾಯಿಯಲ್ಲಿನ ಪ್ರೀತಿ, ಚೈತನ್ಯಸ್ವರೂಪಿಯಾದ ಭಗವಂತನನ್ನು ನೆನಪಿಗೆ ತಂದುಕೊಡುತ್ತದೆ! ಶಂಕರರಂತೂ ಸದ್ಗುರುವಿನ ವರ್ಣನೆ ಮಾಡುವಾಗ ತಮ್ಮ ***ಶತಶ್ಲೋಕೀ*** ಎಂಬ ಗ್ರಂಥದಲ್ಲಿ ಹೀಗೆ ಉದ್ಗರಿಸಿದ್ದಾರೆ: ''**ದೃಷ್ಟಾಂತೋ ನೈವ ದೃಷ್ಟಃ ತ್ರಿಭುವನಜಠರೇ ಸದ್ಗುರೋರ್ಜ್ಞಾನದಾತುಃ ಸ್ಪರ್ಶಃ ಚೇತ್ ತತ್ರ ಕಲ್ಪ್ಯಃ ಸ ನಯತಿ ಯದಹೋ ಸ್ವರ್ಣತಾಮಶ್ಮಸಾರಮ್ । ನ ಸ್ಪರ್ಶತ್ವಂ ತಥಾಪಿ ಶ್ರಿತ ಚರಣಯುಗೇ ಸದ್ಗುರುಃ ಸ್ವೀಯಶಿಷ್ಯೇ ಸ್ವೀಯಂ ಸಾಮ್ಯಂ ವಿಧತ್ತೇ ಭವತಿ ನಿರುಪಮಸ್ತೇನ ವಾ ಲೌಕಿಕೋಽಪಿ॥**''– 'ಜ್ಞಾನವನ್ನು ನೀಡುವ ಸದ್ಗುರುವಿನ ವಿಷಯದಲ್ಲಿ ಕೊಡಲು ಮೂರೂ ಲೋಕಗಳಲ್ಲಿ ಯಾವ ದೃಷ್ಟಾಂತವೂ ಸಿಗುವುದಿಲ್ಲ. ಯಾವುದೇ ಲೋಹವನ್ನು ಚಿನ್ನವನ್ನಾಗಿಸುವ ಸ್ಪರ್ಶಮಣಿಯನ್ನು ದೃಷ್ಟಾಂತವಾಗಿ ಕೊಡೋಣವೆಂದರೆ, ಆ ಸ್ಪರ್ಶಮಣಿಯೂ ಯಾವ ಲೋಹವನ್ನು ತನ್ನಂತೆಯೆ ಇನ್ನೊಂದು ಸ್ಪರ್ಶಮಣಿಯನ್ನಾಗಿಸದು. ಆದರೆ, ಗುರುವು ತನ್ನ ಪಾದಗಳಲ್ಲಿ ಶರಣಾಗತನಾದ ತನ್ನ ಶಿಷ್ಯನನ್ನು ತನ್ನಂತೆಯೇ ಇನ್ನೊಬ್ಬ ಸದ್ಗುರುವನ್ನಾಗಿಯೇ ಮಾಡಿಬಿಡುತ್ತಾನಾದ್ದರಿಂದ ಆತನನ್ನು ಯಾವುದಕ್ಕೂ ಹೋಲಿಸಲಾಗದು ಹಾಗೂ ಅದರಿಂದ ಆತನು ಅಲೌಕಿಕನೂ ಆಗಿಬಿಡುವನು!' ಬ್ರಹ್ಮಾತ್ಮೈಕ್ಯದ ಸ್ವರೂಪ ಜ್ಞಾನವನ್ನು ಬೋಧಿಸಿ ಯೋಗ್ಯ ಸಾಧಕನಿಗೆ ಅನೇಕ ಜನ್ಮಗಳ ಭ್ರಾಂತಿಯಿಂದ ಬಿಡುಗಡೆ ಮಾಡಿಸಿದಾಗ ಆ ಶಿಷ್ಯನಿಗೆ ಆಗುವ ಆನಂದ, ಕೃತಾರ್ಥತೆ, ಕೃತಜ್ಞತೆ ಹಾಗೂ ಅವುಗಳನ್ನು ಆತ ವ್ಯಕ್ತಪಡಿಸುವ ರೀತಿಯನ್ನು ***ಪ್ರಶ್ನೋಪನಿಷತ್ತಿನ*** ಕೊನೆಯ ಮಂತ್ರದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ಸುಕೇಶಾದಿ ಶಿಷ್ಯರು ಗುರು ಪಿಪ್ಪಲಾದನಿಂದ ಸಮ್ಯಗ್ ಜ್ಞಾನವನ್ನು ಪಡೆದು ಅವರನ್ನು ಪೂಜಿಸಿ ಹೇಳುತ್ತಾರೆ, ''**ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ ಪರಂ ಪಾರಂ ತಾರಯಸೀತಿ**'' – ''ನೀವು ನಮ್ಮ ತಂದೆ. ಏಕೆಂದರೆ ನೀವು ನಮ್ಮನ್ನು ದಡವೇ ಇಲ್ಲದ ಮಹಾ ಅವಿದ್ಯೆಯೆಂಬ ಸಾಗರದಿಂದ ಮತ್ತೆ ಹಿಂತಿರುಗಿ ಬರದ ಬ್ರಹ್ಮಪದಕ್ಕೆ ದಾಟಿಸಿರುವಿರಿ.'' ಉಪನಿಷತ್ತುಗಳಲ್ಲಿ ಗುರುವಿನ ಮಾರ್ಗದರ್ಶನವಿಲ್ಲದೆ ಆತ್ಮಜ್ಞಾನ ಸಿದ್ಧಿಸದು ಎಂಬುದಾಗಿಯೇ ಹೇಳಲಾಗಿದೆ: ''**ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ**'' *(ಕಠ., ೧.೨.೮)* 'ಆತ್ಮಜ್ಞಾನಿಯಾದ ಗುರುವಲ್ಲದೆ ಬೇರಾರಿಂದಲೂ ಆತ್ಮನನ್ನು ತಿಳಿಸಿಕೊಡಲಾಗುವುದಿಲ್ಲ'; ''**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್...**'' *(ಮುಂಡಕ., ೧.೨.೧೨)* 'ಆತ್ಮತತ್ತ್ವವನ್ನು ಅರಿತುಕೊಳ್ಳಲು ಆ ಜಿಜ್ಞಾಸುವು ಗುರುವನ್ನೇ ಬಳಿಸಾರಬೇಕು.'

ಗುರುವು ಬೇರೆಯಲ್ಲ, ಅವರ ಕೃಪೆ ಬೇರೆಯಲ್ಲ. ಅವರು ಕೃಪಾಸ್ವರೂಪರೆ. ಗುರುವಿನ ಕೃಪೆಯೂ ಒಮ್ಮೆ ಕಾಠಿನ್ಯವನ್ನು ತೋರುತ್ತ, ಇನ್ನೊಮ್ಮೆ ಪ್ರೀತಿಯ ಪ್ರವಾಹವನ್ನೇ ಹರಿಸುತ್ತ, ಶಿಷ್ಯನ ಜೀವನದಲ್ಲಿ ಆಧ್ಯಾತ್ಮಿಕ ಬೆಳಕನ್ನು ನೀಡುತ್ತ ಅನೇಕ ಬಗೆಯಾಗಿ ಪ್ರಕಟವಾಗುತ್ತದೆ. ಆ ಕೃಪೆಯನ್ನು ಅರ್ಥಮಾಡಿಕೊಂಡು, ತನ್ನದಾಗಿಸಿಕೊಳ್ಳಬೇಕಾದರೆ ಶಿಷ್ಯನು ತಾನು ಸಂಪೂರ್ಣವಾಗಿ ಗುರುವಿಗೆ ಶರಣಾಗಬೇಕಾಗುತ್ತದೆ. ಆ ಶರಣಾಗತಿಯೆನ್ನುವುದೂ ಒಂದು ದೊಡ್ಡ ಸಾಧನೆ. ಗುರುವಿನ ಸತ್ಸಂಗದಲ್ಲಿದ್ದು ಅವರ ಶುಶ್ರೂಷೆಯನ್ನು ನಿಷ್ಠೆಯಿಂದ, ನಿರಹಂಭಾವನೆಯಿಂದ ಮಾಡಿಕೊಂಡಿದ್ದರೆ ಶಿಷ್ಯನ ಆಧ್ಯಾತ್ಮಿಕ ಜಾಗೃತಿ ಶೀಘ್ರವಾಗುವುದು ನಮಗೆ ಇತಿಹಾಸದಲ್ಲಿ ಕಂಡುಬರುತ್ತದೆ. ಮಹಾಭಾರತದಲ್ಲಿ (ಆದಿಪರ್ವದ ಪೌಷ್ಯಪರ್ವ) ಆರುಣಿಯೆಂಬ ಶಿಷ್ಯ ಆಯೋದ ಧೌಮ್ಯರ ಶುಶ್ರೂಷೆಯನ್ನು ಮಾಡಿದ ವಿವರ ಸಿಗುತ್ತದೆ. ಒಂದು ದಿನ ಪಾಂಚಾಲದ ಆರುಣಿಗೆ ಗದ್ದೆಗೆ ಹೋಗಿ, ಒಡೆದು ಹೋದ ಕಟ್ಟೆಯನ್ನು ಕಟ್ಟಿ, ನೀರು ಗದ್ದೆಯಲ್ಲಿಯೇ ನಿಲ್ಲುವಂತೆ ಮಾಡಲು ಗುರುಗಳು ಆಜ್ಞೆಯಿತ್ತರು. ಗುರುವಿನಾಜ್ಞೆಯಂತೆ ಗದ್ದೆಗೆ ಬಂದು, ಒಡೆದ ಕಟ್ಟೆಯನ್ನು ಕಟ್ಟಿ, ನೀರು ನಿಲ್ಲಿಸಲು ಪ್ರಯತ್ನಿಸಿದ ಆರುಣಿ. ಏನೂ ಮಾಡಿದರೂ ನೀರು ನಿಲ್ಲುತ್ತಿಲ್ಲ. ಕೊನೆಗೆ ಒಡೆದ ಜಾಗದಲ್ಲಿ ತಾನೇ ಅದರ ತಡೆಗೋಡೆಯಾಗಿ ಮಲಗಿಬಿಟ್ಟ! ಈ ಕಡೆ,

ತನ್ನ ಪ್ರಿಯ ಶಿಷ್ಯನು ಎಷ್ಟು ಹೊತ್ತಾದರೂ ಬರದೆ ಇರುವುದನ್ನು ಗಮನಿಸಿದ ಧೌಮ್ಯರು ಇತರ ಶಿಷ್ಯರೊಂದಿಗೆ ಅಲ್ಲಿಗೆ ಬಂದು ಕೂಗಿದಾಗ, ತನ್ನ ಮೈಮೇಲಿದ್ದ ಕೆಸರನ್ನು ಕೊಡವಿ ಮೇಲೆದ್ದ ಶಿಷ್ಯನನ್ನು ನೋಡಿದರು. ಆತನ ಗುರುಭಕ್ತಿಯನ್ನು ಅನುಮೋದಿಸಿ 'ಆರುಣಿ, ನೀನು ಕಟ್ಟೆಯನ್ನು ಒಡೆದು ಮೇಲೆದ್ದದ್ದರಿಂದ ನೀನು ಉದ್ದಾಲಕನೆಂದು ಹೆಸರು ಪಡೆಯುವೆ. ನೀನು ನನ್ನ ಆಜ್ಞೆಯನ್ನು ಪಾಲಿಸಿದ್ದರಿಂದ ನಿನಗೆ ಕಲ್ಯಾಣವಾಗಲಿ. ಎಲ್ಲ ವೇದ ಹಾಗೂ ಧರ್ಮಶಾಸ್ತ್ರಗಳ ರಹಸ್ಯಗಳು ನಿನ್ನ ಬುದ್ಧಿಯಲ್ಲಿ ತನ್ನಿಂತಾನೇ ಸ್ಫುರಿಸಲಿ' ಎಂದು ಆಶೀರ್ವದಿಸಿದರು.

ಅದೇ ರೀತಿಯಲ್ಲಿ ಉಪಮನ್ಯು ಎಂಬ ಇನ್ನೊಬ್ಬ ಶಿಷ್ಯನೂ ಗುರುಶುಶ್ರೂಷೆಯಿಂದ ಜ್ಞಾನವನ್ನು ಪಡೆದುಕೊಂಡನು. ಧೌಮ್ಯರು ಅವನಿಗೆ ಆಶ್ರಮದ ಹಸುಗಳನ್ನು ಪ್ರತಿದಿನವೂ ಮೇಯಿಸಿಕೊಂಡು ಬರಲು ಆಜ್ಞೆಯಿತ್ತರು. ಪ್ರತಿದಿನವೂ ಬೆಳಿಗ್ಗೆ ಹಸುಗಳನ್ನು ಹೊಡೆದುಕೊಂಡು ಹೋಗಿ ಸಾಯಂಕಾಲ ಗುರುವಿನ ಮನೆಗೆ ಬಂದು ನಿಂತುಕೊಂಡು ಅವರನ್ನು ನಮಸ್ಕರಿಸುತ್ತಿದ್ದ. ಗುರು ನೋಡುತ್ತಿದ್ದರು, ಶಿಷ್ಯನು ದಷ್ಟ-ಪುಷ್ಟವಾಗಿ ಬೆಳೆಯುತ್ತಿದ್ದ. ಅವರು ಅವನನ್ನು ಕೇಳಿದರು, ''ಮಗು, ನೀನು ಹೇಗೆ ಜೀವನ ನಡೆಸುತ್ತಿದ್ದಿಯೆ? ದಷ್ಟ-ಪುಷ್ಟವಾಗಿರುವೆ?'' ''ನಾನು ಭಿಕ್ಷೆ ಬೇಡಿ ಬಂದದ್ದರಿಂದ ಜೀವನ ನಡೆಸುತ್ತಿದ್ದೇನೆ, ಗುರುಗಳೆ'' ಎಂದನು ಉಪಮನ್ಯು. ''ನನಗೆ ಮೊದಲು ಅದನ್ನು ಅರ್ಪಿಸದೆ ನೀನು ಭಿಕ್ಷೆಯನ್ನು ಉಪಯೋಗಿಸಬಾರದಪ್ಪ, ಮಗು'' ಎಂದರು ಧೌಮ್ಯರು. ''ಹಾಗೆಯೇ ಆಗಲಿ ಗುರುಗಳೆ'' ಎಂದು ಉಪಮನ್ಯುವು ಪ್ರತಿದಿನವೂ ಭಿಕ್ಷೆ ಬೇಡಿ ಗುರುಗಳ ಮುಂದಿಡುತ್ತಿದ್ದ. ಗುರುಗಳು ಅವನು ತಂದ ಎಲ್ಲ ಭಿಕ್ಷೆಯನ್ನು ತಾವೇ ಸ್ವೀಕರಿಸಿಬಿಡುತ್ತಿದ್ದರು. ಅವನಿಗೇನೂ ಉಳಿಸುತ್ತಿರಲಿಲ್ಲ. ಉಪಮನ್ಯುವು ಪುನಃ ಹಿಂದಿನಂತೆ ಹಸುಗಳ ರಕ್ಷಣೆಯಲ್ಲಿ ನಿರತನಾದ. ಸ್ವಲ್ಪ ದಿವಸಗಳ ನಂತರ ತನ್ನ ಮುಂದೆ ನಿಂತು ನಮಸ್ಕರಿಸುತ್ತಿರುವ ಶಿಷ್ಯನು ಹಾಗೆಯೇ ದಷ್ಟ-ಪುಷ್ಟವಾಗಿರುವುದನ್ನು ನೋಡಿದ ಗುರುಗಳು ಹಿಂದಿನಂತೆಯೆ ಅವನನ್ನು ಪ್ರಶ್ನಿಸಿದರು. ''ಗುರುಗಳೆ, ನಿಮಗೆ ನಾನು ಭಿಕ್ಷೆ ಬೇಡಿದ್ದನ್ನು ಕೊಟ್ಟು ಮತ್ತೆ ಭಿಕ್ಷೆ ಬೇಡಿ ತಿನ್ನುತ್ತಿದ್ದೆ'' ಎಂದು ಉತ್ತರಿಸಿದನು ಉಪಮನ್ಯು. ಗುರುಗಳು, ''ನೀನು ಹಾಗೆ ಎರಡೆರಡು ಬಾರಿ ಭಿಕ್ಷೆ ಬೇಡಿದರೆ, ಭಿಕ್ಷೆಯಿಂದ ಜೀವನ ನಡೆಸುವ ಬೇರೆಯವರಿಗೆ ಭಿಕ್ಷೆ ಸಿಗದಂತಾಗುತ್ತದೆ. ಹಾಗೆ ಮಾಡಬೇಡ'' ಎಂದರು. ಉಪಮನ್ಯುವು, ಹಾಗೆಯೇ ಆಗಲೆಂದು ಪುನಃ ಹೊರಟು ಹೋದನು. ಮತ್ತೆ ಕೆಲವು ಕಳೆದ ಮೇಲೆ ಗುರುವು ಅವನನ್ನು ನೋಡಲು, ಅವನ ದೇಹ ಎಂದಿನಂತೆಯೆ ಇದ್ದದ್ದನ್ನು ಕಂಡು ಮರುಪ್ರಶ್ನೆ ಮಾಡಲು, ತಾನು ಹಸುಗಳ ಹಾಲು ಕುಡಿದು ಜೀವನ ನಿರ್ವಾಹ ಮಾಡುತ್ತಿದ್ದೇನೆ ಎಂದನು. ತಾನು ಹಾಗೆ ಆಜ್ಞೆ ನೀಡದ್ದರಿಂದ ಉಪಮನ್ಯುವು ಹಾಗೆ ಮಾಡಬಾರದೆಂದಾಗ ಉಪಮನ್ಯುವು ಹಾಗೆಯೇ ಆಗಲೆಂದು ಹೇಳಿ ಪುನಃ ಹಸುಗಳ ರಕ್ಷಣೆಯಲ್ಲಿ ನಿರತನಾದನು. ಇನ್ನೂ ಸ್ವಲ್ಪ ದಿನ ಬಿಟ್ಟು ನೋಡಲು ಶಿಷ್ಯನ ಆರೋಗ್ಯವು ಹಾಗೆಯೇ ಇತ್ತು. ಆಶ್ಚರ್ಯದಿಂದ ಗುರು ಪ್ರಶ್ನಿಸಲು, ''ಇದೀಗ ತಾನು ಕರುಗಳ ಬಾಯಿಯಲ್ಲಿ ಇದ್ದ ಹಾಲಿನ ನೊರೆಯನ್ನು ಸೇವಿಸಿಯೇ ಜೀವಿಸುತ್ತಿದ್ದೇನೆ'' ಎಂದು ಶಿಷ್ಯ ಉತ್ತರಿಸಿದನು. ''ನೋಡು ಈ ಕರುಗಳು ಉತ್ತಮ ಸ್ವಭಾವದವುಗಳು. ಆದ್ದರಿಂದ ನಿನ್ನ ಮೇಲೆ ದಯೆಯಿಂದ ಹೆಚ್ಚು ನೊರೆಯನ್ನು ತಾವು ಕುಡಿಯದೆ ಹೊರಹಾಕಿ ಬಿಡುತ್ತವೆ. ನೀನು ಆ ನೊರೆಯನ್ನು ಸೇವಿಸಿ ಅವುಗಳ ಆಹಾರವನ್ನು ಕಿತ್ತುಕೊಳ್ಳುತ್ತಿರುವೆ'' ಎಂದರು ಗುರುಗಳು. ''ಗುರುಗಳೆ, ಇನ್ನು ಮುಂದೆ ಅದನ್ನೂ ಸೇವಿಸುವುದಿಲ್ಲ'' ಎಂದು ಉಪಮನ್ಯುವು ಹೊರಟು ಹೋದನು. ಇದೀಗ ಎಲ್ಲ ಬಗೆಯ ಆಹಾರದಿಂದ ವಂಚಿತನಾದ ಉಪಮನ್ಯುವು ಕಾಡಿನಲ್ಲಿ ಅಲ್ಲಿ-ಇಲ್ಲಿ ಬಿದ್ದ ಎಲೆಗಳನ್ನು ತಿಂದೇ ಜೀವನ ನಡೆಸಲು ಆರಂಭಿಸಿ ದನು. ಒಮ್ಮೆ ಹೀಗೆ ಬಹಳ ಹಸಿವೆಯಿಂದ ಗೊತ್ತಿಲ್ಲದೆ, ಎಕ್ಕದ ಎಲೆಗಳನ್ನು ತಿಂದನು. ಅದರಿಂದ ಕಣ್ಣುಗಳನ್ನು ಕಳೆದುಕೊಂಡನು. ಅಲ್ಲಲ್ಲಿ ದಿಕ್ಕುಗಾಣದೆ ಅಲೆಯುತ್ತಿದ್ದಾಗ ಹಾಳು ಬಾವಿಯೊಂದರಲ್ಲಿ ಬಿದ್ದುಬಿಟ್ಟನು. ಪ್ರತಿದಿನವೂ ತನ್ನ ಬಳಿಗೆ ಬಂದು ನಮಸ್ಕಾರ ಸಲ್ಲಿಸುತ್ತಿದ್ದ ತನ್ನ ಪ್ರಿಯ ಶಿಷ್ಯನು ಸ್ವಲ್ಪ ದಿನಗಳಿಂದ ಏಕೆ ಬರುತ್ತಿಲ್ಲವೆಂದು ಆಲೋಚಿಸಿದ ಗುರುಗಳು 'ನಾನವನ ಆಹಾರವನ್ನೆಲ್ಲ ಕಿತ್ತುಕೊಂಡೆ ನೆಂದು ಭಾವಿಸಿ ನನ್ನ ಮೇಲೆ ಕುಪಿತನಾಗಿರಬೇಕು. ನಾನು ಅವನನ್ನು ಕಂಡು ಸಮಾಧಾನ ಹೇಳಬೇಕು' ಎಂದು ಭಾವಿಸಿದ ಗುರುಗಳು ತಮ್ಮ ಇತರ ಶಿಷ್ಯರೊಂದಿಗೆ ಕಾಡಿನಲ್ಲಿ ಈತನ ಹೆಸರು ಹೇಳುತ್ತ ಕರೆದರು. ಎಲ್ಲೋ ಬಾವಿಯಿಂದ ಒಂದು ಶಬ್ದ ಕೇಳಿಬಂತು. ''ಗುರುಗಳೆ, ಕ್ಷಮಿಸಿ. ಕಣ್ಣು ಕಳೆದುಕೊಂಡು ಈ ಪಾಳು ಬಾವಿಯಲ್ಲಿ ಬಿದ್ದಿದ್ದೇನೆ.'' ಎಲ್ಲರೂ ಆ ಬಾವಿಯ ಬಳಿಗೆ ಬಂದಾಗ ಶಿಷ್ಯನು ನಡೆದದ್ದನ್ನೆಲ್ಲ ತಿಳಿಸಿದನು. ಕರುಣೆಯಿಂದ ಗುರುಗಳು, ''ಮಗು, ಅಶ್ವಿನೀಕುಮಾರರು ದೇವತೆಗಳ ವೈದ್ಯರು. ಅವರನ್ನು ಸ್ಮರಿಸು. ಅವರು ನಿನ್ನ ಕಣ್ಣುಗಳನ್ನು ಸರಿಪಡಿಸುವರು' ಎಂದರು. ಉಪಮನ್ಯುವು ಅವಳಿ ದೇವತೆಗಳ ಸ್ತುತಿ ಮಾಡಿದಾಗ ಅವರು ಪ್ರತ್ಯಕ್ಷರಾಗಿ ಒಂದು ಸಿಹಿಯಾದ ಅಪ್ಪವನ್ನು ತಿನ್ನಲು ಕೊಟ್ಟು, ''ಇದನ್ನು ಸೇವಿಸಿದರೆ ನಿನಗೆ ಕಣ್ಣುಗಳು ಹಿಂತಿರುಗುವುವು'' ಎಂದರು. ''ಗುರುಗಳಿಗೆ ಮೊದಲು ನಿವೇದಿಸದೆ ನಾನು ಏನನ್ನೂ ತಿನ್ನುವುದಿಲ್ಲ'' ಎಂದ ಉಪಮನ್ಯು. ''ಈ ಹಿಂದೆ ನಿನ್ನ ಗುರುವೂ ನಮ್ಮನ್ನು ಸ್ತುತಿಸಿ ಈ ರೀತಿಯ ಸಿಹಿಯಾದ ಅಪ್ಪವನ್ನು ಪಡೆದು ಕೊಂಡನು. ಆದರೆ, ತನ್ನ ಗುರುವಿಗೆ ಮೊದಲು ಕೊಡದೆ ತಾನೇ ತಿಂದನು. ನೀನೂ ನಿನ್ನ ಗುರುವಿನಂತೆ ಮಾಡು'' ಎಂದರು. ಆದರೂ ತಾನು ಗುರುವಿಗೆ ಮೊದಲು ನೀಡದೆ ತಿನ್ನಲಾರೆ ಎಂದು ಉಪಮನ್ಯುವು ಪಟ್ಟು ಹಿಡಿದನು. ಅವನ ಗುರುಭಕ್ತಿಯನ್ನು ಕಂಡು ಪ್ರಸನ್ನರಾದ ಅಶ್ವಿನೀಕುಮಾರರು ಅವನಿಗೆ ಕಣ್ಣುಗಳನ್ನು ನೀಡಿದರು. ಆಯೋದಧೌಮ್ಯರೂ, ''ಮಗು, ನೀನು ಸಕಲ ವೇದ, ಧರ್ಮಶಾಸ್ತ್ರಗಳಲ್ಲಿ ಪಾರಂಗತನಾಗುವೆ'' ಎಂದು ಆಶೀರ್ವದಿಸಿದರು.

ಆಚಾರ್ಯ ಶಂಕರರು ತಮ್ಮ ಶಿಷ್ಯ ಗಿರಿಯ ಮೇಲೆ ಅನುಗ್ರಹ ಮಾಡಿದ ಬಗೆಯೂ ರೋಚಕವಾಗಿದೆ. ಶೃಂಗೇರಿಗೆ ಆಚಾರ್ಯರು ಬಂದಿದ್ದಾಗ ಈ ಶಿಷ್ಯ ಅವರನ್ನು ಆಶ್ರಯಿಸಿದನು. ಮಿತಭಾಷಿ, ಕಾರ್ಯದಲ್ಲಿ ದಕ್ಷತೆ, ಗುರುವಿನ ಆಣತಿಯೇ ತನ್ನ ಜೀವನವೆಂದು ಬಗೆದು ಗುರುಗಳ ಮನಸ್ಸಿನಲ್ಲಿದ್ದುದನ್ನು ಬಾಯಿಯಿಂದ ಹೊರ ಬರುವ ಮೊದಲೇ ಮಾಡುತ್ತಿದ್ದ ಗಿರಿಯ ಮೇಲೆ ಶಂಕರರಿಗೆ ವಿಶೇಷ ಮಮತೆಯಿತ್ತು. ಗುರುವಿನ ಸೇವೆಯೇ ಜೀವನವ್ರತವಾಗಿಟ್ಟು ಕೊಂಡಿದ್ದ ಗಿರಿಯು ಒಮ್ಮೆ ಗುರುಗಳ ಬಟ್ಟೆ ಒಗೆಯುತ್ತ ಪ್ರವಚನಕ್ಕೆ ಬರಲು ತಡವಾಯಿತು. ಎಲ್ಲರೂ ಗಿರಿಯ ಬರವಿಗಾಗಿ ಕಾಯುತ್ತಿದ್ದಾಗ ತಡವಾಗುತ್ತಿದ್ದುದನ್ನು ಗಮನಿಸಿದ ಪದ್ಮಪಾದರು, ತಮ್ಮ ಕಣ್ಣಿನಿಂದಗೋಡೆಯನ್ನು ಸೂಚಿಸುತ್ತ, ''ನಾವು ಕಾಯುತ್ತಿರುವುದಾದರೂ ಯಾರಿಗೆ? ಈ ಗೋಡೆಯಂತಹ ಬುದ್ಧಿಯಿರುವ ಆ ಪೆದ್ದ, ಶಾಸ್ತ್ರಾಧ್ಯಯನಕ್ಕೆ ಅಧಿಕಾರಿಯೇ ಅಲ್ಲ!'' ಎಂದರು. ಈ ಶಿಷ್ಯನ ಹಾಗೂ ಇನ್ನಿತರರ ವ್ಯಂಗ್ಯವನ್ನು ನೋಡಿ, ಗಿರಿಯ ಗುರುಭಕ್ತಿಗೆ ಮೆಚ್ಚಿ ಆತನ ಮೇಲೆ ಅನುಗ್ರಹ ಮಾಡಲು ಶಂಕರರು ತಮ್ಮ ಸಂಕಲ್ಪದಿಂದಷ್ಟೆ ಆತನಲ್ಲಿ ಹದಿನಾಲ್ಕು ವಿದ್ಯೆಗಳೂ ಸ್ಫುರಿಸುವಂತೆ ಹರಸಿದರು. ಅಷ್ಟರಲ್ಲಿಯೆ ಗಿರಿಯು ತೋಟಕವೆಂಬ ವೃತ್ತದಲ್ಲಿ ಸುಂದರವಾದ ಗುರುಸ್ತುತಿ ಮಾಡುತ್ತ ಅಲ್ಲಿಗೆ ಬಂದನು! ಆ ವೃತ್ತದಲ್ಲಿ ಪದ್ಯರಚನೆ ಮಾಡಿ ಗುರುಗಳನ್ನು ಸಂತೋಷಪಡಿಸಿದ ಗಿರಿಯನ್ನು 'ತೋಟಕಾಚಾರ್ಯ' ನೆಂಬ ಹೆಸರಿನಿಂದಲೇ ವಿದ್ವತ್ ಸಮಾಜವು ಸಂಬೋಧಿಸಿತು.

ಗುರುಕೃಪೆ ಯಾವ ರೀತಿಯಲ್ಲಿ ಉಂಟಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಗಾಗ್‌ರೌನ್ ಎಂಬ ನಗರದಲ್ಲಿ ಪೀಪಾ ಎಂಬ ಹೆಸರಿನ ರಾಜನೊಬ್ಬನಿದ್ದ; ಅವನು ದೇವಿಯ ಆದೇಶದಂತೆ ಕಾಶಿಯಲ್ಲಿ ನೆಲೆಸಿದ್ದ ಸ್ವಾಮಿ ರಾಮಾನಂದರ ಆಶ್ರಮಕ್ಕೆ ಭೇಟಿಯಿತ್ತ, ಅಲ್ಲಿ ಹರಿಕೀರ್ತನೆಯಲ್ಲಿ ಪಾಲ್ಗೊಂಡ. ರಾಜನು ದ್ವಾರಪಾಲಕನ ಬಳಿಯಲ್ಲಿ ತಾನು ಸ್ವಾಮಿಗಳ ದರ್ಶನಾಕಾಂಕ್ಷಿಯಾಗಿ ಬಂದಿರುವೆನೆಂದು ತಿಳಿಸಿದ. ದ್ವಾರಪಾಲಕ ಹಿಂತಿರುಗಿ ಬಂದು, ಸ್ವಾಮಿಗಳು ತಮಗೆ ರಾಜನ ಬಳಿ ಯಾವುದೇ ಕೆಲಸವಿಲ್ಲವೆಂದು ತಿಳಿಸಿದ್ದಾರೆ ಎಂಬ ಸಂದೇಶವನ್ನು ನೀಡಿದ. ರಾಜನು ಈ ಸಂದೇಶದ ಮರ್ಮವನ್ನರಿತುಕೊಂಡು, ರಾಜವೈಭವಗಳು ಭಗವತ್‌ಪ್ರಾಪ್ತಿಗೆ ತಡೆಯೆಂಬುದಾಗಿ ಭಾವಿಸಿ ತನ್ನೆಲ್ಲ ಸಂಪತ್ತನ್ನು ಬಡಬಗ್ಗರಿಗೆ ಹಂಚಿ, ಉಟ್ಟ ಬಟ್ಟೆಯಲ್ಲಿ ಸ್ವಾಮಿಗಳ ಬಳಿಗೆ ಬಂದ. ಸ್ವಾಮಿಗಳು ಸೇವಕನ ಬಳಿಯಲ್ಲಿ, ''ಅವನಿಗೆ ಹೋಗಿ ಬಾವಿಯಲ್ಲಿ ಬೀಳುವಂತೆ ಹೇಳು'' ಎಂದುಬಿಟ್ಟರು! ಆ ಆದೇಶವನ್ನು ಕೇಳಿದ ರಾಜನು ಬಹಳ ಪ್ರಸನ್ನನಾಗಿ ಬಾವಿಯಲ್ಲಿ ಬೀಳಲು ಹೋದನು. ಆದರೆ ಸ್ವಾಮಿಗಳ ಸೇವಕರು ಆ ರೀತಿ ಮಾಡದಂತೆ ಅವನನ್ನು ತಡೆದು ನಿಲ್ಲಿಸಿದರು. ರಾಜನ ಇಂತಹ ಅಚಲ ನಿಷ್ಠೆಯನ್ನು ಕಂಡು ಬಹಳ ಸಂತುಷ್ಟರಾದ ರಾಮಾನಂದರು ಅವನನ್ನು ತಮ್ಮ ಶಿಷ್ಯನಾಗಿ ಸ್ವೀಕರಿಸಿದರು. ಅವರ ಸಂಪರ್ಕಕ್ಕೆ ಬಂದ ಪೀಪಾನಲ್ಲಿ ಹರಿಭಕ್ತಿಯು ಪ್ರಜ್ವಲಿಸತೊಡಗಿತು.

ಸಂತ ಏಕನಾಥರ ಗುರುಗಳು ಜನಾರ್ದನ ಪಂತರು, ದತ್ತಾತ್ರೇಯನ ಮಹಾಭಕ್ತರು. ಅವರ ಭಕ್ತಿಗೆ ಮೆಚ್ಚಿ ದತ್ತಾತ್ರೇಯನು ಮಾನವ ಶರೀರದಲ್ಲಿ ಅವರೊಡನೆ ಒಡನಾಟವಾಡುತ್ತಿದ್ದ! ಜನಾರ್ದನ ಪಂತರು ದೌಲತಾಬಾದ್ ಕೋಟೆಯ ಖಿಲ್ಲೇದಾರರಾಗಿದ್ದರು. ಮಹಿಪತಿಯ ***ಭಕ್ತಲೀಲಾಮೃತ*** ದಲ್ಲಿ ಏಕನಾಥರು ಹಾಗೂ ಅವರ ಗುರು ಜನಾರ್ದನ ಪಂತರ ಗುರು-ಶಿಷ್ಯ ಸಂಬಂಧವನ್ನು ವಿವರವಾಗಿಯೆ ಚಿತ್ರಿಸಲಾಗಿದೆ. ಪ್ರತಿ ಶುಕ್ರವಾರ ಅವರು ತಮ್ಮ ಪೂಜೆಯ ಕೋಣೆಯಿಂದ ಹೊರಬರುತ್ತಿರಲಿಲ್ಲ. ಶುಕ್ರವಾರಗಳಂದು ಯಾವ ಅಧಿಕಾರಿಗಳನ್ನೂ ಅವರು ಭೇಟಿ ಮಾಡಬೇಕಿಲ್ಲ ಎಂದು ರಾಜನೇ ಆಜ್ಞೆ ನೀಡಿದ್ದ. ಕೋಟೆಯ ಬಳಿಯಲ್ಲಿ ಗಹನವಾದ ಕಾಡಿನಿಂದ ಕೂಡಿದ ಬೆಟ್ಟವೊಂದಿತ್ತು. ಅದರ ಮೇಲೆ ಸಮತಲ ಪ್ರದೇಶವೊಂದರಲ್ಲಿ ಶುಭ್ರವಾದ ಸರೋವರವಿತ್ತು. ಜನಾರ್ದನರು ಪ್ರತಿ ಶುಕ್ರವಾರ ಆ ಬೆಟ್ಟವನ್ನೇರಿ, ಆ ಸರೋವರದಲ್ಲಿ ಮಿಂದು ತಮ್ಮ ಸಾಧನೆಯನ್ನು ಮಾಡುತ್ತಿದ್ದರು. ದತ್ತಾತ್ರೇಯನು ಆಗ ಅವರಿಗೆ ಅಲ್ಲಿ ಕಾಣಿಸಿಕೊಳ್ಳುತ್ತಿದ್ದನು. ಇಬ್ಬರೂ ಅಲ್ಲಿ ಬಹಳ ಹೊತ್ತು ಆನಂದದಿಂದ ಪರಮಾತ್ಮನ ಸಂಬಂಧವಾಗಿ ಮಾತುಕತೆಯಾಡುತ್ತಿದ್ದರು. ಇದೀಗ ತಾನು ಪಡೆದ ಈ ಭಾಗ್ಯವನ್ನು ಏಕನಾಥನಿಗೂ ನೀಡಬೇಕೆಂದು ಸಂಕಲ್ಪಿಸಿ, ಶುಕ್ರವಾರ ಅವನನ್ನೂ ತಮ್ಮ ಜೊತೆಗೆ ಕರೆದುಕೊಂಡು ಹೋದರು. ದಾರಿಯಲ್ಲಿ, ''ನೋಡು, ದತ್ತಾತ್ರೇಯನು ತನ್ನ ಮಾಯಿಕ ಶರೀರದಿಂದ ವಿಚಿತ್ರವಾಗಿ ಕಾಣಿಸಬಹುದು. ನೀನು ಯಾವಾಗ ಅವನನ್ನು ನೋಡುವೆಯೊ, ಅವನ ಕುರಿತು ಒಂದಿಷ್ಟೂ ನಿನ್ನ ಮನಸ್ಸಿನಲ್ಲಿ ಸಂಶಯವಿರಬಾರದು. ಏಕೆಂದರೆ ಈ ಸ್ಥಳದಲ್ಲಿ ಇನ್ನ್ಯಾವ ಮಾನವನೂ ಬರುವುದಿಲ್ಲ'' ಎಂದು ಗುರುಗಳು ಏಕನಾಥನಿಗೆ ಹೇಳಿದರು. ಅವರು ಸರೋವರದಲ್ಲಿ ಸ್ನಾನ ಮಾಡಿ ತಮ್ಮ ಪೂಜೆ-ಧ್ಯಾನಗಳನ್ನು ಮುಗಿಸಿದರು. ತತ್‌ಕ್ಷಣವೆ ದತ್ತಾತ್ರೇಯನು ಒಬ್ಬ ಮುಸಲ್ಮಾನ ಫಕೀರನ ವೇಷದಲ್ಲಿ ಅವರ ಮುಂದೆ ಕಾಣಿಸಿಕೊಂಡನು! ಅವನ ದೇಹವು ಚರ್ಮದ ಬಟ್ಟೆಯಿಂದ ಹೊದೆಯಲ್ಪಟ್ಟಿತ್ತು. ಅವನ ಕಣ್ಣುಗಳು ದೊಡ್ಡದಾಗಿಯೂ ಕೆಂಪಾಗಿಯೂ ಕಂಡು ಬರುತ್ತಿದ್ದವು! ತನ್ನೊಡನೆ ಹೆಣ್ಣು ನಾಯಿಯಂತೆ ಕಾಣುವ ದೇವಲೋಕದ ಕಾಮಧೇನುವನ್ನು ತಂದಿದ್ದನು! ಜನಾರ್ದನ ಪಂತರೂ ದತ್ತಾತ್ರೇಯನೂ ಬಹಳ ಹೊತ್ತು ಆನಂದದಿಂದ ಮಾತನಾಡಿದರು. ನಂತರ ದತ್ತಾತ್ರೇಯನು ಜನಾರ್ದನನಿಗೆ ತನ್ನ ಭಿಕ್ಷಾಪಾತ್ರೆಯನ್ನು ನೀಡಿ ನಾಯಿಯ ಹಾಲನ್ನು ಕರೆದು ತರಬೇಕೆಂದು ಆಜ್ಞೆ ನೀಡಿದನು. ಒಡನೆ ಜನಾರ್ದನನು ಅದರಂತೆ ಮಾಡಲು ಇಬ್ಬರೂ ಸೇರಿ ಈಗ ದತ್ತಾತ್ರೇಯನು ತಂದಿದ್ದ ಹಳಸಿದ, ಒಣಗಿದಂತಿದ್ದ ರೊಟ್ಟಿಯನ್ನು ಹಾಲಿನಲ್ಲಿ ಅದ್ದಿ ತಿನ್ನತೊಡಗಿದರು! ನಿಜವಾಗಿಯೂ ಅದು ದೇವಲೋಕದ ಮೃಷ್ಟಾನ್ನವಾಗಿದ್ದಿತು! ಊಟವಾದ ನಂತರ ದತ್ತಾತ್ರೇಯ ಮತ್ತು ಜನಾರ್ದನರು ಆ ಪಾತ್ರೆಯಲ್ಲೇ ಕೈತೊಳೆದರು. ದತ್ತಾತ್ರೇಯನು ಏಕನಾಥನ ಗುರುಭಕ್ತಿಯನ್ನು ಪರೀಕ್ಷಿಸಲು, ''ಈ ಪಾತ್ರೆಯನ್ನು ಸರೋವರಕ್ಕೆ ತೆಗೆದು

ಕೊಂಡು ಹೋಗಿ, ತೊಳೆದುಕೊಂಡು ಬಾ'' ಎಂದನು. ಏಕನಾಥನು ಆ ಪಾತ್ರೆಯನ್ನು ತೆಗೆದುಕೊಂಡು ಹೋಗಿ ಅದರಲ್ಲಿದ್ದ ನೀರನ್ನು ಭಕ್ತಿಯಿಂದ ಕುಡಿದುಬಿಟ್ಟನು! ಅವನ ನಿಷ್ಠೆಯನ್ನು ದೂರದಿಂದಲೇ ಗಮನಿಸಿದ ಜನಾರ್ದನ ಪಂತರು ದತ್ತಾತ್ರೇಯನಿಗೆ ಏಕನಾಥನಿಗೆ ದರ್ಶನ ನೀಡಿ ಕೃಪೆ ಮಾಡಬೇಕೆಂದು ಬೇಡಿಕೊಂಡರು. ಏಕನಾಥನು ಅದುವರೆಗೂ ದತ್ತಾತ್ರೇಯನು ಮುಸಲ್ಮಾನನ ವೇಷದಲ್ಲಿದ್ದುದರಿಂದ ಅವನಿಗೆ ನಮಸ್ಕರಿಸಿರಲಿಲ್ಲ. ''ಏಕನಾಥನು ಸಾಮಾನ್ಯ ಬಾಲಕನಲ್ಲ. ಜಗತ್ತನ್ನು ಕಾಪಾಡಲು ಬಂದಿರುವ ವಿಠ್ಠಲನ ಅವತಾರವೇ ಅವನು. ಈತ ಮುಂದೆ ಅನೇಕ ಅಭಂಗಗಳನ್ನು ರಚಿಸಿ ಜನರಲ್ಲಿ ಭಕ್ತಿಯನ್ನು ಜಾಗೃತಗೊಳಿಸುವನು. ಭಾಗವತಕ್ಕೆ ವ್ಯಾಖ್ಯಾನ ಬರೆದು ಅದನ್ನು ಇನ್ನಷ್ಟು ಸ್ಪಷ್ಟಪಡಿಸುವನು. ರಾಮಾಯಣವನ್ನು ಪ್ರಾಕೃತದಲ್ಲಿ ರಚಿಸುವನು'' ಎಂದು ಭವಿಷ್ಯ ನುಡಿದನು ದತ್ತಾತ್ರೇಯ. ಅವನು ಹೀಗೆ ಮಾತನಾಡುತ್ತಿದ್ದಂತೆ ಅವನ ಮುಸಲ್ಮಾನ ರೂಪವು ಮಾಯವಾಗಿ ಆರು ಕೈಗಳ, ನೀಳಗಣ್ಣುಗಳ, ಸುಂದರ ರೂಪವು ಪ್ರಕಟಗೊಂಡಿತು! ನಾಯಿಯ ಜಾಗದಲ್ಲಿ ಈಗ ಕಾಮಧೇನುವು ಕಾಣಿಸಿಕೊಂಡಿತು! ಏಕನಾಥನು ದತ್ತಾತ್ರೇಯನಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿದನು. ದತ್ತಾತ್ರೇಯನು ತನ್ನ ಆರೂ ಕೈಗಳಿಂದ ಏಕನಾಥನನ್ನು ಅಪ್ಪಿಕೊಂಡು ಅವನ ಮುಖವನ್ನು ನೇವರಿಸಿದನು. ಹೀಗೆ ಗುರು ಜನಾರ್ದನ ಪಂತರಿಂದ ಏಕನಾಥರಿಗೆ ದತ್ತಾತ್ರೇಯನ ದರ್ಶನವುಂಟಾಗಿ ಕೃತಾರ್ಥರಾದರು.

ತನ್ನ ಸ್ವಪ್ರಯತ್ನದಿಂದ ಎಷ್ಟು ಸಾಧನೆಗಳನ್ನು ಮಾಡಿದರೂ ಆಧ್ಯಾತ್ಮಿಕ ಜಾಗೃತಿಯಾಗದ ಶಿಷ್ಯನಿಗೆ ಗುರುವು ತನ್ನ ಆಧ್ಯಾತ್ಮಿಕ ಶಕ್ತಿಯನ್ನು ನೋಟದಿಂದಲೊ, ಸಂಕಲ್ಪದಿಂದಲೋ, ಸ್ಪರ್ಶದಿಂದಲೋ ಹರಿಸುತ್ತಾನೆ. ಅದನ್ನು ತಾಂತ್ರಿಕ ಪರಿಭಾಷೆಯಲ್ಲಿ 'ಶಕ್ತಿಪಾತ'ವೆನ್ನುವರು. ಇದೇ ಕೃಪೆ. ಈ ಶಕ್ತಿಪಾತ ರೂಪದ ಕೃಪೆಯು ಪಾತ್ರಾಪಾತ್ರಗಳನ್ನು ಕೂಡ ಲೆಕ್ಕಿಸದು. ***ಮತಂಗಾಗಮ***ಕ್ಕೆ ಬರೆದ ತಮ್ಮ ಟೀಕೆಯಲ್ಲಿ ಅನಿರುದ್ಧನು '**ಸ್ಥಾವರಾಂತಮಪಿ ದೇವಸ್ಯ ಸ್ವರೂಪೋನ್ಮೂಲನಾತ್ಮಿಕಾ। ಶಕ್ತಿಃ ಪತತಿ ಸಾಪೇಕ್ಷಾ ನ ಕ್ವಾಪಿ...॥**' ಎಂದು 'ಶಕ್ತಿಪಾತ'ವು ನಿರಪೇಕ್ಷ ಕೃಪೆಯೆಂಬುದನ್ನು ಸೂಚಿಸಿದ್ದಾನೆ. ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು, ಶ್ರೀಮಾತೆ ಶಾರದಾದೇವಿಯವರು, ರಮಣ ಮಹರ್ಷಿಗಳು ಮೊದಲಾದ ಗುರುಗಳ ಜೀವನದಲ್ಲಿ ಈ ಬಗೆಯ ಕೃಪೆಯನ್ನು ಕಾಣಬಹುದು. ಶಾರದಾದೇವಿಯವರು ಯಾರೇ ಆಗಲಿ ತಮ್ಮಿಂದ ಮಂತ್ರ ದೀಕ್ಷೆಯನ್ನು ತೆಗೆದು ಕೊಂಡಿರಲಿ, 'ಅವರು ನರಕಕ್ಕೆ ಹೋಗುವಂತಾದರೂ ತಾವು ಅವರನ್ನು ಎಳೆದುಕೊಂಡು ಬರುವು'ದಾಗಿ ಆಶ್ವಾಸನೆ ನೀಡಿದ್ದು ಅವರ ಜೀವನಚರಿತ್ರಯಲ್ಲಿ ಕಂಡುಬರುತ್ತದೆ. ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಅನುಭವಗಳನ್ನು ಬಯಸುವವರಿಗೆ ಕಾಳೀಮಾತೆಗೆ ಪ್ರಾರ್ಥನೆ ಮಾಡುವಂತೆ ಹೇಳಿ ಅದ್ಭುತ ದರ್ಶನಗಳನ್ನು ಮಾಡಿಸುತ್ತಿದ್ದುದು ದಾಖಲಾಗಿದೆಯಷ್ಟೆ.

ಗುರುಕೃಪೆಯು ಶಿಷ್ಯನ ಪಾಪರಾಶಿಗಳನ್ನು ತನ್ನದಾಗಿಸಿಕೊಂಡು ಶಿಷ್ಯನು ಅಧೋಗತಿಗೆ ಹೋಗದಂತೆ ತಡೆಯುವ ಶಕ್ತಿಯೂ ಹೌದು. ಒಮ್ಮೆ ಬೇಲೂರು ಮಠಕ್ಕೆ ದೀಕ್ಷೆ ತೆಗೆದುಕೊಳ್ಳಲು ಒಬ್ಬ ಬಂದಿದ್ದ. ಆಧ್ಯಾತ್ಮಿಕ ಶಕ್ತಿಕೋಶಗಳಂತಿದ್ದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಿವಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ಮೂರೂ ಮಂದಿ ಅವನ ಆಂತರ್ಯದಲ್ಲಿದ್ದ ಪಾಪವನ್ನು ನೋಡಿ ಹೆದರಿ ದೀಕ್ಷೆಯನ್ನು ನಿರಾಕರಿಸಿದರು. ಜಯರಾಂಬಾಟಿಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಕಳುಹಿಸಿದರು. ಶ್ರೀಮಾತೆಯವರು ಆ ಭಕ್ತನಿಗೆ ದೀಕ್ಷೆಯನ್ನು ನೀಡಿ ಅಸಹನೀಯ ವೇದನೆಯನ್ನು ಅನುಭವಿಸಿದರು. 'ಪ್ರೀತಿಯ ಮಕ್ಕಳು ಹೊರದೇಶಗಳಿಗೆ ಹೋಗಿ ಎಷ್ಟೋ ಒಳ್ಳೊಳ್ಳೆಯ ವಸ್ತುಗಳನ್ನು ಕಳುಹಿಸಿಕೊಡುತ್ತಾರೆ. ನೋಡು ಕೊನೆಗೂ ರಾಖಾಲ (ಸ್ವಾಮಿ ಬ್ರಹ್ಮಾನಂದರು) ಕಳಿಸಿದ್ದು ಇದನ್ನು!' ಎಂದು ಉದ್ಗರಿಸಿದರು! ಒಮ್ಮೆ ಕೋಯಲ್‌ಪಾರಾದ ಭಕ್ತ ಶ್ರೀಮಾತೆಯವರ ಕಷ್ಟವನ್ನು ಮನಗಂಡು, ''ಅಮ್ಮ, ನಮ್ಮನ್ನೆಲ್ಲ ಮುಟ್ಟುವುದರಿಂದ ನಿಮಗೆ ಇನ್ನಷ್ಟು ಯಾತನೆಯಾಗುವುದಾದರೆ ಅದನ್ನು ನೀವು ತಪ್ಪಿಸುವುದೇ ಒಳಿತು'' ಎಂದಾಗ ಅವರು ಕಳಕಳಿಯಿಂದ, ''ಇಲ್ಲಪ್ಪ, ಹಾಗೆನ್ನಬೇಡ. ನಾವು ಬಂದಿರುವುದೇ ಅದಕ್ಕಾಗಿ. ಜನರ ಪಾಪ-ಸಂಕಟಗಳನ್ನು ಸ್ವೀಕರಿಸದೆ ಹೋದರೆ, ಸ್ವೀಕರಿಸಿ ಅದನ್ನು ಜೀರ್ಣಿಸಿಕೊಳ್ಳದೆ ಹೋದರೆ, ಇನ್ನು ಯಾರು ಮಾಡುತ್ತಾರೆ ಹೇಳು?'' ಎಂದು ಉತ್ತರಿಸುತ್ತಾರೆ ಶ್ರೀಮಾತೆಯವರು. ಸ್ವಾಮಿ ಬ್ರಹ್ಮಾನಂದರ ಒಬ್ಬ ಶಿಷ್ಯರು ಗುರುವಿನ ಶಕ್ತಿಯನ್ನು ಖುದ್ದಾಗಿ ಅನುಭವಿಸುವ ಘಟನೆ ಒದಗಿ ಬಂತು. ಅವರೊಮ್ಮೆ ಎಷ್ಟು ಬಾರಿ ಕೆಟ್ಟದ್ದನ್ನು ಆಲೋಚನೆ ಮಾಡಬೇಕೆಂದು ಬಯಸಿದರೂ, ಗುರುವಿನ ಕೃಪಾಶಕ್ತಿಯಿಂದ ಕೆಟ್ಟದ್ದನ್ನು ಆಲೋಚಿಸಲೇ ಆಗುತ್ತಿರಲಿಲ್ಲವಂತೆ! ಶಿಷ್ಯನು ಯಾವುದೇ ರೀತಿಯಲ್ಲಿ ಆಧ್ಯಾತ್ಮಿಕವಾಗಿ ಪತನ ಹೊಂದದಂತೆ ಗುರುವಿನ ಶಕ್ತಿಯು ಸದಾ ಅವನನ್ನು ಕಾಯುತ್ತಿರುತ್ತದೆ.

ಸಾಧಕನು ತನ್ನ ಸಾಧನೆಯ ಸಮಯದಲ್ಲಿ ತನಗೆ ಸಂಪೂರ್ಣವಾಗಿ ಗುರುಕೃಪೆಯು ಪ್ರಾಪ್ತವಾಗಿದೆಯೆಂದೇ ಶ್ರದ್ಧೆಯಿಂದ ಮುಂದುವರಿಯಬೇಕು. ಶ್ರದ್ಧೆಯೇ ಕೃಪೆಯ ಸಂಪೂರ್ಣ ಫಲವನ್ನು ಅನುಭವಿಸುವಲ್ಲಿ ಸಹಕಾರಿ. ಗುರುವು ತನಗಾಗಿ ಎಂದೂ ಯಾವ ಕರ್ಮವನ್ನೂ ಮಾಡನು. ಎಲ್ಲ ಬಗೆಯಿಂದಲೂ ಅವನ ಮನಸ್ಸು , ಮಾತು ಕೃತಿಗಳೆಲ್ಲವೂ ತನ್ನ ಶಿಷ್ಯರ ಮಂಗಳಕ್ಕಾಗಿಯೆ ಹಗಲೂ ಇರುಳೂ ನಿರತವಾಗಿರುತ್ತವೆ. ಅಂತಹ ಗುರುವಿನ ಪಾದಗಳಲ್ಲಿ ಮನಸ್ಸು ಸಂಪೂರ್ಣವಾಗಿ ಶರಣಾಗಬೇಕು. **ಗುರೋರಂಘ್ರಿ ಪದ್ಮೇ ಮನಶ್ಚೇನ್ನ ಲಗ್ನಂ । ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥** – 'ಗುರುವಿನ ಪಾದಕಮಲಗಳಲ್ಲಿ ಮನಸ್ಸು ಮುಳುಗದಿದ್ದರೆ, ನಮ್ಮ ಯಾವ ಪುಣ್ಯ ಸಮೂಹದ ಬಲದಿಂದ ಏನು ಫಲ?' ಎಂದು ಶಂಕರರು ತಮ್ಮ ಗುರ್ವಷ್ಟಕದಲ್ಲಿ ಸುಂದರವಾಗಿ ಗುರುವಿನ ಶರಣಾಗತಿಯೇ ಜ್ಞಾನ, ಸಂಸಾರನಿವೃತ್ತಿಗೆ ದ್ವಾರವೆನ್ನುತ್ತಾರೆ. ಅಂತಹ ಸದ್ಗುರುವಿನ ಕೃಪೆಯು ನಮ್ಮನ್ನು ಸಂಸಾರದಿಂದ ಮೇಲೆತ್ತಲಿ. ✷

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ-೯

ಬಾಬಾ ಹೇಳತೊಡಗಿದರು: ''೧೪ ವರ್ಷಗಳ ಕಾಲ ನನಗೆ ಹಣದ ಸ್ಪರ್ಶವೇ ಇರಲಿಲ್ಲ. ಗಿರಿ, ವನಗಳಲ್ಲಿ ಸಂಚರಿಸುತ್ತಿದ್ದಾಗ ಒಂದೇ ಒಂದು ರೂಪಾಯಿ ನನ್ನ ಹತ್ತಿರವಿದ್ದರೂ ನನಗೆ ಹಿಂದಿರುಗಲಾಗುತ್ತಿರಲಿಲ್ಲ. ನನ್ನ ಹತ್ತಿರ ಏನೂ ಇಲ್ಲದಿದ್ದರೂ, ದೊಣ್ಣೆಯಿಂದ ಏಟಿನ ಮೇಲೆ ಏಟು ಕೊಟ್ಟು ನನ್ನನ್ನು ಅರೆಜೀವ ಮಾಡಿಬಿಟ್ಟಿದ್ದರು. ಹಣವೇನಾದರೂ ನನ್ನಲ್ಲಿದ್ದಿದ್ದರೆ ಅದೇನು ಮಾಡುತ್ತಿದ್ದರೋ ಊಹಿಸಿ ನೋಡು. (ಕಛ್‌ನಲ್ಲಿ) ಸ್ವಾಮೀಜಿಯನ್ನು ಹುಡುಕುತ್ತಿದ್ದಾಗ ನಾರಾಯಣ ಸರೋವರದ ದಾರಿಯಲ್ಲಿ ಡಕಾಯಿತರ ಕೈಗೆ ಸಿಕ್ಕಿಬಿದ್ದೆ. ಕೊನೆಗೆ ಸ್ವಾಮೀಜಿಯವರನ್ನು ಭೇಟಿಯಾದಾಗ ಅವರು ಎಲ್ಲ ವಿಷಯಗಳನ್ನೂ ಕೇಳಿ ತಿಳಿದರು. ನನ್ನ ಹತ್ತಿರ ಹಣವಿರಲಿಲ್ಲವೆಂದು ತಿಳಿದು ಅವರು, ''ಆದ್ದರಿಂದಲೇ ನಿನ್ನನ್ನು ನಾನು ಅಷ್ಟೊಂದು ಪ್ರೀತಿಸುತ್ತೇನೆ'' ಎಂದರು.

''ಈಗ ಠಾಕೂರರ ಕಾರ್ಯದಲ್ಲಿ ತೊಡಗಿರುವಾಗ, ಒಂದೊಂದು ಕಾಸಿನ ಲೆಕ್ಕವನ್ನೂ ಇಡಬೇಕು, ಇದು public money (ಸಾರ್ವಜನಿಕರ ಹಣ). ಸಾಧುಗಳ ಕೈಗೆ ಕೆಲಸಗಳು ಒದಗಿಬಂದಾಗ, ಅನಾಸಕ್ತ ಕರ್ಮ ಎಂದರೇನೆಂಬುದನ್ನು ಜನರಿಗೆ ಮಾಡಿ ತೋರಿಸಬೇಕು. ಒಂದು ಪೈಸೆ ಬೆಲೆ ಕಡಿಮೆ ಮಾಡಿಸಲು ಅದೆಷ್ಟು ಬಯ್ಯುತ್ತೇನೆ ನಾನು! ನೀವೋ, ಅವರು ಹೇಳಿದಷ್ಟು ಹಣವನ್ನು ಜೇಬಿನಿಂದ ತೆಗೆದು ಕೊಟ್ಟುಬಿಡುತ್ತೀರಿ! ನಾನೇಕೆ ಬಯ್ಯುತ್ತೇನೆ ಎಂದು ನಿಮಗೆ ತಿಳಿಯುವುದಾದರೂ ಹೇಗೆ? ಠಾಕೂರರು ಈ ಸಂಸಾರವನ್ನೆಲ್ಲ ಸೃಷ್ಟಿಸಿರುವಾಗ, ಅದನ್ನು ಹೇಗೆ ನಡೆಸಬೇಕೆಂಬುದನ್ನೂ ಸಂಸಾರಿಗಳು ಇಲ್ಲಿಗೆ ಬಂದು ಕಲಿತುಕೊಳ್ಳಬೇಕು.

''ನಾನು ತಿರುಗಾಡುತ್ತಿದ್ದಾಗ ಬೇಕೆಂದೇ ಅಪಾಯಕಾರಿಯಾದ, ಕಷ್ಟಕರವಾದ ರಸ್ತೆಗಳಲ್ಲಿ ಹೋಗುತ್ತಿದ್ದೆ. ಏಕೆ ಗೊತ್ತೆ? ಮನಸ್ಸಿನಲ್ಲಿ (ಠಾಕೂರರು ಸಹಾಯ ಮಾಡುತ್ತಾರೋ ಇಲ್ಲವೋ ಎಂದು) ಸಂದೇಹ ಉಂಟಾದಾಗಲೆಲ್ಲ ಅವರನ್ನು ಈ ರೀತಿ ಪರೀಕ್ಷಿಸುತ್ತಿದ್ದೆ. ಪ್ರತಿಸಲವೂ ಅವರು ನಗುನಗುತ್ತ ಜಯಶೀಲರಾದರು.

''ಪರ್ವತ ಪ್ರದೇಶದ ಒಂದು ಹಳ್ಳಿಯಲ್ಲಿ ಒಂದು ಸಲ ಗೃಹಸ್ಥರೊಬ್ಬರ ಮನೆಯ ಒಂದು ಕೋಣೆಯಲ್ಲಿ ಆಶ್ರಯ ಪಡೆದೆ. ದನಕರುಗಳೂ ಅದೇ ಕೋಣೆಯಲ್ಲಿದ್ದವು. ರಾತ್ರಿ ಹುಲಿಯೊಂದು ಗರ್ಜಿಸುತ್ತಿತ್ತು – ದನಕರುಗಳು ಭಯದಿಂದ ನಡುಗುತ್ತಿದ್ದವು. ನಾನು ಮೆಲ್ಲನೆ ಎದ್ದು ಮನಸ್ಸಿನಲ್ಲೇ ಅಂದುಕೊಂಡೆ, 'ನಾನು ಸಂನ್ಯಾಸಿ! ನನಗೆ ಪ್ರಾಣದ ಭಯವೆ?' ಹೊರಗೆ ಒಂದು ಮರದ ಕೆಳಗೆ ರಾತ್ರಿಯನ್ನು ಕಳೆದೆ.''

* * *

ಬಾಬಾ ಹೇಳತೊಡಗಿದರು: ''ಒಂದು ಕಾಲದಲ್ಲಿ ಭಕ್ತಿ ,ಭಾವ ಇವೆಲ್ಲ ನನಗೆ ಹಿಡಿಸುತ್ತಿರಲಿಲ್ಲ. ಕೇವಲ ಅದ್ವೈತ ತತ್ತ್ವಗಳನ್ನೇ ಚಿಂತಿಸುತ್ತಿದ್ದೆ. ಇದ್ದಕ್ಕಿದ್ದಂತೆ ದಕ್ಷಿಣೇಶ್ವರದ ಕೋಣೆಯಲ್ಲಿ ಠಾಕೂರರು ಯಶೋದೆ ಹಾಗು ಶ್ರೀಕೃಷ್ಣನತ್ತ ನೋಡುತ್ತಾ ಭಾವಾವಿಷ್ಟರಾಗಿ ದಿಟ್ಟಿಸಿ ನೋಡುತ್ತಿರುವುದನ್ನು ಕಂಡೆ. ಭಾವಾವೇಶದಿಂದ ನನ್ನನ್ನು ಕರೆದು ಹೇಳಿದರು, 'ನೋಡು, ನೋಡು; ಏನು ಅದ್ಭುತ ಭಾವನೆ!' ನಾನತ್ತ ನೋಡಿದೆ, ಶ್ರೀಕೃಷ್ಣ ಅಂಬೆಗಾಲಿಡುತ್ತಾ ಓಡಿಹೋಗುತ್ತಿದ್ದಾನೆ, ಯಶೋದೆ ತನ್ನ ಕೈಯಲ್ಲಿ ಬೆಣ್ಣೆಯನ್ನು ತೆಗೆದುಕೊಂಡು ಹಿಂಬಾಲಿಸುತ್ತಾ ಅವನನ್ನು ಕರೆಯುತ್ತಿದ್ದಾಳೆ. ಅದನ್ನು ನೋಡುತ್ತ ಠಾಕೂರರು ತಲ್ಲೀನರಾಗಿ ಅಸ್ಪಷ್ಟ ಸ್ವರದಿಂದ ಹೇಳುತ್ತಿದ್ದಾರೆ, 'ನೋಡು, ನೋಡು; ಏನು ಅದ್ಭುತ ಭಾವನೆ!'

''ಹರ-ಗೌರಿಯರ ಲೀಲಾಕ್ಷೇತ್ರವಾದ ಹಿಮಾಲಯವನ್ನು ನೋಡಿದ್ದೆ. ಶಿವ ಹಾಗೂ ಶಕ್ತಿ. ನೂರಾರು ಪರ್ವತ ಶಿಖರಗಳು, ನೂರಾರು ಅನಾದಿ ಲಿಂಗಗಳಂತೆ! ಧ್ಯಾನಮಗ್ನ ಶಿವಮೂರ್ತಿ! ಆದಿ ಲೀಲಾಸ್ಥಾನ! ಗೌರಿ ತಪಸ್ಸು ಮಾಡಿದ ಸ್ಥಳ ಇದಲ್ಲವೆ? ಇಲ್ಲಿಯೇ ಎಲ್ಲವೂ.''

* * *

ಬಾಬಾ ಹೇಳುತ್ತಿದ್ದಾರೆ: ''ನೇರ ಕುಳಿತುಕೊಳ್ಳಬೇಕು – '**ಸಮಂ ಕಾಯಶಿರೋಗ್ರೀವಂ**' ಗೋಡೆಗೆ ಒರಗಿ ಕುಳಿತುಕೊಳ್ಳಬಾರದು, ಬಾಗಿ ಕುಳಿತುಕೊಳ್ಳಬಾರದು. ಬ್ರಹ್ಮಚಾರಿಗಳೆಂದೂ ಸೊಟ್ಟಗೆ ಕುಳಿತುಕೊಳ್ಳಬಾರದು. ಮೇರುದಂಡ (ಬೆನ್ನೆಲುಬು) ನೆಟ್ಟಗಿರಬೇಕು. ನಾನು ಹೇಗೆ ಕುಳಿತುಕೊಳ್ಳುತ್ತೇನೆ, ನೋಡು. ಕಾಲು ಕುಣಿಸಬಾರದು. ಕೈಕಾಲು ಅಲುಗಾಡಿಸಬಾರದು. ಗುರುಜನರ ಮುಂದೆ ಸ್ಥಿರವಾಗಿರಬೇಕು, ವಿನೀತರಾಗಿರಬೇಕು.''

ಆಶ್ರಮದ ಬ್ರಹ್ಮಚಾರಿಯೊಬ್ಬನ ಬಗ್ಗೆ ಹೇಳುತ್ತ, ''ಅವನು ಪಗಡಿ ಸುತ್ತಿಕೊಂಡು ಎಲ್ಲರಿಗೂ ತಿಳಿಯುವಂತೆ ಬಂದು ಕುಳಿತುಕೊಳ್ಳುತ್ತಾನೆ. ಸಂಜೆ ಒಂದು ಕಡೆ ಕುಳಿತಿರಲಾರ. ಕೆಮ್ಮುತ್ತಾ ತಾನು ಬಂದಿರುವುದನ್ನು ತಿಳಿಸುತ್ತಾನೆ. 'ನಾವು ಬಂದಿದ್ದೇವೆ, ನಾವು ಇದ್ದೇವೆ. ಈ ವರ್ಷ ಬ್ರಹ್ಮಚರ್ಯ ದೀಕ್ಷೆಯನ್ನು ನೀಡಬೇಕು'

ಎಂದು. ಅಲ್ಲಪ್ಪ, ಬ್ರಹ್ಮಚರ್ಯವೆಂದರೆ ಇನ್ನೇನು? ಸ್ಥಿರವಾಗಿ ಎರಡು ಗಂಟೆ ಒಂದೇ ಕಡೆ ಕುಳಿತುಕೋ ನೋಡೋಣ, ಅದು ಸಾಧ್ಯವಾದರೆ ಬ್ರಹ್ಮಚರ್ಯ ತಾನಾಗಿಯೇ ಆಗುತ್ತದೆ. ಬ್ರಹ್ಮ ಚರ್ಯ ಪಾಲಿಸಬೇಕೆಂದಿರುವವರು, ರಾತ್ರಿ ಕಡಿಮೆ ಆಹಾರ ಸೇವಿಸ ಬೇಕು, ಹಾಲನ್ನು ಸ್ಪರ್ಶಿಸಬಾರದು.

''ನಮ್ಮ ವಿಷಯವೇ ಬೇರೆ. ನಾವೇನು ಸಾಮಾನ್ಯರೆ? ಬರೀ ಚಹಾ ಕುಡಿದು, ಮರದ ಬೇರು ತಿಂದು ಎಷ್ಟೋ ದಿನ ಕಳೆದಿದ್ದೇವೆ! ಕೆಲವು ದಿನ ಕೇವಲ ಗೋಧಿ ಸಿಕ್ಕಿದೆ. ಇಲ್ಲಿಯೇ ೫ ತಿಂಗಳು ಬರೀ ಸೊಪ್ಪುಸದೆ ತಿಂದು ಬದುಕಿದ್ದೇನೆ. ದೇಹದ ನರಗಳು ಎದ್ದು ಬಂದಿದ್ದವು – ಮೈಬಣ್ಣ ನೀಲಿಯಾಗಿಬಿಟ್ಟಿತ್ತು. 'ಇನ್ನೂ ಕೆಲವು ದಿನ ಹೀಗೆ ಮಾಡಿದರೆ, eruption(ಗುಳ್ಳೆಗಳು) ಉಂಟಾಗುತ್ತವೆ, ಕೀವು ಹೊರಬರುತ್ತದೆ. ನಿಮಗಂತೂ ಕಷ್ಟವೇ; ಇತರರಿಗೂ ಕಷ್ಟವಾಗುತ್ತದೆ' ಎಂದು ಡಾಕ್ಟರ್ ಹೇಳಿದರು. ಕೊನೆಗೆ ಅನ್ನ ತಿಂದೆ '—' ಆನಂದದಿಂದ ಅನ್ನ ಮಾಡಿ ತಿನ್ನಿಸಿದ. ಆಗ ಕ್ಷಾಮ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು, ಭತ್ತ ಬೆಳೆಯುತ್ತಿತ್ತು. ಅದರ ನಂತರವೇ ಹೊಟ್ಟೆಯ ತೊಂದರೆ ಶುರುವಾಯಿತು. ಏನು ತಿಂದರೂ ಸರಿಯಾಗಿ ಜೀರ್ಣವಾಗುತ್ತಿಲ್ಲ.''

* * *

ಸಾಯಂಕಾಲ ಬಾಬಾ ವರಾಂಡದ ಕ್ಯಾಂಪ್‌ಕಾಟ್‌ನಲ್ಲಿ ಕುಳಿತು ಭಕ್ತನೊಬ್ಬನಿಗೆ ಹೇಳುತ್ತಿದ್ದಾರೆ: ''ಅಯ್ಯೋ! ಎಷ್ಟೊಂದು ದುಃಖ ನಿನಗೆ! (ದುಃಖ ಶಮನ ಮಾಡಲು) ಏನು ಮಾಡಲಿ, ಯಾರಿಗೆ ಹೇಳಲಿ? ಠಾಕೂರ್, ಠಾಕೂರ್ !

''ನೋಡು, ಎಂದೂ ಹತಾಶನಾಗಬೇಡ. ಎಷ್ಟೇ ದುಃಖ ಬಂದರೂ, ಸುಖಕ್ಕಾಗಿ ಎಂದೂ ಪ್ರಾರ್ಥಿಸಬೇಡ. ಠಾಕೂರರು ಹೊಡೆತದ ಮೇಲೆ ಹೊಡೆತ ಕೊಟ್ಟು ತನ್ನಲ್ಲಿಗೆ ಕರೆಸಿಕೊಳ್ಳುತ್ತಾರೆ. ಅತ್ಯಂತ ದುಃಖದ ಸಮಯದಲ್ಲಿ ತುಲಸೀದಾಸರ ಒಂದು ಹಾಡನ್ನು ಹಗಲೂರಾತ್ರಿ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಿದ್ದೆ: **'ಸುಖಮೇ ಬಾಜ್ ಪಡೂ ದುಃಖ್ ರಹೂ ಸಂಗ್'**– 'ಸುಖವು ಭಗವಂತನನ್ನು ಮರೆಸಿ ಬಿಡುತ್ತದೆ. ದುಃಖ ಮಾತ್ರವೇ ಆತನನ್ನು ನೆನಪಿಗೆ ತರುವುದು.' ''

ಇನ್ನೊಂದು ದಿನ ಇನ್ನೊಬ್ಬ ಎಳೆಯ ವಯಸ್ಸಿನ ಭಕ್ತನ ಮಾತಿಗೆ ಉತ್ತರವಾಗಿ ಹೇಳಿದರು, ''ಹೌದು, ಈ ವಯಸ್ಸಿನಲ್ಲಿ ಕಾಮ–ಕ್ರೋಧಗಳು ಇದ್ದೇ ಇರುತ್ತವೆ. ಅವುಗಳನ್ನು ದಾಟಿ ಹೋಗುವುದೂ ಸಾಧ್ಯವಿದೆ. ನೀನೆಲ್ಲೇ ಇರು, ಅಥವಾ ನಾನೆಲ್ಲೇ ಇದ್ದರೂ ನನಗೆ ತಿಳಿಸು. ಅರ್ಥವಾಯಿತೆ? ಎಲ್ಲವೂ ಹೊರಟುಹೋಗುತ್ತವೆ. ಹಾಗೇನಾದರೂ ಹೋಗದಿದ್ದರೆ, ಇವಕ್ಕೆಲ್ಲ ಅರ್ಥವೇನು?''

ಇನ್ನೊಂದು ಬಾರಿ ಬಾಬಾ ತಮ್ಮ ಪಾಡಿಗೆ ತಾವು ಹೇಳುತ್ತಿದ್ದಾರೆ (ಸಮೀಪ ಜನರಿದ್ದರು): ''ತೋರಿಕೆಯ ಭಕ್ತಿ ಹೆಚ್ಚುಕಾಲ ಉಳಿಯದು. ಜನ ನೋಡುತ್ತ ಇರುವವರೆಗೆ, ಜನರಿಗೆ ಹೆದರಿ ಸ್ವಲ್ಪ ಹೊತ್ತು ಇರುತ್ತದೆ, ಅನಂತರ ಹೊರಟುಹೋಗುತ್ತದೆ. ಮೊದ ಮೊದಲು ಎಷ್ಟೊಂದು ಆತ್ಮೀಯತೆ, 'ಬಾಬಾ, ಬಾಬಾ' ಎಂದೆಲ್ಲ; ಕೊನೆಗೆ ಮಾತೇ ಇಲ್ಲ, ಕರೆದರೂ ಉತ್ತರವಿಲ್ಲ. ಈ ರೀತಿಯ ಭಕ್ತಿ ಒಳ್ಳೆಯದಲ್ಲ. ಎಷ್ಟು ಸಾಧ್ಯವೋ ಅಷ್ಟೇ ಮಾಡಬೇಕು. ಹೆಚ್ಚು ತೋರಿಕೆಯಿಂದ ಏನೂ ಪ್ರಯೋಜನವಿಲ್ಲ, ಯಾರದು ಎಂತಹ ಭಕ್ತಿಯೆಂಬುದನ್ನು ನೋಡಿದರೇನೇ ತಿಳಿಯುತ್ತದೆ.''

ಭಕ್ತನೊಬ್ಬನು ಪತ್ರದ ಮೂಲಕ ಪ್ರಶ್ನಿಸಿದ್ದ, 'ಗುರುಮೂರ್ತಿಯನ್ನು ಮೊದಲು ಧ್ಯಾನಿಸಬೇಕೇ, ಅಥವಾ ಇಷ್ಟಮೂರ್ತಿಯನ್ನು ಮೊದಲು ಧ್ಯಾನಿಸಬೇಕೆ? ಹಾಗೂ ಎಲ್ಲಿ ಧ್ಯಾನಿಸಬೇಕು?' ಎಂದು. ಅದಕ್ಕೆ ಉತ್ತರವಾಗಿ ಬಾಬಾ ಹೇಳಿದರು: ''ಹೀಗೆ ಬರೆ – ಠಾಕೂರರೇ ಗುರು, ಅವರೇ ಇಷ್ಟ. ಹೀಗಿರುವಾಗ 'ಮೊದಲು, ಆಮೇಲೆ' ಎನ್ನುವುದೇನಿದೆ? ಹೃದಯದಲ್ಲಿ ಧ್ಯಾನಿಸುವುದು ಪ್ರಶಸ್ತ – ಇಲ್ಲೇ, ನನ್ನೆದುರೇ ಆತನನ್ನು ನೋಡುತ್ತಿದ್ದೇನೆ, ನನ್ನ ಹೃದಯ ಮಂದಿರದಲ್ಲಿ ಆತನಿದ್ದಾನೆ; ನಾನು ಬಂದು ನೋಡುತ್ತಿದ್ದೇನೆ ಎಂಬಂತೆ. ಇಷ್ಟವಾದರೆ ಮೊದಲು ದಕ್ಷಿಣೇಶ್ವರವನ್ನೂ ಮನಸ್ಸಿಗೆ ತಂದುಕೊಳ್ಳಬಹುದು. ಭಾವಿಸಿಕೊಳ್ಳಲು ಸುಲಭವಾಗುವುದಾದರೆ ಹೀಗೆ ಮಾಡಬಹುದು. ಅದಕ್ಕೆ ಇಂತಹದೇ ಎಂಬ ನಿಯಮವೇನೂ ಇಲ್ಲ, ಭಗವಂತನನ್ನು ಪ್ರೀತಿಸುವುದೇ ಮುಖ್ಯ.''

ಗುರುಪೂರ್ಣಿಮೆಯ ದಿನದಂದು ಭಕ್ತನೊಬ್ಬ ಪಾಯಸ ಮಾಡಿ ತಂದು ಠಾಕೂರರಿಗೆ ನಿವೇದಿಸಿದ್ದ. ಸಾಯಂಕಾಲ ಅವನು ಗುರುದೇವರ ಪಾದಗಳಿಗೆ ಪುಷ್ಪಾಂಜಲಿಯನ್ನರ್ಪಿಸಲು ಬಂದಿದ್ದ. ಬಾಬಾ ಈಗತಾನೆ ಸ್ನಾನ ಮುಗಿಸಿ, ಕೋಣೆಗೆ ಬಂದು ಕುಳಿತು ಇಷ್ಟಮೂರ್ತಿಯ ಸ್ಮರಣೆ ಮಾಡುತ್ತಿದ್ದಾರೆ. ಪೂಜಾರಿ ಅಲ್ಲಿಗೆ ಬಂದು, 'ಪಾಯಸ ನೈವೇದ್ಯ ಬಹಳ ಚೆನ್ನಾಗಿತ್ತೆ'ಂದು ತಿಳಿಸಿದರು. ಭಕ್ತನ ಪುಷ್ಪಾಂಜಲಿಯನ್ನು ಸ್ವೀಕರಿಸಿದ ಬಾಬಾ ನಗುತ್ತ ಶುದ್ಧವಾದ ಉಚ್ಚಾರಣೆಯೊಂದಿಗೆ ಹೇಳಿದರು, ''ನಿನಗೆ ಜ್ಞಾನೋದಯವಾಯಿತೆ?'' ನಂತರ ಇನ್ನೂ ಒಬ್ಬಿಬ್ಬರು ಪುಷ್ಪಾಂಜಲಿಯನ್ನು ಅರ್ಪಿಸಿದಾಗ, ''(ಆಶ್ರಮದ) ಇವರಿಗೆ ಇವೆಲ್ಲಾ ತಿಳಿಯದು!'' ಎಂದರು.

ಸಂಜೆ ವರಾಂಡದ ಕ್ಯಾಂಪ್‌ಕಾಟ್ ಮೇಲೆ ಮಹಾರಾಜ್ ಮಲಗಿದ್ದರು. ಬಹಳ ಹೊತ್ತು ಮಾತುಕತೆಯೇನೂ ನಡೆಯದಿದ್ದಾಗ ಭಕ್ತ ಗುರುಪೂರ್ಣಿಮೆಯ ವಿಷಯವಾಗಿಯೇ ಕೇಳಿದ. ಬಾಬಾ ಹೇಳಿದರು: ''ಏಕೆ? ಏನು ವಿಷಯ? ನನಗೆ ಗೊತ್ತಿಲ್ಲವಲ್ಲ! ನೋಡಬೇಕು, ಎಲ್ಲವೂ ಇದೆ. ಎಲ್ಲಿಂದ ಶುರುವಾಗುವುದು? ಎಷ್ಟು ದಿನಗಳಿಂದ? ಈಗ ಚಾತುರ್ಮಾಸ್ಯ ಶುರುವಾಗಿದೆ. ಎಲ್ಲರೂ ಗುರುವಿನ ಬಳಿ ಬರುತ್ತಾರೆ. ಪಶ್ಚಿಮ ಭಾರತದಲ್ಲಿ ಈಗ ಬಹಳ ಸಂಭ್ರಮ. ಈ ಕಡೆ ಅಷ್ಟೊಂದು ಆಚರಣೆಯಲ್ಲಿಲ್ಲ. ಹಿಮಾಲಯದ ತೀರ್ಥಕ್ಷೇತ್ರ

ಗಳಲ್ಲಿ ಸುತ್ತಾಡುತ್ತಿದ್ದಾಗ ತಿಥಿ, ನಕ್ಷತ್ರಗಳು ತಿಳಿಯುತ್ತಿರಲಿಲ್ಲ. ಆದರೆ ವರ್ಷದ ಒಂದು ದಿನವನ್ನು ಗಮನದಲ್ಲಿಡುತ್ತಿದ್ದೆ – ಶಿವ ರಾತ್ರಿಯ ನಂತರದ ದ್ವಿತೀಯೆಯ ದಿನವನ್ನು. ಅಂದು ಉಪವಾಸ ಮಾಡುತ್ತಿದ್ದೆ. ಸರಿ, ದಿನ, ತಿಂಗಳು, ವರ್ಷ ಎಲ್ಲಿಂದ ಬರುತ್ತಿದ್ದವೋ, ಎಲ್ಲಿಗೆ ಹೋಗುತ್ತಿದ್ದವೋ!''

ಆಗಂತುಕನೊಬ್ಬ (ಭಕ್ತ?) ತಮ್ಮ ಕೈಗಳನ್ನು ಮೇಲಕ್ಕೆತ್ತಿ , ತಲೆಗೆ ಮುಟ್ಟಿಸಿ ಬಾಬಾಗೆ ಪ್ರಣಾಮ ಮಾಡಿದರು. ಬಾಬಾ ಅವನಿಗೆ ಚೆನ್ನಾಗಿ ಬೈಯುತ್ತ, ''ಪ್ರಣಾಮವಲ್ಲ ಕೊಡಲಿಯೇಟು ಎನ್ನುವ ಹಾಗಿದೆ! ಸಾಧು-ಸನ್ಯಾಸಿಗಳಿಗೆ ಪ್ರಣಾಮ ಮಾಡಲೂ ತಿಳಿಯದೆ? ಎಷ್ಟು ರೀತಿಯ ಪ್ರಣಾಮಗಳಿವೆ ಗೊತ್ತೆ? **'ಜಾನುಭ್ಯಾಂ ಚ ತಥಾ ಪದ್ಭ್ಯಾಂ ಉರಸಾ ಶಿರಸಾ ಧಿಯಾ ।'** ನಿಂತುಕೊಂಡು ಪ್ರಣಾಮ ಮಾಡುವುದು ಸ್ವೀಕಾರಾರ್ಹವಲ್ಲ. ಎಷ್ಟು ಜನರಿಗೆ ಕಲಿಸಿಕೊಡುವುದು? ಪ್ರಣಾಮ ಮಾಡುವುದರಲ್ಲಿ ಅನೇಕ ನಿಯಮಗಳಿವೆ. ಮಲಗಿರುವಾಗ, ನಡೆದಾಡುತ್ತಿರುವಾಗ, ಎಣ್ಣೆ ಹಚ್ಚಿಕೊಂಡಿರುವಾಗ, ಅನ್ಯಮನಸ್ಕರಾಗಿರುವಾಗ ಪ್ರಣಾಮ ಮಾಡಬಾರದು. ಈಗಿನ ಕಾಲದಲ್ಲಿ ಕೆಲವರು ಕೊಡಲಿ ಹಿಡಿದಂತೆ ಪ್ರಣಾಮ ಮಾಡುತ್ತಾರೆ, ಇನ್ನು ಕೆಲವರಂತೂ ಭಕ್ತಿಯ ಆವೇಶದಲ್ಲಿ ಯಾವಾಗೆಂದರೆ ಆಗ, ಎಲ್ಲೆಂದರಲ್ಲಿ ನಮಸ್ಕಾರ ಮಾಡುತ್ತಾರೆ! ಯಾರಿಗೂ ಅದರ ನಿಯಮಗಳು ಗೊತ್ತಿಲ್ಲ. ಒಮ್ಮೆ ನಾನು ಬೇಲೂರು ಮಠದಲ್ಲಿ ಮಲಗಿದ್ದೆ; ವೇಳೆ ೨ ಗಂಟೆಯಾಗಿತ್ತು . ಹೇಳದೆ ಕೇಳದೆ ಒಬ್ಬ ಬಂದು ನನ್ನ ಕಾಲುಮುಟ್ಟಿ ನಮಸ್ಕರಿಸಿದ. ನಾನು ಬೆಚ್ಚಿ ಎದ್ದುಕುಳಿತೆ. ಅವನಿಗೆ, 'ನೀವು ಜನರಿಗೆ ಕಲಿಸುತ್ತೀರಿ. ಆದರೆ ಮಲಗಿದವರಿಗೆ ಪ್ರಣಾಮ ಮಾಡಬಾರದೆಂದೂ ನಿಮಗೆ ತಿಳಿದಿಲ್ಲವೆ?' ಎಂದೆ. ನಂತರ ಎದ್ದು ಕುಳಿತು, 'ಸರಿ, ಈ ಬಾರಿ ಒಂದು ಸಲ ಚೆನ್ನಾಗಿ ಮಾಡು' ಎಂದೆ.''

* * *

ಎಡ್ವಾನಿ ಗ್ರಾಮದ ಮುಸಲ್ಮಾನ ಭಕ್ತನೊಬ್ಬ ಪತ್ರ ಬರೆದಿದ್ದಾನೆ. ಅವನ ಸೊಸೆ ಮೃತಳಾಗಿದ್ದಾಳೆ, ಅವನು ಬಹಳ ದುಃಖದಿಂದಿದ್ದಾನೆ. ಯಾರನ್ನಾದರೂ ಅಲ್ಲಿಗೆ ಕಳುಹಿಸಿದರೆ ತನಗೆ ಶಾಂತಿ ಸಿಗುವುದು... ಇತ್ಯಾದಿ. ಪತ್ರವನ್ನು ಕೇಳಿ ಬಾಬಾ ದುಃಖದಿಂದ ಹೇಳಿದರು, ''ಅಯ್ಯೋ, ಈ ಇಳಿವಯಸ್ಸಿನಲ್ಲಿ ಅವನು ಬಹಳ ದುಃಖಗೊಂಡಿದ್ದಾನೆ. ೪೦ ವರ್ಷಗಳ ಹಿಂದೆ ಕ್ಷಾಮ ಬಂದಿದ್ದಾಗ, ಅವನನ್ನು ಭೇಟಿಯಾಗಿದ್ದೆ. ಅವನು ಈಗಲೂ ಪತ್ರ ಬರೆಯುತ್ತಾನೆ. ಎಷ್ಟು ಶುದ್ಧವಾದ ಬಂಗಾಳೀ ಭಾಷೆ – 'ನಿಮ್ಮ ಸ್ನೇಹಭರಿತ ಪತ್ರ ಸಿಕ್ಕರೆ ಸಂತೋಷವಾಗುವುದು' ಅಂತ ಬರೆದಿದ್ದಾನೆ. ಹಿಂದೊಮ್ಮೆ ಆತ ಬರೆದಿದ್ದ, 'ನಿಮ್ಮನ್ನೇ ನೆನೆಯುತ್ತಿರುತ್ತೇನೆ. ಆಗ ಮನಸ್ಸಿಗೆ ಬಲ ಬರುತ್ತದೆ, ಸೇವಾಶಕ್ತಿಯ ಸಂಚಾರವಾಗುತ್ತದೆ' ಅಂತ. ಅವನು ತಾನಾಗಿ ಇಲ್ಲಿಗೆ ಬರಲು ಇಷ್ಟಪಡುವುದಿಲ್ಲ , ನನ್ನನ್ನೂ ಅಲ್ಲಿಗೆ ಕರೆಯುವುದಿಲ್ಲ. ಏನೆನ್ನುತ್ತಾನೆ ಗೊತ್ತೆ? 'ಅದೇ ತರುಣ ಸನ್ಯಾಸಿಯ ರೂಪ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಅದೇ ತುಂಬ ಚೆನ್ನಾಗಿದೆ' ಎನ್ನುತ್ತಾನೆ. ಗಂಗೆಯ ಪಶ್ಚಿಮಭಾಗದ ಮಣ್ಣು; ಭತ್ತದ ಬೆಳೆ ಫಲವತ್ತಾಗಿದೆ. ಒಮ್ಮೆ ಎಲ್ಲರೂ ಅಲ್ಲಿಗೆ ಹೋಗಿಬನ್ನಿ. ಅವನು ದುಃಖದಿಂದಿದ್ದಾನೆ. ನೀವು ಅಲ್ಲಿಗೆ ಹೋದರೆ ಅವನಿಗೆ ಆನಂದವಾಗುತ್ತದೆ. ಹೋಗುವಾಗ ಜೊತೆಯಲ್ಲಿ ಮ್ಯಾಜಿಕ್ ಲಾಟೀನು, ಸ್ಲೈಡುಗಳನ್ನು ತೆಗೆದುಕೊಂಡು ಹೋಗಿ. ಪ್ರಚಾರ ಕಾರ್ಯವೂ ನಡೆಯುವುದು.''

* * *

ಒಂದು ದಿನ ಬಾಬಾ ಹಿಂದಿನ ಘಟನೆಯನ್ನು ಕುರಿತು ಹೇಳಿದರು: ''ದೆಹಲಿಯಲ್ಲಿ ಒಂದು ದಿನ ಸಾಯಂಕಾಲ ಪಾರ್ಕಿನ ಬೆಂಚಿನಲ್ಲಿ ಕುಳಿತಿದ್ದೆ. ಠಾಕೂರರ ಭಕ್ತರ ಮನೆಯಲ್ಲಲ್ಲದೆ ಬೇರೆ ಯಾರ ಮನೆಯಲ್ಲೂ ನಾನು ರಾತ್ರಿ ತಂಗುತ್ತಿರಲಿಲ್ಲ. ಇಬ್ಬರು ಮಾರ್ವಾಡಿಗಳು ಬಂಗಾಳಿ ಸಾಧುವನ್ನು (ನನ್ನನ್ನು) ನೋಡಿ ಪಕ್ಕದಲ್ಲಿ ಬಂದು ಕುಳಿತರು. ಸ್ವಲ್ಪಹೊತ್ತು ಮಾತುಕತೆಯ ಬಳಿಕ ನನಗೆ ಹಣಕೊಡಲು ಮುಂದಾದರು. ನಾನು 'ಬೇಡ' ಎಂದೆ. ಆಗ ಅವನು ಹೇಳಿದ, 'ದಕ್ಷಿಣೇಶ್ವರದಲ್ಲಿ ಒಮ್ಮೆ ರಾಮಕೃಷ್ಣ ಪರಮಹಂಸರಿಗೆ ಹಣ ಕೊಡಲು ಹೋಗಿದ್ದೆ, ಅವರು ಕೂಗಾಡಿದರು.' ಆಗ ನನಗೆ ತಿಳಿಯಿತು, ಆತನೇ ಲಕ್ಷ್ಮೀನಾರಾಯಣ ಮಾರ್ವಾಡಿ ಅಂತ.''

ಒಂದು ದಿನ ಸಂಜೆ ಹಾಲ್‌ನಲ್ಲಿ ಒಬ್ಬ ವಯಸ್ಸಾದ ಸಾಧುಗಳು ಬಾಬಾ ಕಣ್ಣಿಗೆ ಕಂಪ್ರೆಸ್ ಕೊಡುತ್ತಿದ್ದಾರೆ. ಸ್ವಲ್ಪ ಹೊತ್ತಾದ ಮೇಲೆ ಬಾಬಾ ಹೇಳಿದರು: ''ಯಾವ ಕಡೆ ಕೊಡುತ್ತಿರುವೆ? ನನಗೆ ನೋವಿರುವುದು ಎಡಗಡೆಗೊ? ಬಲಗಡೆಗೊ?'' ಸಾಧುಗಳು ಜೋರಾಗಿ ನುಡಿದರು: ''ನೀವು ತಪ್ಪು ತಿಳಿದಿದ್ದೀರಿ. ನಿಮಗೆ ನೋವು ಎಡಗಡೆ.'' ಬಾಬಾ ಕಠಿಣವಾಗಿ ನುಡಿದರು: ''ನಾನು ತಪ್ಪು ಹೇಳಿಲ್ಲ. ನಮ್ಮಿಂದ ಆ ರೀತಿ ತಪ್ಪಾಗುವುದಿಲ್ಲ.'' ಆಗ ಸಾಧುಗಳು ತುಸು ಮೆತ್ತಗಾಗಿ, ''ನಾವು ಕಲಿಯಲು ಬಂದಿದ್ದೇವೆ. ಆಶೀರ್ವಾದ ಮಾಡಿ.'' ಎಂದರು. ಬಾಬಾ ಇನ್ನೂ ಮೃದುವಾಗಿ, ''ಹಾಗೆ ಹೇಳಿ. ಖಂಡಿತ ನಿನಗೆ ಆಶೀರ್ವಾದ ಮಾಡುತ್ತೇನೆ. ಹೀಗೆ ಆಶೀರ್ವಾದ ಮಾಡುತ್ತಲೇ ಇರಬಲ್ಲೆ'' ಎಂದರು.

* * *

ಆಶ್ರಮದಲ್ಲೊಬ್ಬ ವಿದ್ಯಾರ್ಥಿ ವಾಸ ಮಾಡುತ್ತಿದ್ದ. ಅವನು ದೀಕ್ಷಿತ ಬ್ರಾಹ್ಮಣ; ಹೇಗೂ ದೀಕ್ಷೆಯಾಗಿದೆ, ಇನ್ನು ಸಂಧ್ಯಾವಂದನೆ, ಗಾಯತ್ರಿ, ಜನಿವಾರ ಇವುಗಳ ಅಗತ್ಯವೇನೂ ಇಲ್ಲವೆಂದು ಅವನ ಮನೋಭಾವ. ಈ ವಿಷಯ ಬಾಬಾ ಕಿವಿಗೆ ಬೀಳುತ್ತಲೇ ಅವರು ಕೋಪಗೊಂಡು, '' ನನಗಿದು ತಿಳಿದಿರಲಿಲ್ಲವಲ್ಲ, ಅವನು ಜನಿವಾರವನ್ನೂ ಎಸೆದುಬಿಟ್ಟಿದ್ದಾನೆ. ಇದೇನು! ಬ್ರಾಹ್ಮಣರ ಮಗ. ಠಾಕೂರರು ಮನ್ಮಥನಿಗೆ ಜನಿವಾರ ಹಾಕಿಸಿದ್ದರು. ಸ್ವಾಮೀಜಿ ಕೂಡ ಎಷ್ಟೋ ಮಂದಿಗೆ ಜನಿವಾರ ಹಾಕಿಸಿ ಹೋಗಿದ್ದಾರೆ. ಇಲ್ಲಿ ಇದೇನು ಅವಸ್ಥೆ! ಈಗಲೇ ಹೇಳುತ್ತಿದ್ದೇನೆ, ಇದಾಗದು.''

(ಮುಂದುವರಿಯುವುದು)



ಕೈಲಾಸ - ಮಾನಸ ಸರೋವರ ಯಾತ್ರೆ

ಸ್ವಾಮಿ ದಾಮೋದರಾನಂದ

ಅನುವಾದ: ಡಾ. ಕೆ. ಎಲ್. ಪ್ರಸನ್ನಾಕ್ಷೀ

ಭಾಗ ೨

ಟಿಬೆಟ್ ಪ್ರಸ್ಥಭೂಮಿ ಮತ್ತು ಮಂಡಿ : ಲ್ಹಾಸಾದಲ್ಲಿದ್ದುಕೊಂಡು ದಲೈ ಲಾಮಾ ಅವರು ಟಿಬೆಟ್ ದೇಶವನ್ನು ಆಳುತ್ತಿದ್ದರು. ಎರಡೂ ದೇಶಗಳೊಡನೆ ಪ್ರಾಚೀನ ಸಾಂಸ್ಕೃತಿಕ ಸಂಬಂಧವಿತ್ತು. ಭಾರತದ ಹಿಂದೂ ಯಾತ್ರಿಕರು ಪ್ರತಿವರ್ಷ ಕೈಲಾಸ ಪರ್ವತಕ್ಕೆ ಯಾತ್ರೆ ಹೋಗುತ್ತಿದ್ದುದರಿಂದ ಅದು ಟಿಬೆಟ್ಟಿನ ಮೇಲೆ ಸ್ವಲ್ಪ ಮಾತ್ರ ನಿಯಂತ್ರಣ ಹೊಂದಿತ್ತು.

ಟಿಬೆಟ್ ಪ್ರಸ್ಥಭೂಮಿ ವಿಶ್ವದಲ್ಲೇ ಅತಿ ಎತ್ತರವಾಗಿದ್ದು, ಅದು ವಿಸ್ತಾರವಾದ ಭೂಭಾಗವನ್ನು ಆಕ್ರಮಿಸಿದೆ. ಸಮುದ್ರ ಮಟ್ಟಕ್ಕಿಂತ ೧೦,೦೦೦ ಅಡಿ ಎತ್ತರದಲ್ಲಿ ಈ ಭೂಭಾಗವಿದೆ. ಹಿಮಾಲಯ ಪರ್ವತದ ತಪ್ಪಲು ಭೂಮಿಯಿಂದ ಟಿಬೆಟ್ ದೇಶದ ಜನರಿಗೆ ಅಗತ್ಯ ಪದಾರ್ಥಗಳನ್ನು ತಂದು, ಅವರೊಡನೆ ವ್ಯಾಪಾರ ಮಾಡುತ್ತಿದ್ದ ಆ ಕುರುಬ ಮಿತ್ರರೊಡನೆಯೇ ನಾನು ಯಾತ್ರೆ ಮುಂದುವರೆಸಿದೆ.

ಟಿಬೆಟ್ ದೇಶದ ಸರಹದ್ದು ದಾಟಿ ನಾವು ಬೇಸಿಗೆ ಮಾರುಕಟ್ಟೆಯಾದ 'ಮಂಡಿ'ಯನ್ನು ತಲುಪಿದೆವು. ಅಲ್ಲಿ ಉಣ್ಣೆಗೆ ಬದಲಾಗಿ ಭಾರತೀಯ ಸಾಮಗ್ರಿಗಳನ್ನು ಮಾರಲಾಗುತ್ತಿತ್ತು. 'ವಿನಿಮಯ ಪದ್ಧತಿ'ಗನುಗುಣವಾಗಿ ಎಲ್ಲಾ ವ್ಯವಹಾರಗಳೂ ನಡೆಯುತ್ತಿದ್ದವು. ಭಾರತೀಯ ಪದಾರ್ಥಗಳಿಗೆ ವಿನಿಮಯ ಮಾಡಿಕೊಳ್ಳಲು ಇದ್ದ ಟಿಬೆಟ್ಟಿನ ಐಶ್ವರ್ಯವೆಂದರೆ ಉಣ್ಣೆಯೊಂದೇ. ಆ ಬೇಸಿಗೆಯ ಮಾರುಕಟ್ಟೆಯಲ್ಲಿ ಅನೇಕ ಬಿಡಾರಗಳಿದ್ದವು. ಅದೃಷ್ಟವಶಾತ್ ಸೂರ್ಯ ಪ್ರಕರ್ಷಮಾನನಾಗಿದ್ದ, ಮಳೆ ಇರಲಿಲ್ಲ. ಇಂತಹ ಹಿತಕರ ವಾತಾವರಣದಲ್ಲಿ ಟಿಬೆಟ್ಟಿನ ವಿವಿಧ ಸ್ಥಳಗಳಿಂದ ವ್ಯಾಪಾರಕ್ಕಾಗಿ ಜನರು ಬಂದಿದ್ದರು. ಇದು ವರ್ಷದಲ್ಲಿ ಒಮ್ಮೆ ಮಾತ್ರ ನಡೆಯುತ್ತಿದ್ದ ವ್ಯಾಪಾರ ಮೇಳ.

ಟಿಬೆಟಿಯನ್ನರೊಡನೆ ವ್ಯಾಪರ ವಹಿವಾಟು ನಡೆಯುತ್ತಿದ್ದ ಒಂದು ಬಿಡಾರದಲ್ಲೇ ನಾನು ವಾಸವಾಗಿದ್ದೆ. ಅಲ್ಲಿ ಒಬ್ಬ ಯುವಕ ಭಾರತದ ಸಾಮಗ್ರಿಗಳನ್ನು ವಿನಿಮಯ ಮಾಡಿಕೊಳ್ಳಲು ಬಂದಿದ್ದ. ಆತನ ಕಣ್ಣುಗಳು ಕೆಂಪಾಗಿದ್ದುದನ್ನು ನಾನು ಗಮನಿಸಿದೆ. ಅವನ ಕಣ್ಣುಗಳಿಗೆ ಸಾಂಕ್ರಾಮಿಕ ರೋಗ ಬಂದಿದೆ ಎಂದು ತಿಳಿದೆ. ವೃಂದಾವನದ ಚಿಕಿತ್ಸಾಲಯದಲ್ಲಿ ಕಣ್ಣಿನ ವಿಭಾಗದಲ್ಲಿ ಕೆಲಸ ಮಾಡುತ್ತ ಇದ್ದುದರಿಂದ ಪ್ರಥಮಚಿಕಿತ್ಸೆಯ ಪೆಟ್ಟಿಗೆಯನ್ನು ತುರ್ತು ಸಂದರ್ಭಕ್ಕಿರಲಿ ಎಂದು ನಾನು ಒಯ್ದಿದ್ದೆ. ಚಿಕಿತ್ಸಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದುದರಿಂದ ಔಷಧಗಳ ಉಪಯೋಗ, ಚಿಕಿತ್ಸಾಕ್ರಮಗಳನ್ನು ಚೆನ್ನಾಗಿ ತಿಳಿದಿದ್ದೆ. ನನ್ನ ಔಷಧದ ಪೆಟ್ಟಿಗೆಯಲ್ಲಿ ರೋಗನಿರೋಧಕ ಗುಳಿಗೆಗಳು, sulphanilamide powder, ಕಣ್ಣಿನ ರೋಗ ನಿವಾರಕ ಔಷಧಿ ಮುಂತಾದವುಗಳು ಇದ್ದವು. ಆ ಯುವಕನಿಗೆ ಚಿಕಿತ್ಸೆ ನೀಡಬೇಕೆಂದು ನನಗನ್ನಿಸಿತು. ಈ ವಿಚಾರವನ್ನು ತಿಳಿದಿದ್ದ ನನ್ನೊಂದಿಗಿದ್ದ, ಟಿಬೆಟ್ ಭಾಷೆ ಬಲ್ಲ ವ್ಯಾಪಾರಿಗೆ ತಿಳಿಸಿದೆ. ಅವನ ಕಣ್ಣುಗಳಿಗೆ ಸಾಂಕ್ರಾಮಿಕ ರೋಗ ಬಂದಿದೆ, ನನ್ನ ಬಳಿ ಅದಕ್ಕೆ ಔಷಧವಿದೆ, ನಾನು ಅದನ್ನು ಅವನಿಗೆ ಕೊಡಬೇಕೆಂದಿದ್ದೇನೆ, ಹಾಗೂ ಅದನ್ನು ದಿನಕ್ಕೆ ಮೂರು ಬಾರಿ ಅವನ ಕಣ್ಣುಗಳಿಗೆ ಹಚ್ಚಬೇಕೆಂದೂ ತಿಳಿಸಿದೆ. ಆ ಯುವಕ ನನ್ನ ಕಡೆಗೆ ನೋಡಿದ. ಆ ವ್ಯಾಪಾರಿಯ ಮೂಲಕ ಬಿಡಾರಕ್ಕೆ ಹೋಗಿ ಹಿಂತಿರುಗಿ ಬರುವುದಾಗಿ ನನಗೆ ತಿಳಿಸಿದ. ಅವನು ಒಂದು ಚರ್ಮದ ಸಣ್ಣ ಗಂಟನ್ನು ಕೈಯಲ್ಲಿ ಹಿಡಿದುಕೊಂಡು ಸ್ವಲ್ಪ ಸಮಯದಲ್ಲೇ ಹಿಂತಿರುಗಿ ಬಂದ. ನನ್ನ ಔಷಧಿಗಳಿಗೆ ಪ್ರತಿಯಾಗಿ ಆ ಗಂಟನ್ನು ನನಗೆ ಕೊಟ್ಟ. ಸಾಧುಗಳು ಉಚಿತವಾಗಿ ಕೊಟ್ಟಿದ್ದನ್ನು ಟಿಬೆಟ್ಟನ್ನರು ತೆಗೆದುಕೊಳ್ಳಬಯಸುವುದಿಲ್ಲ. ಅದಕ್ಕೆ ಪ್ರತಿಯಾಗಿ ಅವರು ಏನನ್ನಾದರೂ ಕೊಡಲಿಚ್ಛಿಸುತ್ತಾರೆ. ಆ ಚರ್ಮದ ಗಂಟಿನಲ್ಲಿ ಒಂದು ಫುಟ್‌ಬಾಲ್ ಚೆಂಡಿನಂಥ ಪದಾರ್ಥವನ್ನು ಯುವಕ ತಂದಿದ್ದ. ಅದು ಕುರಿಯದೋ, ಯಾಕ್‌ದೋ, ಮೇಕೆಯದೋ ಬೆಣ್ಣೆಯಾಗಿತ್ತು. ಚರ್ಮದ ಚೀಲದಲ್ಲಿ ಗಂಟು ಕಟ್ಟಿದ್ದರಿಂದ ಬೆಣ್ಣೆ



ಕರಗುವಂತಿರಲಿಲ್ಲ. ನಾನು ಆ ಗಂಟನ್ನು ಯುವಕನಿಂದ ಪಡೆದೆ; ಯುವಕ ನನ್ನಿಂದ ಔಷಧಿ ತೆಗೆದುಕೊಂಡು, ನನಗೆ 'ನಮಸ್ತೆ' ಎಂದು ಹೇಳಿ ಹೊರಟುಹೋದ. ಟಿಬೆಟ್ ಬೌದ್ಧರ ನಾಡಾದ್ದರಿಂದ ಸಾಧು ಸಂನ್ಯಾಸಿಗಳಿಗೆ ಅಲ್ಲಿ ವಿಶೇಷ ಗೌರವ. ಅವರ ಮತಧರ್ಮದಂತೆ ಸೇವಾಮನೋಭಾವ, ದಾನಸ್ವಭಾವವುಳ್ಳವರು ಅವರು.

ಸಹಜವಾಗಿ ಬೌದ್ಧರು ಉದಾರಿಗಳು ಮತ್ತು ದಾನಿಗಳು. ಯುವಕನ ಈ ನಡತೆ ಅದಕ್ಕೆ ಸಾಕ್ಷಿಯಂತೆ ಇತ್ತು. ಬರ್ಮಾದೇಶದ ಪುರಾತನ ರಾಜಧಾನಿ ಮಂಡಾಲೆಗೆ ಹೋಗುವಾಗ ಆದ ಒಂದು ಅನುಭವ ಇಲ್ಲಿ ನೆನಪಾಗುತ್ತಿದೆ. ಇರಾವತೀ ನದಿಯಲ್ಲಿ ದೋಣಿಯ ಮೇಲೆ ಪ್ರಯಾಣ ಮಾಡುತ್ತಿದ್ದೆ. ಅದು ಊಟದ ಸಮಯವಾಗಿತ್ತು. ನನ್ನೊಡನೆ ಪ್ರಯಾಣ ಮಾಡುತ್ತಿದ್ದ ಒಬ್ಬಾಕೆ ತಾಯಿ ನನ್ನ ಬಳಿಗೆ ಬಂದು ಪ್ರಣಾಮ ಮಾಡಿದಳು. ನನಗೆ ಬರ್ಮೀ ಭಾಷೆ ಗೊತ್ತಿರಲಿಲ್ಲ; ಆದ್ದರಿಂದ ಊಟ ಮಾಡುವಂತೆ ಆಕೆ ನನಗೆ ಸನ್ನೆಮಾಡಿ ಸೂಚಿಸಿದಳು. ನನ್ನ ಹೊಟ್ಟೆ ತುಂಬಿದ್ದರಿಂದ ನನಗೆ ತಿನ್ನುವ ಅಪೇಕ್ಷೆಯೇ ಇರಲಿಲ್ಲ. ಆಕೆಗೆ ನನ್ನ ಕೃತಜ್ಞತೆಗಳನ್ನು ಸೂಚಿಸುತ್ತಾ ನಾನೂ ಈ ವಿಚಾರವನ್ನು ಸನ್ನೆಯಿಂದಲೇ ತಿಳಿಸಿ, ನಮಸ್ಕರಿಸಿದೆ. ಬೌದ್ಧಮತಾವಲಂಬಿಗಳು ಸಾಧು-ಸಂನ್ಯಾಸಿಗಳು ಯಾವುದೇ ಮತಾವಲಂಬಿಗಳಾಗಿರಲಿ, ಯಾವುದೇ ವಯಸ್ಸಿನವರಿರಲಿ ಅವರಿಗೆ ಆದರಾತಿಥ್ಯ ನೀಡುತ್ತಾರೆ.

ಮಂಗ್‌ಲಾಂಗ್ ಎಂಬಲ್ಲಿ ಪವಿತ್ರ ಕ್ಷೇತ್ರವಿದೆಯೆಂದು ಕೆಲವು ಟಿಬೆಟಿಯನ್ನರು ಹೇಳಿದರು. ಟಿಬೆಟ್ ಪ್ರಸ್ಥಭೂಮಿಯ ಪಶ್ಚಿಮ ತುದಿಯಲ್ಲಿರುವ ಬೌದ್ಧ ಯಾತ್ರಾಕೇಂದ್ರವದು. ಟಿಬೆಟ್‌ನ ಪೂರ್ವಭಾಗದಲ್ಲಿ ಮಾನಸಸರೋವರ, ಕೈಲಾಸ ಪರ್ವತಗಳಿದೆಯೆಂದು ಕೇಳಿ ತಿಳಿದಿದ್ದೆ. ಮಂಗ್‌ಲಾಂಗ್ ತಲುಪುವ ಮಾರ್ಗವನ್ನು ಕುರಿತು ಪೂರ್ಣ ಮಾಹಿತಿ ಪಡೆದು, ನಾನು ಟಿಬೆಟ್‌ನ ಪಶ್ಚಿಮದತ್ತ ನನ್ನ ಪ್ರಯಾಣ ಮುಂದುವರೆಸಿದೆ. ಅದು ನಡೆದು ನಡೆದು ಸವೆದ ದಾರಿಯಾದ್ದರಿಂದ ದಾರಿ ಹುಡುಕಲು ಕಷ್ಟವಾಗಲಿಲ್ಲ. ಆದರೆ ಬಹಳ ಸಮಯ ನಡೆಯಬೇಕಾಯಿತು. ನಾನು ಸಾಗುತ್ತಿದ್ದ ದಾರಿಯಲ್ಲಿ ಕುದುರೆ, ಮೇಕೆ, ಯಾಕ್ ಮೊದಲಾದ ಪ್ರಾಣಿಗಳನ್ನು ಹೊರತುಪಡಿಸಿ ಮನುಷ್ಯರಾರೂ ಕಂಡುಬರಲಿಲ್ಲ. ಅದು ಸಂಪೂರ್ಣ ನಿರ್ಜನ ಪ್ರದೇಶವಾಗಿತ್ತು.

ಮಂಗ್‌ಲಾಂಗ್‌ನ ಬುದ್ಧ ದೇವಾಲಯವನ್ನು ನಾನು ತಲುಪಿದಾಗ ಸಂಜೆ ೭ ಘಂಟೆಯಾಗಿತ್ತು. ದೇವಾಲಯವನ್ನು ನಾನು ಪ್ರವೇಶಿಸುತ್ತಿದ್ದಂತೆ ಅಲ್ಲಿದ್ದ ಸಂನ್ಯಾಸಿ ಭಿಕ್ಷುಗಳು ನನ್ನನ್ನು ಸ್ವಾಗತಿಸಿ ಕುರಿಯ ಹಾಲು, ಚೀಸ್ ಮತ್ತು ಉಪ್ಪು ಚಹಾಗಳನ್ನು ನನಗೆ ಕೊಟ್ಟರು. ಅವರು ಚೀಸ್ ತಯಾರು ಮಾಡುವ ಕ್ರಮ ತುಂಬಾ ಸರಳವಾದುದು. ಮೇಕೆ ಅಥವಾ ಕುರಿಯ ಹಾಲನ್ನು ಸೂರ್ಯನ ಸುಡು ಬಿಸಿಲಿನಲ್ಲಿಟ್ಟಾಗ ಹಾಲೊಡೆದು, ನೀರು ಮತ್ತು ಗಟ್ಟಿ ಭಾಗ ಬೇರೆ ಬೇರೆಯಾಗುತ್ತವೆ. ಸೂರ್ಯನ ತಾಪಕ್ಕೆ ನೀರಿನ ಅಂಶವೆಲ್ಲ ಇಂಗಿ ಹೋಗಿ, ಗಟ್ಟಿ ಕೆನೆಭಾಗ ಮಾತ್ರ ಉಳಿಯುತ್ತದೆ. ಹೀಗೆ ಸಹಜವಾದ ರೀತಿಯಲ್ಲಿ ಅವರು ಚೀಸ್ ತಯಾರುಮಾಡುತ್ತಾರೆ. ನಾನು ಸಸ್ಯಾಹಾರಿಯಾಗಿದ್ದರಿಂದ, ದೇವಾಲಯ ಮತ್ತು ಬಿಡಾರಗಳಲ್ಲಿ ಸದಾ ಸಿದ್ಧವಾಗಿರುತ್ತಿದ್ದ ಚೀಸ್ ಮತ್ತು ಉಪ್ಪು ಚಹಾ ಕೊಟ್ಟರು. ಅದು ಶೀತಲ ನಾಡಾದುದರಿಂದ ಅವರು ಯಾರೂ ನೀರು ಕುಡಿಯುವುದಿಲ್ಲ, ಅದರ ಬದಲಿಗೆ ಉಪ್ಪು ಹಾಕಿದ ಚಹಾವನ್ನೇ ಕುಡಿಯುತ್ತಾರೆ.

ಹೊಟ್ಟೆ ತುಂಬಿ, ನಡೆದ ಆಯಾಸವೂ ಪರಿಹಾರವಾದ ಮೇಲೆ ನಾನು ದೇವಾಲಯದೊಳಕ್ಕೆ ಹೋದೆ. ಆಸನವೊಂದರಲ್ಲಿ ಕುಳಿತಿರುವ ೨೦ ಅಡಿ ಎತ್ತರದ ಬೃಹದಾಕಾರದ ಬುದ್ಧನ ವಿಗ್ರಹವನ್ನು ಕಂಡೆ. ಈ ಬುದ್ಧನ ವಿಗ್ರಹದ ಸುತ್ತಲೂ ಧ್ಯಾನಮುದ್ರೆಯಲ್ಲಿರುವ ಸಣ್ಣ ಸಣ್ಣ ಬುದ್ಧರನ್ನಿಟ್ಟು ಅಲಂಕರಿಸಿದ್ದರು. ಆ ದೊಡ್ಡ ದೇವಾಲಯದಲ್ಲಿ ಪ್ರತಿ ಸಣ್ಣ ಬುದ್ಧನ ವಿಗ್ರಹದ ನಡುನಡುವೆ ಬೇಕಾದಷ್ಟು ಟಿಬೆಟ್ ಗ್ರಂಥಗಳ ಹಸ್ತಪ್ರತಿಗಳಿದ್ದವು. ಅವೆಲ್ಲವೂ ಬೌದ್ಧಮತ ಪ್ರತಿಪಾದಕ ಗ್ರಂಥಗಳು ಎಂದು ಅವರು ತಿಳಿಸಿದರು. ಆ ಬೃಹದ್ದೇವಾಲಯದಲ್ಲಿ ಕುಳಿತು ನಾನು ನೆಮ್ಮದಿಯಿಂದ ಧ್ಯಾನ ಮಾಡಿದೆ.

ಮತ್ತೆ ಮರುದಿನ ನಾನು ಪೂರ್ವದಿಕ್ಕಿನ ಕಡೆಗೆ ಪ್ರಯಾಣ ಬೆಳೆಸಿದೆ. ಮತ್ತೊಮ್ಮೆ ನಾನು ಏಕಾಕಿ. ಕಾಲುದಾರಿಯಲ್ಲೇ ಸಾಗಬೇಕೆಂದೂ, ಬೇರೆ ಹಾದಿಗಳನ್ನು ಹಿಡಿಯಬಾರದೆಂದೂ ನನಗೆ ತಿಳಿಸಿದ್ದರು. ಸ್ವಲ್ಪ ದೂರ ಒಬ್ಬಂಟಿಯಾಗಿ ನಡೆದ ಮೇಲೆ, ಸಿಖ್ಖ್ ಮತಕ್ಕೆ ಸೇರಿದ, ಬಿಳಿಯ ವಸ್ತ್ರ ಧರಿಸಿದ್ದ ಒಬ್ಬ ಬ್ರಹ್ಮಚಾರಿಯನ್ನು ನಾನು ಭೇಟಿಯಾದೆ. ಆತನೂ ಕೈಲಾಸ ದರ್ಶನಕ್ಕಾಗಿ ಟಿಬೆಟ್ಟಿಗೆ ಬಂದಿದ್ದ. ನಾವಿಬ್ಬರೂ ಒಟ್ಟಿಗೆ ಪ್ರಯಾಣ ಮುಂದುವರೆಸಿದೆವು. ದಾರಿಯಲ್ಲಿ ಕುದುರೆ ಮೊದಲಾದ ಪ್ರಾಣಿಗಳಾಗಲೀ ವಿಶ್ರಾಂತಿಯ ಬಿಡಾರಗಳಾಗಲೀ ಇರಲಿಲ್ಲ. ಎಲ್ಲೆಲ್ಲೂ ಸಂಪೂರ್ಣ ನೀರವತೆ. ನಮ್ಮ ಬಳಿ ಇದ್ದ ಚೀಸ್ ಒಂದೇ ನಮಗೆ ಆಹಾರ.

ಕೈಲಾಸ ಶಿಖರದೆಡೆಗೆ : ಸೂರ್ಯಾಸ್ತವಾಗುವವರೆಗೆ ನಾವು ನಮ್ಮ ಪ್ರಯಾಣ ಮುಂದುವರೆಸಿದೆವು. ರಾತ್ರಿಯನ್ನು ಕಳೆಯಲು ನಮಗೆ ಯಾವ ಆಸರೆಯೂ ಕಾಣಲಿಲ್ಲ. ರಸ್ತೆ ಬದಿಯಲ್ಲೇ ನಾವು ರಾತ್ರಿ ಕಳೆಯಬೇಕಾಗಿತ್ತು. ನಮ್ಮಲ್ಲಿದ್ದ ಬೆಡ್‌ಶೀಟ್‌ಗಳನ್ನೇ ಹಾಸಿ, ಅಲ್ಲಿದ್ದ ಎರಡಡಿ ಎತ್ತರದ ಭಾರವಾದ ಕಲ್ಲುಗಳನ್ನು ಮೂರು ಬದಿಯಲ್ಲೂ ಜೋಡಿಸಿ, ಅದರ ಮೇಲೆ ಮತ್ತೆ ಇನ್ನೊಂದು ಶೀಟನ್ನು ಹಾಸಿ, ಮತ್ತೆ ಅದರ ಮೇಲೆ ಭಾರಕ್ಕೆ ಕಲ್ಲುಗಳನ್ನಿಟ್ಟು, ಇಬ್ಬರೂ ಪ್ರತ್ಯೇಕ ಬಿಡಾರ ಮಾಡಿಕೊಂಡೆವು. ಅಲ್ಲಿ ಹೇಗೋ ರಾತ್ರಿಯನ್ನು ಕಳೆಯುವುದೆಂದು ನಾವು ನಿಶ್ಚಯಿಸಿದೆವು. ಆದರೆ ವಿಪರೀತವಾದ ಚಳಿ, ಸುಂಯ್ ಗುಡುವ ಗಾಳಿಯ ಕಾರಣದಿಂದಾಗಿ ನಿದ್ರಿಸಲಾಗಲಿಲ್ಲ. ಅದೃಷ್ಟವಶಾತ್ ಕಾಡುನಾಯಿಗಳಾಗಲಿ, ತೋಳಗಳಾಗಲಿ ರಾತ್ರಿ ಹೊತ್ತು ನಮ್ಮ ಮೇಲೆ ಆಕ್ರಮಣ ಮಾಡಲಿಲ್ಲ. ಅಲ್ಲಿ ಕಾಡುನಾಯಿಗಳ ತಂಡ ಎಷ್ಟು ಕ್ರೂರವಾಗಿರುವುದೆಂದರೆ ಅವು ಮನುಷ್ಯರನ್ನೇ ಬೇಕಾದರೂ ತಿಂದು ಹಾಕಿಬಿಡುವುವು - ಎಂದು ನಮಗೆ ಯಾರೋ ಹೇಳಿದ್ದರು.

ಬೆಳಿಗ್ಗೆ ಬೇಗನೆ ಎದ್ದು ನಮ್ಮ ಗುರಿಯಾದ ಕೈಲಾಸ–ಮಾನಸ ಸರೋವರಕ್ಕೆ ಪೂರ್ವದಿಕ್ಕಿನ ಕಡೆಗೆ ಪ್ರಯಾಣ ಮುಂದುವರೆಸಿದೆವು.

ಹೀಗೆ ನಾನು ಸಾಗುತ್ತಿದ್ದಾಗ ಸುಮಾರು ೨೦೦ ಮೇಕೆ, ಕುರಿಗಳ ಹಿಂಡಿನೊಂದಿಗೆ ಇದ್ದ ಒಬ್ಬ ಕುರುಬನನ್ನು ಕಂಡೆ. ಅವನಿಂದ ಆಹಾರ ಪಡೆಯಬಹುದೆಂದು ನಾನು ಯೋಚಿಸಿದೆ. ದೂರದಿಂದಲೇ ನಾನು ಅವನನ್ನು ಕೂಗಿದೆ. ಅವನ ಕುರಿಮಂದೆ ನಿದ್ದೆ ಮಾಡುತ್ತಿತ್ತು. ಅವನು, 'ಖೀ ಖೀ' (ನಾಯಿ ನಾಯಿ) ಎಂದು ಟಿಬೆಟ್ ಭಾಷೆಯಲ್ಲಿ ಜೋರಾಗಿ ಕಿರುಚಿದ. ಕುರುಬರು ತೋಳಗಳ ಆಕ್ರಮಣದಿಂದ ಕುರಿಗಳನ್ನು ಕಾಪಾಡಲು ಈ ನಾಯಿಗಳನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಾರೆ. ಅವನ ನಾಯಿಯನ್ನು ಅವನು ನಿಯಂತ್ರಿಸಬೇಕೆಂದು ನಾನು ಬಯಸಿದೆ. ಆದರೆ ಅದು ನನ್ನೆಡೆಗೇ ಓಡಿಬಂತು. ಅದರ ಆಕ್ರಮಣದಿಂದ ತಪ್ಪಿಸಿಕೊಳ್ಳಲು ನನ್ನ ಬಳಿ ಒಂದು ದೊಣ್ಣೆಯೂ ಇರಲಿಲ್ಲ. ನಾಯಿ ನನ್ನ ಮೇಲೆ ಹಾರಿ, ನನ್ನನ್ನು ಕೆಳಗೆ ಬೀಳಿಸಿ, ತೊಡೆಯನ್ನು ಕಚ್ಚಿ ಓಡಿಹೋಯಿತು. ನನ್ನ ಬಟ್ಟೆಯೆಲ್ಲಾ ಹರಿದು ಹೋಯಿತು. ಹೆಚ್ಚು ಆಳವಾದ ಗಾಯವಾಗಲಿಲ್ಲ. ನಾಯಿ ಮುದಿಯಾಗಿದ್ದು, ಅದರ ಹಲ್ಲುಗಳಲ್ಲಿ ಬಲವಿರಲಿಲ್ಲವೆಂದು ಕಾಣುತ್ತದೆ. ನನ್ನೊಡನೆ ತಂದಿದ್ದ ಔಷಧಿ ಪೆಟ್ಟಿಗೆ ಈಗ ಸಹಾಯಕ್ಕೆ ಬಂತು, ಚಿಕಿತ್ಸೆ ಮಾಡಿಕೊಂಡೆ. ನಾಯಿ ಕಡಿದದ್ದು ನನ್ನ ಮೇಲೆ ವಿಪರೀತ ಪರಿಣಾಮವನ್ನೇನೂ ಉಂಟುಮಾಡಲಿಲ್ಲ. ಭಾರತಕ್ಕೆ ಹಿಂತಿರುಗಿ ಬಂದ ಮೇಲೆ ನಮ್ಮ ಕಿಶನ್‌ಪುರ್ ಆಶ್ರಮದಲ್ಲಿ ನನ್ನ ಹೊಟ್ಟೆಯ ಮೇಲೆ ಹದಿಮೂರು ಇಂಜೆಕ್ಷನ್ ತೆಗೆದುಕೊಳ್ಳಬೇಕಾಯಿತು.

ನಾಯಿಯ ಕಡಿತದಿಂದ ಎದೆಗುಂದದೆ ನಾನು ನನ್ನ ಗುರಿಯತ್ತ ಪ್ರಯಾಣ ಮುಂದುವರೆಸಿದೆ. ನನ್ನೊಡನೆ ಪಯಣಿಸುತ್ತಿದ್ದ ಸಿಖ್ಖ್ ಬ್ರಹ್ಮಚಾರಿ ದಾರಿ ಮಧ್ಯೆ ಎಲ್ಲೋ ಮರೆಯಾಗಿ ಹೋದ.

ಪ್ರಖರ ಬೇಸಿಗೆಯಾದ್ದರಿಂದ ಸ್ವಲ್ಪ ನಡೆಯುವುದರಲ್ಲೇ ಆಯಾಸವಾಗುತ್ತಿತ್ತು. ಬಾಯಾರಿಕೆ ತಡೆಯಲಾಗದೆ ಒಂದು ಮನೆಯ ಮುಂದೆ ನಿಂತು ಸ್ವಲ್ಪ ಮಜ್ಜಿಗೆ ಬೇಕೆಂದು ಬೇಡಿದೆ. ಮನೆಯ ಯಜಮಾನ ಒಳಗೆ ಹೋಗಿ ಒಂದು ಚರ್ಮದ ಚೀಲ ತಂದ. ಅದು ಒಣಭೂಮಿಗಳಲ್ಲಿ ನೀರನ್ನು ಹಂಚುವ ಚೀಲದಂತೆ ಕಂಡಿತು. ಚೀಲವನ್ನು ತೆರೆಯುವ ಮುನ್ನ ಚೀಲವನ್ನು ಚೆನ್ನಾಗಿ ಕುಲುಕಿದ. ಅದನ್ನು ತೆರೆಯುತ್ತಿದ್ದಂತೆ 'ಸ್‌ಸ್….' ಎಂದು ಪಾನೀಯದ ಬಾಟಲಿ ತೆರೆದಾಗ ಬರುವಂತಹ ಶಬ್ದ ಬಂತು. ಅವನು ನನ್ನ ನೀರಿನ ಪಾತ್ರೆಗೆ ಆ ಮಜ್ಜಿಗೆಯನ್ನು ಸುರಿದ. ಅದರಲ್ಲಿ ಮೇಕೆಯದೋ ಯಾಕ್‌ದೋ ಕೂದಲುಗಳು ತೇಲುತ್ತಿದ್ದುದನ್ನು ಕಂಡೆ. ಎಲ್ಲ ಕೂದಲುಗಳನ್ನೂ ಆಯ್ದು ತೆಗೆದೆಸೆದೆ. ಕುಡಿಯಲು ಬಾಯಿ ಹತ್ತಿರ ತಂದರೆ, ಕೆಟ್ಟು ಕೊಳೆತುಹೋದ ವಾಸನೆ ಮೂಗಿಗೆ ಬಡಿಯಿತು. ಇಷ್ಟು ಕೆಟ್ಟ ವಾಸನೆಯ ಮಜ್ಜಿಗೆಯನ್ನು ನಾನೆಂದೂ ಕುಡಿಯುತ್ತಿರಲಿಲ್ಲ. ಬಹಳ ಬಾಯಾರಿಕೆಯೂ ಆಯಾಸವೂ ಆಗಿದ್ದುದರಿಂದ ಮೂಗನ್ನು ಬಲವಾಗಿ ಮುಚ್ಚಿಕೊಂಡು, ವಿಧಿಯಿಲ್ಲದೆ ಕುಡಿಯಲೇಬೇಕಾಯಿತು.

ವಿಶ್ವಾಮಿತ್ರನಿಗೆ ಸಂಬಂಧಿಸಿದ ಒಂದು ಶ್ಲೋಕ ಆಗ ನೆನಪಾಯಿತು: ***'ಜೀವಿತಂ ಮರಣಾಚ್ಛ್ರೇಯಃ, ಜೀವನ್ ಧರ್ಮಮವಾಪ್ನುಯಾತ್'*** (ಸಾವಿಗಿಂತ ಬದುಕು ಲೇಸು, ಜೀವವಿದ್ದರೆ ಧರ್ಮವನ್ನು ಗಳಿಸಬಹುದು.) ಆ ಮುನಿಯ ಜೀವನದಲ್ಲಿ ನಡೆದ ಘಟನೆ ಈ ಹೇಳಿಕೆಗೆ ಕಾರಣವಿರಬಹುದು. ಅವರು ಬರಪೀಡಿತ ಪ್ರದೇಶದಲ್ಲಿ ಸಾಗುತ್ತಿದ್ದರು. ಭೂಮಿಯಲ್ಲಿ ಎಲ್ಲೆಲ್ಲೂ ಬರ, ಎಲ್ಲೂ ಆಹಾರ ಸಿಗುವ ಸೂಚನೆಯಿರಲಿಲ್ಲ. ಆಹಾರವನ್ನರಸುತ್ತಾ ಸಾಗುತ್ತಿದ್ದ ಅವರ ಸುತ್ತಾಟವೆಲ್ಲಾ ವ್ಯರ್ಥವೇ ಆಗುತ್ತಿತ್ತು. ಕೊನೆಗೆ ಅವರೊಂದು ಪರಯನ ಮನೆ ಕಂಡರು. ಅ ಮನೆಯ ಬಾಗಿಲಲ್ಲಿ ನಿಂತು ಭಿಕ್ಷೆ ಬೇಡಿದರು. ಅವನ ಬಳಿ ಕೊಳೆತು ನಾರುತ್ತಿದ್ದ ಮಾಂಸ ಬಿಟ್ಟು ಬೇರೇನೂ ಇರಲಿಲ್ಲ. ಅದು ಒಬ್ಬ ಯತಿಗೆ ಕೊಡುವ ಆಹಾರವಾಗಿರಲಿಲ್ಲ. ಆದುದರಿಂದ ಆತ, 'ಮನೆಯಲ್ಲಿ ಏನೂ ಆಹಾರವಿಲ್ಲ' ಎಂದ. ವಿಶ್ವಾಮಿತ್ರ ಕಳ್ಳತನದಿಂದ ಅವರ ಮನೆಗೆ ನುಗ್ಗಿ ಆ ಕೊಳೆತ ಮಾಂಸವನ್ನು ತಿಂದು ಹಸಿವು ನೀಗಿಸಿಕೊಂಡು ಜೀವವನ್ನು ಉಳಿಸಿಕೊಂಡರು.

ನಿಧಾನವಾಗಿ ನಾನು ಪವಿತ್ರ ಮಾನಸಸರೋವರವನ್ನು ಸಮೀಪಿಸುತ್ತಿದ್ದೆ. ಸಂಜೆಯಾಗುತ್ತಿತ್ತು, ಅದೃಷ್ಟವಶಾತ್ ರಾತ್ರಿಯನ್ನು ಕಳೆಯಲು ಒಂದು ಗುಡಾರ ಕಣ್ಣಿಗೆ ಬಿತ್ತು. ಆ ಗುಡಾರದಲ್ಲಿ ಒಬ್ಬಿಬ್ಬರು ಭಾರತೀಯರು ಇದ್ದರು. ಬಹುಶಃ ಅವರೂ ಯಾತ್ರಿಕರಿದ್ದಿರಬಹುದು. ಅವರೂ ಮಾನಸಸರೋವರದಲ್ಲಿ ಸ್ನಾನ ಮಾಡಿ, ಕೈಲಾಸಪತಿಯ ದರ್ಶನ ಮಾಡಲೆಂದು ಹೊರಟಿದ್ದರು.

ಮರುದಿನ ಬೆಳಿಗ್ಗೆ ನಿತ್ಯಕರ್ಮಗಳನ್ನೆಲ್ಲಾ ಮುಗಿಸಿ ಉಪಾಹಾರ ಮಾಡಿದ ನಂತರ, ಸರೋವರದ ಕಡೆಗೆ ಹೊರಟೆವು. ಹಿಮಾಲಯ ಪರ್ವತಶ್ರೇಣಿಯ ದಕ್ಷಿಣ ದಿಗಂತದೊಡನೆ ಟಿಬೆಟ್ ಪ್ರಸ್ಥಭೂಮಿ ಸೇರುವ ಜಾಗದಲ್ಲಿ ಆ ವಿಶಾಲವಾದ ಸರೋವರವಿದೆ. ಬೇಗನೆ ನಾವು ಸರೋವರದ ತೀರವನ್ನು ತಲುಪಿದೆವು. ಬಿಸಿಲು ಪ್ರಖರವಾಗಿದ್ದ ಕಾರಣ ವಾತಾವರಣ ಬೆಚ್ಚಗಿತ್ತು. ಸರೋವರದ ನೀರು ಅತ್ಯಂತ ನಿರ್ಮಲವಾಗಿತ್ತು. ನಾನು ಆ ನೀರಿನಲ್ಲಿ ಸ್ನಾನಮಾಡಿ, ಸ್ವಲ್ಪ ಕಾಲ ಈಜಾಡಿದೆ ಕೂಡ. ನಾನು ಈಜುತ್ತಿದ್ದಾಗ ೩–೪ ಅಡಿಗಳಷ್ಟು ದೊಡ್ಡ ಗಾತ್ರದ ಮೀನುಗಳು ನನ್ನ ಸುತ್ತ ಪ್ರೀತಿಯಿಂದ ಸುತ್ತುತ್ತಿದ್ದವು. ಬಹುಶಃ ಅಲ್ಲಿ ಈಜುವ ಎಲ್ಲ ಯಾತ್ರಿಕರೊಡನೆಯೂ ಅವು ಹೀಗೆಯೇ ಸಲುಗೆಯಿಂದಿರಬಹುದು. ನಾನಾ ಬಣ್ಣದ, ಬೇರೆ ಬೇರೆ ಗಾತ್ರದ ಸಾವಿರಾರು ನೀರು ಹಕ್ಕಿಗಳು ಮೀನು ಹಿಡಿಯಲು ನೀರಿನಲ್ಲಿ ಮುಳುಗುಹಾಕುತ್ತಿದ್ದುದನ್ನು ನಾವು ನೋಡಿದೆವು. ಚಳಿಗಾಲದಲ್ಲಿ ಸರೋವರದ ನೀರು ಹೆಪ್ಪುಗಟ್ಟುವುದರಿಂದ ನೀರು ಹಕ್ಕಿಗಳೆಲ್ಲ ಎಲ್ಲೋ ಹೋಗಿ ಬಿಡುತ್ತಿದ್ದವು. ಆಗ ಹಿಮಗಡ್ಡೆಗಳ ಅಡಿಯಲ್ಲಿ ಮೀನುಗಳೆಲ್ಲ ಕ್ಷೇಮವಾಗಿರುತ್ತವೆ.

ತೀಕ್ಷ್ಣ ಬಿಸಿಲಿನಲ್ಲಿ ಈಜು, ಪವಿತ್ರ ಸ್ನಾನ, ನನ್ನಲ್ಲಿ ಹೊಸ ಹುರುಪು – ಉತ್ಸಾಹಗಳನ್ನುಂಟುಮಾಡಿದವು. ನಾನು ಕೈಲಾಸದತ್ತ ನಡಿಗೆ ಮುಂದುವರೆಸಿದೆ.

(ಮುಂದುವರಿಯುವುದು)





ಗುರುವಿನ ಆದರ್ಶ ಮತ್ತು ಆಧುನಿಕ ಶಿಕ್ಷಣ

ಡಾ.ಡಿ.ಕೆ. ರಾಜೇಂದ್ರ

ಆಧುನಿಕ ವಿದ್ಯಾಭ್ಯಾಸದಲ್ಲಿ ಸಾಂಸ್ಕೃತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಅತ್ಯಂತ ಆವಶ್ಯಕವೆಂಬ ವಿಚಾರವನ್ನು ಈ ಲೇಖನದಲ್ಲಿ ನಿರೂಪಿಸಲಾಗಿದೆ. ಲೇಖಕರು ಕನ್ನಡದ ಹಿರಿಯ ವಿದ್ವಾಂಸರು ಹಾಗೂ ಸಾಹಿತಿಗಳು.

ಶಿಕ್ಷಣ ಎಂದೊಡನೆ ಮೊದಲು ನಮ್ಮ ಗಮನಕ್ಕೆ ಬರುವುದು ಗುರು–ಶಿಷ್ಯ ಸಂಬಂಧ. ಈ ಎರಡು ಸಂಬಂಧಗಳ ಮೊತ್ತವೇ ಶಿಕ್ಷಣ. ಈ ಎರಡರ ನಂಟು ಎಷ್ಟು ಗಟ್ಟಿಯಾಗಿರುತ್ತದೊ, ಮೌಲ್ಯಾಧಾರಿತವಾಗಿರುತ್ತದೊ ಅದರಿಂದ ಹೊರಹೊಮ್ಮುವ ಫಲಿತವೂ ಅಷ್ಟೇ ಮೌಲ್ಯಾಧಾರಿತವಾಗಿರುತ್ತದೆ. ಇದಕ್ಕೆ ತನ್ನದೇ ಆದ ಇತಿಹಾಸವಿದೆ, ಪರಂಪರೆಯೂ ಇದೆ. ಪ್ರಾಚೀನ ಕಾಲದಲ್ಲಿ 'ಗುರುಕುಲ' ಪದ್ಧತಿಯ ವಿದ್ಯಾಭ್ಯಾಸ ರೂಢಿಯಲ್ಲಿತ್ತು. ಅಲ್ಲಿ ಗುರುವಿಗೇ ಪ್ರಾಧಾನ್ಯ. ಶಿಷ್ಯನು ಗುರುವಿನ ಮಾರ್ಗದರ್ಶನದಲ್ಲಿ ನಿಜವಾದ ಅರ್ಥದ ಶಿಕ್ಷಣವನ್ನು ಪಡೆಯುತ್ತಿದ್ದ. ಪರಿಪೂರ್ಣ ವ್ಯಕ್ತಿತ್ವದ ನಿರ್ಮಾಣಕ್ಕೆ ಅದು ಕಾರಣವಾಗುತ್ತಿತ್ತು. ವೇದ, ಉಪನಿಷತ್ತುಗಳಂತಹ ಮಹತ್ವದ ಗ್ರಂಥಾಧ್ಯಯನದ ಜೊತೆಗೆ ಇತರ ವಿಷಯಗಳಾದ ಗಣಿತ, ಜ್ಯೋತಿಷ್ಯ, ಖಗೋಳ, ನೀತಿ, ನಾಟ್ಯಕಲೆ, ವೈದ್ಯ ಇತ್ಯಾದಿ ವಿಷಯಗಳ ಅಧ್ಯಯನವೂ ನಡೆಯುತ್ತಿತ್ತು. ಇಲ್ಲೆಲ್ಲಾ 'ಗುರು' ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಎಲ್ಲ ವಿಷಯಗಳನ್ನೂ ಬೋಧಿಸಲು ಮುಂದಾಗುತ್ತಿದ್ದರು.

'ಗುರುಕುಲ'ದ ಶಿಕ್ಷಣ ಒಂದೆಡೆಯಾದರೆ, ಮತ್ತೊಂದೆಡೆ ಅರಿವಿಗೇ ಬಾರದೆ ಸಹಜಗತಿಯಲ್ಲಿ ನಡೆಯುತ್ತಿದ್ದ ಶಿಕ್ಷಣ ಪದ್ಧತಿಯೂ ಜಾರಿಯಲ್ಲಿತ್ತು. ಅದೇ ಜಾನಪದ ಶಿಕ್ಷಣ. ಅದರಲ್ಲಿ ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು. ಬದುಕಿಗೆ ಬೇಕಾದ ಎಲ್ಲ ವಿದ್ಯೆಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು. 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬಂತೆ ವ್ಯಕ್ತಿ ಸಂಬಂಧವಾದ ಶಿಕ್ಷಣವನ್ನೂ ಕೊಡುವುದರ ಜೊತೆಗೆ, ವ್ಯಕ್ತಿತ್ವ ನಿರ್ಮಾಣಕ್ಕೆ ಅವಶ್ಯವಾದ, ಮೌಲ್ಯಭರಿತ ನೀತಿಬೋಧನೆಯೂ ಸದ್ದುಗದ್ದಲವಿಲ್ಲದೆ ನಡೆಯುತ್ತಿತ್ತು. ಗುರುಕುಲ ಶಿಕ್ಷಣ ಪದ್ಧತಿಗಿಂತ ಇದು ಭಿನ್ನವಾದುದಾಗಿತ್ತು. ಬದುಕಿನ ಜೊತೆಯಲ್ಲಿಯೇ ಬದುಕನ್ನು ಅರ್ಥಮಾಡಿಕೊಂಡು, ಅದರ ಮೌಲ್ಯಗಳನ್ನು, ಆದರ್ಶಗಳನ್ನು ಮೈದುಂಬಿಕೊಳ್ಳುವುದು ಇಲ್ಲಿಯ ವಿಶೇಷ. ಅದು ಹೆಣ್ಣು–ಗಂಡೆನ್ನದೆ ಇಬ್ಬರಿಗೂ ಸರಿಸಮಾನವಾದುದಾಗಿತ್ತು. 'ಮನೆಗೆದ್ದು ಮಾರುಗೆಲ್ಲು' ಎನ್ನುವಂತೆ, ಮುಂದೆ ಸಮಾಜದಲ್ಲಿ ಸ್ವತಂತ್ರವಾಗಿ ಬದುಕನ್ನು ನಡೆಸಲು ಬೇಕಾದ ಎಲ್ಲ ತರಬೇತಿ ಇಲ್ಲಿ ತಂದೆ–ತಾಯಿ ಮತ್ತು ಮನೆಯ ಹಿರಿಯರಿಂದ ನಡೆಯುತ್ತಿತ್ತು:

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ದೊರೆಯೆ
ಜ್ಯೋತಿಯೇ ಆಗು ಜಗಕೆಲ್ಲ ।।

ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ
ಸ್ವಾಮಿ ಚೆಲುವಯ್ಯನ ಸಿರಿಪಾದ । ನೆನೆದಾರೆ
ಬಂದೋಟು ಪಾಪ ಪರಿಹಾರ ।।

ಇದು ಅಲ್ಲಿಯ ಮೌಲ್ಯಾಧಾರಿತ ಬೋಧನೆಯ ಕ್ರಮವಾಗಿತ್ತು. ಅದು ಬದುಕಿನೊಂದಿಗೇ ಅರಳಿ ನಿಂತದ್ದು ಹಾಗೂ ಸಂಸ್ಕಾರಯುತವಾದುದಾಗಿತ್ತು.

ಆದರೆ ಇಂದು ಶಿಕ್ಷಣದ ರೀತಿ ಬದಲಾಗಿದೆ, ನೀತಿ ಬದಲಾಗಿದೆ. ಆಧುನಿಕ ಶಿಕ್ಷಣದ ಕ್ರಮ ಮೇಲಿನ ಎರಡು ಪದ್ಧತಿಗಳಿಗಿಂತ ವಿಭಿನ್ನವೆನಿಸಿದೆ. ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ ಆಧುನಿಕ ಶಿಕ್ಷಣ ತನ್ನದೇ ಆದ ಹಾದಿಯನ್ನು ಹಿಡಿದಿದೆ. ಒಂದು ರೀತಿಯಲ್ಲಿ ಅದು ವ್ಯಕ್ತಿಯನ್ನು ವೃತ್ತಿಜೀವನಕ್ಕೆ ಅಳವಡಿಸಿ, ಅವನ ಬದುಕಿಗೆ ದಾರಿ ಮಾಡಿಕೊಡುವಲ್ಲಿ ಪರ್ಯವಸಾನಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಶಿಕ್ಷಣ ಕ್ರಮದಲ್ಲಿ ಮೇಲಿನ ಎರಡು ಶಿಕ್ಷಣ ಕ್ರಮಗಳಲ್ಲಿ ಇದ್ದ ಆದರ್ಶವಾಗಲಿ, ಗುರಿಯಾಗಲಿ, ನೈತಿಕತೆಯನ್ನು ತುಂಬುವ ಉದ್ದೇಶವಾಗಲಿ ಇಲ್ಲವಾಗಿರುವುದು ದೊಡ್ಡ ದುರಂತವೇ ಆಗಿದೆ. ಹಾಗಾದರೆ ನಾವು ಎಲ್ಲಿ ಎಡವಿದ್ದೇವೆ? ತಪ್ಪಾಗಿರುವುದಾದರೂ

ಎಲ್ಲಿ? ಇದನ್ನು ಸರಿಪಡಿಸುವುದಾದರೂ ಹೇಗೆ? ಇಂತಹ ಹತ್ತಾರು ಪ್ರಶ್ನೆಗಳು ಎದುರಾಗುವುದು ಸಹಜ. ಇದನ್ನು ಕಂಡುಕೊಳ್ಳುವ ಅಗತ್ಯ ಬಹಳವಾಗಿಯೇ ಇದೆ.

ಹಾಗಾದರೆ ನಿಜವಾದ ಶಿಕ್ಷಣವೆಂದರೆ ಯಾವುದು? ಅದು ಹೇಗಿರಬೇಕು? ಅದರಲ್ಲಿ ಯಾರ ಯಾರ ಪಾತ್ರ ಎಷ್ಟು? ಇವುಗಳ ಕಡೆಗೆ ಗಮನ ಹರಿಸುವುದು ಅನಿವಾರ್ಯ.

'ಕನ್ನಡ ವಿಶ್ವಕೋಶ'ದಲ್ಲಿ ಶಿಕ್ಷಣ ಎಂದರೆ ಏನು? ಎನ್ನುವುದರ ಬಗ್ಗೆ ಹೀಗೆ ಉಲ್ಲೇಖವಿದೆ: 'ಸಂಚಿತಜ್ಞಾನ, ಕುಶಲತೆ, ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಸಮುದಾಯದ ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವರ್ಗಾಯಿಸುವ ವಿಧಾನವನ್ನು, ಅರ್ಥಾತ್ ಅಪೇಕ್ಷಿತ ಜ್ಞಾನ, ಕುಶಲತೆ, ಮೌಲ್ಯ ಇವೇ ಮೊದಲಾದುವನ್ನು ವ್ಯಕ್ತಿ ಮೈಗೂಡಿಸಿಕೊಳ್ಳುವಂತೆ ಮಾಡುವ ಪ್ರತಿಕ್ರಿಯೆಗಳ ಗುಚ್ಛವನ್ನು ಶಿಕ್ಷಣ ಎಂದು ಉಲ್ಲೇಖಿಸುವುದು ರೂಢಿ' ಎಂದು ಹೇಳಿ, ಅದರ ಮತ್ತೊಂದು ವಿಸ್ತೃತ ಅರ್ಥವನ್ನೊಳಗೊಂಡ ಅಭಿಪ್ರಾಯವನ್ನೂ ಹೀಗೆ ದಾಖಲಿಸಿದೆ: 'ವಿಶ್ವವಿದ್ಯಾನಿಲಯದಲ್ಲಿ ಏನು ಜರುಗುತ್ತದೋ ಅದೇ ಶಿಕ್ಷಣ – ಎಂಬ ಸಂಕುಚಿತ ದೃಷ್ಟಿಕೋನದಿಂದ ಮೊದಲ್ಗೊಂಡು ಜೀವನಾದ್ಯಂತ ಉಂಟುಮಾಡುವ ಎಲ್ಲ ಅನುಭವಗಳ ಸರ್ವನಾಮವೇ ಶಿಕ್ಷಣ.' ಹೀಗೆ ಶಿಕ್ಷಣವನ್ನು ಕುರಿತ ವಿಭಿನ್ನ ಅನಿಸಿಕೆಗಳು, ಅಭಿಪ್ರಾಯಗಳು ಸಾಕಷ್ಟು ಪ್ರಮಾಣದಲ್ಲಿ ಹೊರಹೊಮ್ಮಿವೆ.

ಗುರುಕುಲ ಶಿಕ್ಷಣ ಕ್ರಮದಲ್ಲಾಗಲಿ, ಜನರ ಶಿಕ್ಷಣ ಕ್ರಮದಲ್ಲಾಗಲಿ ಅಥವಾ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲಾಗಲಿ, ಯಾವುದನ್ನೇ ಸೂಕ್ಷ್ಮವಾಗಿ ಗಮನಿಸಿದರೂ ಅವುಗಳಲ್ಲಿ 'ಗುರು' ಸಾಮಾನ್ಯ. ಗುರುವಿನ ಮಾರ್ಗದರ್ಶನದಲ್ಲಿಯೇ ಎಲ್ಲವೂ ನಡೆಯಬೇಕೆಂಬ ಉದ್ದೇಶ ಹೊಂದಿರುವುದನ್ನು ಕಾಣುತ್ತೇವೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಹಿರಿಯೋಕ್ತಿಯೇ ಇದೆ. ಆದರೆ ಅಂತಹ ಗುರುವನ್ನು ಪಡೆಯುವುದಾದರೂ ಹೇಗೆ? ಗುರುವಾದರೂ ಹೇಗಿರಬೇಕು? ಅವನ ಆದರ್ಶಗಳಾದರೂ ಏನು? ಅವನ ಗುಣಗಳಾದರೂ ಏನು? ಸ್ವಾಮಿ ವಿವೇಕಾನಂದರಿಗೆ ಶ್ರೀರಾಮಕೃಷ್ಣರು ದೊರೆತಂತೆ ಎಲ್ಲರಿಗೂ ದೊರೆಯಲು ಏಕೆ ಸಾಧ್ಯವಾಗುತ್ತಿಲ್ಲ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೆ ಎದುರಾಗುವುದನ್ನು ಕಾಣುತ್ತೇವೆ. ಹಾಗಾದರೆ ನಿಜವಾದ ಗುರುವಿನ ಶಕ್ತಿ ಎಂತಹುದು?

ನಿಜವಾದ ಗುರು ತಪೋಬಲವುಳ್ಳವನಷ್ಟೇ ಅಲ್ಲ,
ಸಾಕ್ಷಾತ್ಕಾರದ ಸವಿಯನ್ನು ಉಂಡವನು.
ಅವನು ಯಾರನ್ನು ತನ್ನ ಶಿಷ್ಯನನ್ನಾಗಿ
ಪ್ರೀತಿಯಿಂದ ಸ್ವೀಕರಿಸುತ್ತಾನೋ
ಅವನಲ್ಲಿ ತನ್ನ ಆಧ್ಯಾತ್ಮಿಕ ಶಕ್ತಿಯನ್ನು
ಮೆಲ್ಲಮೆಲ್ಲನೆ ಹರಿಯಿಸಲಾರಂಭಿಸುತ್ತಾನೆ.
ಶಿಷ್ಯನು ಗುರುವಿನ ಬೋಧನೆಯ ಪ್ರಕಾರ
ಸಾಧನೆಯನ್ನು ಮಾಡುತ್ತ ಬಂದಂತೆ
ಗುರುಶಕ್ತಿ ಪ್ರವಹಿಸುವುದು ತೀವ್ರವಾಗುತ್ತದೆ.

(ಸ್ವಾಮಿ ಪುರುಷೋತ್ತಮಾನಂದ)

ವಿದ್ಯೆಯಲ್ಲಿ ಪ್ರಧಾನವಾಗಿ ನಾವು ಗುರುತಿಸಬಹುದಾದ – ಲೌಕಿಕವಿದ್ಯೆ, ಅಲೌಕಿಕ ವಿದ್ಯೆಗಳೆರಡಕ್ಕೂ ಇದು ಅನ್ವಯಿಸುವಂತಹುದು. ಎರಡರಲ್ಲಿಯೂ ಗುರುವಿನ ಸ್ಥಾನ ಒಂದೇ. ಐಹಿಕ ಜೀವನದ ವಿವರಗಳನ್ನೊಳಗೊಂಡ ಲೌಕಿಕ ವಿದ್ಯೆ, ಆಧ್ಯಾತ್ಮಿಕ ಜೀವನದ ಮರ್ಮವನ್ನು ತಿಳಿಸುವ ಅಲೌಕಿಕ ವಿದ್ಯೆ – ಇವೆರಡೂ ಬೇರೆ ಬೇರೆ ಎನಿಸಿದರೂ ಪರಿಪೂರ್ಣ ವ್ಯಕ್ತಿತ್ವದ ಜೀವನಕ್ಕೆ ಎರಡೂ ಮುಖ್ಯವೆ. ಇವೆರಡೂ ಒಂದಕ್ಕೊಂದು ಪೂರಕ, ಪ್ರೇರಕವಾದಾಗ ಮಾತ್ರ ಬದುಕು ಹಾಗೂ ವ್ಯಕ್ತಿತ್ವ ಪೂರ್ಣವೆನಿಸಲು ಸಾಧ್ಯ. ಆಧ್ಯಾತ್ಮಿಕ ವಿದ್ಯೆಯೆಂದರೆ ಪೂರ್ಣ ಅದರಲ್ಲಿಯೇ ಮುಳುಗಿ ಲೌಕಿಕವನ್ನು ಕಡೆಗಣಿಸುವುದೆಂದಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ 'ಅನುಷ್ಠಾನ ವೇದಾಂತ' ದ ಅರಿವು ಮುಖ್ಯ. ಅವರ ದೃಷ್ಟಿಯಲ್ಲಿ ಪ್ರಯೋಜನಕ್ಕೆ ಬಾರದ ಯಾವುದೊಂದು ವಿದ್ಯೆಯೂ ಅಪ್ರಯೋಜಕ. ಅದು ನಮ್ಮಲ್ಲಿರುವ ಸಂಕುಚಿತ ಭಾವನೆಗಳನ್ನು ತೊಡೆದುಹಾಕಿ ವಿಶಾಲತೆಯನ್ನು ಮೂಡಿಸುವಂತಿರಬೇಕು. ಅಧ್ಯಾತ್ಮವಿದ್ಯೆ ಕೇವಲ ಒಬ್ಬ ವ್ಯಕ್ತಿಯ ಅಥವಾ ಒಂದು ಸಮೂಹದ ಪ್ರಯೋಜನಕ್ಕೆ ಕಾರಣವಾದರಷ್ಟೇ ಸಾಲದು. ಅದು ಎಲ್ಲರ ಪ್ರಯೋಜನಕ್ಕೂ ಬರುವಂತಾಗಬೇಕು ಎಂಬ ಹಿನ್ನೆಲೆಯಲ್ಲಿ ಅವರು ಹೇಳುವ: 'ಧರ್ಮದ ರಹಸ್ಯವಿರುವುದು ಸಿದ್ಧಾಂತದಲ್ಲಲ್ಲ, ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು – ಇದೇ ಧರ್ಮದ ರಹಸ್ಯ' ಎಂಬ ಮಾತಿನ ಅರಿವನ್ನು ಸರ್ವರಲ್ಲಿಯೂ ಮನದಟ್ಟಾಗಿಸಬಲ್ಲ ಗುರುವಿನ ಅಗತ್ಯವಿದೆ. ಈ ಒಂದು ದೃಷ್ಟಿಯಿಂದ ನೋಡುವಾಗ ಸ್ವಾಮಿ ವಿವೇಕಾನಂದರು ಗುರುವಿನ ಗುರುವಾಗಿ ಒಬ್ಬ ಆದರ್ಶ ಗುರುವೆನಿಸುತ್ತಾರೆ. ಲೌಕಿಕ–ಅಲೌಕಿಕಗಳೆರಡನ್ನೂ ಅಂತರ್ಗತವಾಗಿಸಿಕೊಂಡು ಪ್ರತಿಯೊಬ್ಬರ ಒಳಿತಿಗೆ ಶ್ರಮಿಸುವ ಮನೋಭಾವದ ಗುರುವೇ ನಿಜವಾದ ಗುರು. ಪಠ್ಯದಲ್ಲಿರುವುದನ್ನು ಬೋಧಿಸಿ, ಅರ್ಥಹೇಳಿ, ವಿವರಣೆ ಕೊಡುವವನು ಎಂದಿಗೂ ನಿಜವಾದ ಗುರುವೆನಿಸಲಾರ. ಆ ಮೂಲಕ ಶಿಷ್ಯನ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಗೆ ಶಕ್ತಿ ತುಂಬಿದಾಗ ಮಾತ್ರ ನಿಜವಾದ ಗುರುವೆನಿಸಲು ಸಾಧ್ಯ.

ಇದಲ್ಲದೆ ಪ್ರತಿಯೊಬ್ಬರಲ್ಲಿಯೂ ಅಂತರ್ಯಾಮಿಯಾದ ಗುರುವೊಬ್ಬ ಇದ್ದೇ ಇರುತ್ತಾನೆ. ಆದರೆ ಅದರತ್ತ ನಾವು ಕಿವಿಯನ್ನಾಗಲಿ, ಮನಸ್ಸನ್ನಾಗಲಿ ಹರಿಸುವುದೇ ಇಲ್ಲ. 'ಬುದ್ಧಿ–ಮನಸ್ಸು' ಇಲ್ಲದ ಯಾವೊಬ್ಬ ವ್ಯಕ್ತಿಯೂ ಇರಲು ಸಾಧ್ಯವಿಲ್ಲ. ಅವೆರಡರಲ್ಲಿ ಹೊಂದಾಣಿಕೆಯುಂಟಾದರೆ ಬದುಕು ನಿರಾಳವೆನಿಸುತ್ತದೆ. ಇತರರಿಗೂ ಅದರಿಂದ ಒಳಿತಾಗುತ್ತದೆ. ಆದರೆ ನಾವು ಸೋಲುವುದು ಇಲ್ಲಿಯೇ. ಬುದ್ಧಿ ಸೂಚಿಸಿದ್ದನ್ನು ಅನೇಕ ವೇಳೆ ಮನಸ್ಸು ತಿರಸ್ಕರಿ

ಸುತ್ತದೆ, ಹಾಗೆಯೇ ಮನಸ್ಸು ಹೇಳಿದ್ದನ್ನು ಬುದ್ಧಿ ಅಲ್ಲಗಳೆಯುತ್ತದೆ. ಇಂತಹ ಸಂದರ್ಭದಲ್ಲಿಯೇ ಅಂತರ್ಯಾಮಿಯಾದ ಗುರುವಿನ ಅಗತ್ಯ ಗೋಚರಿಸುವುದು. ಸ್ವಾಮಿ ಪುರುಷೋತ್ತಮಾನಂದರ ಮಾತು ಇಲ್ಲಿ ಉಲ್ಲೇಖಾರ್ಹ:

ಸರ್ವರಲ್ಲಿಯೂ ಅಂತರ್ಯಾಮಿಯಾಗಿರುವ
ಸಚ್ಚಿದಾನಂದಗುರುವೇ ನಿಜವಾದ ಗುರು
ಆತ ಜನ್ಮಜನ್ಮಗಳಿಂದಲೂ ನಮ್ಮೊಂದಿಗೇ ಇದ್ದು
ಸುಖ ಕೊಟ್ಟೂ ಪಾಠ ಕಲಿಸುತ್ತಾನೆ,
ಕಷ್ಟ ಕೊಟ್ಟೂ ಪಾಠ ಕಲಿಸುತ್ತಾನೆ,
ನಾವು ಸತ್ಕಾರ್ಯ ಮಾಡುವುದನ್ನೂ ನೋಡುತ್ತಾನೆ,
ನಾವು ದುಷ್ಕಾರ್ಯ ಮಾಡುವುದನ್ನೂ ನೋಡುತ್ತಾನೆ !
ಆ ಎರಡರ
ಸಿಹಿ-ಕಹಿ ಫಲಗಳನ್ನುಣ್ಣುವಾಗ ಕೇಳುತ್ತಾನೆ –
''ಹೇಗಿದೆ ಸಿಹಿ?''
''ಹೇಗಿದೆ ಕಹಿ?''
ಆ ಅಂತರ್ಯಾಮಿಗುರು ಕಲಿಸುವ ಪಾಠ
ವೈವಿಧ್ಯಮಯ! ವೈಚಿತ್ರ್ಯಪೂರ್ಣ!

'ಬದುಕು ಎಲ್ಲವನ್ನೂ ಕಲಿಸುತ್ತದೆ' ಎಂಬ ಮಾತಿದೆ. ಅಂದರೆ ಅದರಲ್ಲಿ ಉಂಟಾಗುವ ಏರಿಳಿತಗಳು, ಕಷ್ಟ-ನಷ್ಟಗಳು ಸುಖ-ದುಃಖಗಳು ನಮಗೆ ಸಂತೋಷವನ್ನು ಕೊಡುವಂತೆಯೇ, ಎಚ್ಚರಿಕೆಯ ಗಂಟೆಯನ್ನೂ ಬಾರಿಸುತ್ತವೆ. ಆದರೆ ನಾವು ಅದಕ್ಕೆ ಕಿವಿಗೊಡದೆ ಮುನ್ನುಗ್ಗುತ್ತೇವೆ. ನಮ್ಮಲ್ಲೊಬ್ಬ ಅಂತರ್ಯಾಮಿ ಗುರುವಿದ್ದಾನೆ ಎಂಬುದನ್ನು ಮರೆಯುತ್ತೇವೆ.

ಸ್ವಾಮಿ ವಿವೇಕಾನಂದರು ಹೇಳಿದ 'ಅನುಷ್ಠಾನ ವೇದಾಂತ'ದ ಸಾರದಂತೆಯೇ ಕುವೆಂಪು ಅವರು ಹೇಳಿದ:

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

ಎಂಬ ಮಾತಿನಲ್ಲಿಯೂ ನಮ್ಮ ಮನದಲ್ಲಿ ಮನೆಮಾಡಿರುವ ಗುರುವಿನ ಬಗ್ಗೆ ಸೂಚನೆಯಿದೆ. ಎದೆಯ ದನಿ ನಿಜವಾದ ಗುರು, ಮಾರ್ಗದರ್ಶಕ. ನಾವು ಮಾಡಬಹುದಾದ ಅನೇಕ ಪಾಪಕಾರ್ಯಗಳಿಗೆ ತಡೆಯುಂಟು ಮಾಡಲು ಅದು ಪ್ರಯತ್ನಿಸುತ್ತದೆ. ಮುಂದಾಗಬಹುದಾದ ಅನಾಹುತದ ಬಗೆಗೆ ಎಚ್ಚರಿಸುತ್ತದೆ. ಹಿಂದೆ ಅನುಭವಿಸಿದ ಕಷ್ಟನಷ್ಟಗಳ ಬಗೆಗೆ ಗಮನ ಹರಿಸುವಂತೆ ಮಾಡುತ್ತದೆ. ಆದರೆ ಆ ಅಂತರ್ಯಾಮಿ ಗುರುವಿನ ಮಾತಿಗೆ ನಾವು ಕಿವುಡರಾಗುತ್ತೇವೆ. ವಿವೇಕಶೂನ್ಯರಾಗಿ ಅನ್ಯಮಾರ್ಗವನ್ನು ತುಳಿಯುವಂತಾಗುತ್ತದೆ. ಆದ್ದರಿಂದ ಹೊರಗಿನ ಗುರುವಿನ ಮಾರ್ಗದರ್ಶನದಷ್ಟೇ ನಮ್ಮ ಅಂತರಂಗದ ಅಂತರ್ಯಾಮಿ ಗುರುವಿನ ಮಾರ್ಗದರ್ಶನವೂ ಆವಶ್ಯಕವಾಗಿದೆ.

ಆಧುನಿಕ ಶಿಕ್ಷಣ!

'ವಿದ್ಯಾಭ್ಯಾಸವೆಂದರೆ ಮಾನವನಲ್ಲಿರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು' ಎಂಬುದು ಸ್ವಾಮಿ ವಿವೇಕಾನಂದರ ಮಾತು. ಮಾನವನ ಸಂಪೂರ್ಣ ಅಭಿವೃದ್ಧಿಯೇ ವಿದ್ಯಾಭ್ಯಾಸದ ಗುರಿಯಾಗಬೇಕು. ಅವನಲ್ಲಿರುವ ಕಲ್ಮಷಗಳನ್ನು ಹೊರಹಾಕಿ, ನಿಜವಾದ ಮನುಷ್ಯನನ್ನಾಗಿ ಮಾಡುವುದೇ ನಿಜವಾದ ವಿದ್ಯೆ.

ಆದರೆ, ಇಂದಿನ ವಿದ್ಯಾಭ್ಯಾಸ ವ್ಯಕ್ತಿಯ ಬೌದ್ಧಿಕತೆಯನ್ನು ಹೆಚ್ಚಿಸುವಲ್ಲಿ ಅದನ್ನು ಶಿಖರದೆತ್ತರಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಡಾ. ರಾಧಾಕೃಷ್ಣನ್ ಅವರು ಹೇಳುವಂತೆ ಮನುಷ್ಯ ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತ, ಆಕಾಶದಲ್ಲಿ ಹಕ್ಕಿಯಂತೆ ಹಾರಾಡುವುದನ್ನು ಕಲಿತ, ಆದರೆ ಭೂಮಿಯ ಮೇಲೆ ಮಾನವ ಮಾನವನಾಗಿ ನಡೆಯುವುದನ್ನು ಕಲಿಯಲಿಲ್ಲ ಎಂಬ ಮಾತಿನಲ್ಲಿ ತುಂಬ ಅರ್ಥವಂತಿಕೆ ಇದೆ. ನಾವು ವಿದ್ಯೆಯ ಮೂಲಕ ಅಸಾಧ್ಯವೆನಿಸಿದ್ದನ್ನು ಸಾಧ್ಯವಾಗಿಸುತ್ತ ಬಂದಿದ್ದೇವೆ, ಆದರೆ ಸುಲಭದಲ್ಲಿ ಸಾಧ್ಯವಾಗಬಹುದಾದು ದನ್ನು ಸಾಧ್ಯವಾಗಿಸುವಲ್ಲಿ ಸೋತಿದ್ದೇವೆ.

ಆಧುನಿಕ ಶಿಕ್ಷಣ ಭೌತಿಕ ಬದುಕಿಗೆ ಬೇಕಾದುದೆಲ್ಲವನ್ನೂ ನೀಡಿದೆ, ಆದರೆ ಮನುಷ್ಯನಲ್ಲಿ ಅಗತ್ಯವಾಗಿ ಇರಬೇಕಾದ ಮೌಲ್ಯಗಳನ್ನು ಅದು ಕಸಿದುಕೊಂಡಿದೆ. ಅದು ಯಂತ್ರಮಾನವರನ್ನು ಸೃಷ್ಟಿಸುತ್ತದೆ. ನೈತಿಕ ಪ್ರಜ್ಞೆಯನ್ನು ಕಡೆಗಣಿಸಿ, ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತ ಅದರಲ್ಲಿ ಖುಷಿಪಡುವ ಪ್ರವೃತ್ತಿ ಇಂದಿನ ಶಿಕ್ಷಣ ಕ್ರಮದಲ್ಲಿ ಗೋಚರಿಸುತ್ತಿರುವುದು ಒಳ್ಳೆಯ ಲಕ್ಷಣವಲ್ಲ. ಇಷ್ಟಕ್ಕೆಲ್ಲ ಕಾರಣ ಆಧುನಿಕ ಜೀವನಶೈಲಿ. ನೈತಿಕತೆ, ಆಧ್ಯಾತ್ಮಿಕತೆ, ಸಂವೇದನಾತ್ಮಕ ಮನೋಭಾವ ಮೂಲೆಗುಂಪಾಗುತ್ತಿವೆ. ಇವೆಲ್ಲದರಿಂದಾಗಿ, ''ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಸ್ತ್ರೀಪುರುಷರು ಸ್ವಾರ್ಥಿಗಳೂ ಆತ್ಮಕೇಂದ್ರಿತ ವ್ಯಕ್ತಿಗಳೂ ಆಗಿ, ತಮ್ಮ ಸುಖವನ್ನು ಲಾಭವನ್ನೂ, ನೋಡಿ ಕೊಳ್ಳುತ್ತಾ ಬಗೆ ಬಗೆಯ ಕಾರ್ಯಗಳಲ್ಲಿ, ಭ್ರಷ್ಟಾಚಾರಗಳಲ್ಲಿ ತೊಡಗಿ ಕೊಂಡು, ತಮ್ಮ ಜವಾಬ್ದಾರಿ ಸ್ಥಾನದಿಂದ ಕರ್ತವ್ಯರೂಪದಲ್ಲಿ ಸಲ್ಲ ಬೇಕಾದ ಸೇವೆಯನ್ನು ಸಲ್ಲಿಸದೇ ಹೋದಾಗ, ಅದು ಅತ್ಯಂತ ಹೇಯವಾದ ದ್ರೋಹವಾಗುತ್ತದೆ.'' *(ಸ್ವಾಮಿ ರಂಗನಾಥಾನಂದ, ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು, ಸಂ. ೩, ಪು. ೨೨೬)*

ಸ್ವಾಮಿ ವಿವೇಕಾನಂದರು ೧೮೯೪ ರಲ್ಲಿ ಬರೆದ ಒಂದು ಪತ್ರದಲ್ಲಿ ಇದನ್ನು ಅತ್ಯಂತ ಖಾರವಾಗಿ ಉಲ್ಲೇಖಿಸುತ್ತಾರೆ: 'ಎಲ್ಲಿಯವರೆಗೆ ಮಿಲಿಯಗಟ್ಟಲೆ ಜನರು ಹಸಿವಿನಿಂದ, ಅಜ್ಞಾನದೊಡನೆ ಬದುಕುತ್ತಿರುತ್ತಾರೋ, ಅಲ್ಲಿಯವರೆಗೂ ಅವರದೇ ದುಡಿಮೆಯ ಹಣದಿಂದ ವಿದ್ಯಾಭ್ಯಾಸ ಮಾಡಿಯೂ ಅವರನ್ನು ಉದಾಸೀನವಾಗಿ ಕಾಣುವ ಪ್ರತಿಯೊಬ್ಬನನ್ನೂ ನಾನು ದ್ರೋಹಿಯೆನ್ನುತ್ತೇನೆ' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೫, ಪು.೫೮)*

ಇದಕ್ಕೆಲ್ಲ ಮುಖ್ಯ ಕಾರಣ, ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಸಮರ್ಪಕವಾದ ಸಮತೂಕದ ಪಠ್ಯದ ಕೊರತೆ. ಆಧುನಿಕ ಶಿಕ್ಷಣ ಕೇವಲ ಬೌದ್ಧಿಕತೆಯನ್ನು ಹೆಚ್ಚಿಸಿ, ಜ್ಞಾನವನ್ನು ವಿಸ್ತರಿಸುವ ಕೆಲಸವನ್ನು ಮಾಡುವುದರತ್ತ ಗಮನ ಹರಿಸುತ್ತ ಬಂದಿರುವುದು. ಅವರ ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕತೆಯನ್ನು ನಿರ್ಲಕ್ಷಿಸುತ್ತಿರುವುದು. ಶಿಕ್ಷಣದ ಒಂದು ತುದಿ ಜ್ಞಾನಾರ್ಜನೆ, ಮತ್ತೊಂದು ತುದಿ ಶೀಲಾರ್ಜನೆಯಾದಾಗಲೇ ಶಿಕ್ಷಣ ಪೂರ್ಣಗೊಳ್ಳಲು ಸಾಧ್ಯ. ಇಂದಿನ ವಿದ್ಯಾರ್ಥಿಗಳು, ಹಾಗೂ ದುಡಿಮೆಗೆ ಕೈಹಾಕಿದವರು ದಾರಿ ತಪ್ಪುವುದಕ್ಕೆ ಇದೇ ಮುಖ್ಯ ಕಾರಣ. ತಂದೆ-ತಾಯಿಗಳು ಒತ್ತು ಕೊಡುವುದೂ ಮಕ್ಕಳ ಅಂಕಪಟ್ಟಿಯ ಕಡೆಗೆ, ಶಾಲಾಕಾಲೇಜುಗಳೂ ಹೆಚ್ಚು ಗಮನ ಕೊಡುವುದೂ ಅಲ್ಲಿಯ ಫಲಿತಾಂಶದ ಕಡೆಗೆ. ಆ ಮೂಲಕ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳನ್ನು ಆಕರ್ಷಿಸುವ ದೃಷ್ಟಿ ಇವರದ್ದಾದರೆ, ಮಕ್ಕಳು ಉತ್ತಮ ಅಂಕ ಪಡೆದು ಒಳ್ಳೆಯ ಕೆಲಸ ಪಡೆಯುವಂತಾಗಲಿ ಎಂಬುದು ಪೋಷಕರದ್ದು. ಈ ಮಧ್ಯೆ, ನೈತಿಕತೆ, ಜೀವನಮೌಲ್ಯಗಳು, ಆದರ್ಶ, ದೇವರು, ಧರ್ಮ, ದೇಶ ಭಾಷೆ ಎಲ್ಲವೂ ಗಾಳಿಗೆ ತೂರಿ ಹೋದಂತಾಗಿದೆ. ''ಮಾನವ ನಿರ್ಮಾಪಕ ವಿದ್ಯಾಭ್ಯಾಸದ ತತ್ತ್ವವೆಂದರೆ ಸುಖನಾಶದ ಋಷಿಗಳನ್ನು ಅಥವಾ ಲೋಕಾತೀತ ಸಂತರನ್ನು ಬೆಳೆಸುವ ನರ್ಸರಿಯೇನೂ ಅಲ್ಲ. ಅದರ ವ್ಯಾಪ್ತಿಯೆಂದರೆ ಇಲ್ಲೇ ಈಗಲೇ ಮಾನವನ ಸಂಪೂರ್ಣ ಅಭಿವೃದ್ಧಿಯನ್ನು ಸಾಧಿಸುವುದು.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು , ಸಂಪುಟ ೩, ಪು. ೨೨೭).*

ಆಧುನಿಕ ಶಿಕ್ಷಣ ದುಬಾರಿಯಾಗುವುದರ ಜೊತೆಗೆ ಹೆಚ್ಚು ಹೆಚ್ಚು ಕಮರ್ಷಿಯಲ್ ಕೂಡ ಆಗುತ್ತಿದೆ. ಒಬ್ಬ ವ್ಯಕ್ತಿ ಡಾಕ್ಟರ್ ಆಗಲು, ಇಂಜಿನಿಯರ್ ಆಗಲು ಕಣ್ಣು ಮುಚ್ಚಿ ಹಣ ಖರ್ಚು ಮಾಡುವ ವಾತಾವರಣ ನಿರ್ಮಾಣವಾಗಿದೆ. ಅಷ್ಟೇ ಏಕೆ? ನರ್ಸರಿಯಿಂದ ಆರಂಭವಾಗುವ ಶಿಕ್ಷಣಕ್ಕೆ ಹಣ ಒದಗಿಸುವುದು ಮಧ್ಯಮ ವರ್ಗದವರಿಗೇ ಎಟುಕಲಾರದ ತುತ್ತಾಗಿದೆ. ಹೇಳಬೇಕೆಂದರೆ ಆಧುನಿಕ ಶಿಕ್ಷಣ ಒಂದು ರೀತಿಯಲ್ಲಿ ಶ್ರೀಮಂತರ ಸ್ವತ್ತಾಗಿ ಭಾಸವಾಗುತ್ತಿದೆ. 'ಕಮರ್ಷಿಯಲ್' ಎನಿಸಿದ್ದೆಲ್ಲವೂ ಸಹಜವಾಗಿಯೇ ದುಬಾರಿಯೆನಿಸುವುದು ಅನಿವಾರ್ಯ. ಇದನ್ನು ತಪ್ಪಿಸಲು ನಮ್ಮ ಶಿಕ್ಷಣ ಕ್ರಮದಲ್ಲಿ ಸಾಕಷ್ಟು ಬದಲಾವಣೆ ತರುವುದರ ಆವಶ್ಯಕತೆ ಇದೆ. ''ನಮ್ಮ ವಿಶ್ವವಿದ್ಯಾನಿಲಯಗಳು ತಮ್ಮಲ್ಲಿರುವ ಪ್ರಬೋಧಕರುಗಳ ಹಾಗೂ ಇನ್ನಿತರರ ಮೂಲಕ ಈ ನಾಲ್ಕು ಮುಖ್ಯವಾದ ಅಂಶಗಳ ಬಗ್ಗೆ ಬೌದ್ಧಿಕವಾಗಿ ಎಚ್ಚೆತ್ತುಕೊಂಡರೆ ಮಾತ್ರ ಭವಿಷ್ಯದೆಡೆಗೆ ರಾಷ್ಟ್ರದ ಮುನ್ನಡೆಯ ಮುಂಚೂಣಿಯಲ್ಲಿರುವ ಅವುಗಳ ಸ್ಥಾಪಕೋದ್ದೇಶಗಳು ಸಾರ್ಥಕವಾಗುವುದು. ಆಗ ಮಾತ್ರ ಅವು ವಿದ್ಯಾರ್ಥಿಗಳಿಗೆ ಕೇವಲ ಮಾಹಿತಿ ಕೊಡುವ ಬದಲು ಸ್ಫೂರ್ತಿಯನ್ನು ತಂದುಕೊಡಲು ಸಮರ್ಥವಾಗುತ್ತವೆ.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಸಂ. ೩, ಪು.೨೨೨)* ಎಂದು ಹೇಳಿ ಉಲ್ಲೇಖಿಸಿರುವ ನಾಲ್ಕು ಅಂಶಗಳತ್ತ ಅಗತ್ಯವಾಗಿ ಗಮನಹರಿಸಬೇಕಾಗಿದೆ: ಮೊದಲನೆಯದಾಗಿ, ವಿದ್ಯಾಭ್ಯಾಸವು ನಮ್ಮ ರಾಷ್ಟ್ರದ ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳ ಗುಣದೋಷಗಳ ಮೇಲೆ ಹಿಡಿತವುಳ್ಳದ್ದಾಗಿರಬೇಕು. ಎರಡನೆಯದಾಗಿ, ಪಾಶ್ಚಾತ್ಯ ಸಂಸ್ಕೃತಿಯ ಗುಣದೋಷಗಳ ಮೇಲೂ ವಿವೇಚನಯುಕ್ತ ಹಿಡಿತವುಳ್ಳದ್ದಾಗಿರಬೇಕು. ಮೂರನೆಯದಾಗಿ, ವಿದ್ಯಾಭ್ಯಾಸವು ಪ್ರಚಲಿತ ಭಾರತದ ವಾಸ್ತವಿಕ ಪರಿಸ್ಥಿತಿಯ ಮೇಲೂ ಹಿಡಿತವುಳ್ಳದ್ದಾಗಿರಬೇಕು. ನಾಲ್ಕನೆಯದಾಗಿ, ಜನರಿಗೆ ಹೊಸ ಯುಗದ ಒಂದು ಅಭಿವೃದ್ಧಿಶೀಲ ಭಾರತೀಯ ಸಮಾಜವನ್ನು ಕಟ್ಟುವ ಕೆಲಸದಲ್ಲಿ ಇಂದು ಪ್ರಪಂಚದಾದ್ಯಂತ ಹರಡಿ ನೆಲೆನಿಂತಿರುವ ಪಾಶ್ಚಾತ್ಯ ಸಂಪ್ರದಾಯಗಳ ಪರೀಕ್ಷಿತ ಪ್ರಬಲ ಅಂಶಗಳನ್ನೂ ನಮ್ಮ ಆರ್ಷೇಯ ಭಾರತೀಯ ಸಂಪ್ರದಾಯಗಳ ಪುಟವಿಟ್ಟ ಚಿನ್ನದಂತಹ ಮೂಲಾಂಶಗಳನ್ನೂ ಸಹಜವಾಗಿ ಒಂದುಗೂಡಿಸಿಕೊಳ್ಳುವುದಕ್ಕೆ ಸಹಾಯ ಮಾಡಬೇಕು. *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು, ಸಂಪುಟ ೩, ಪು.೨೨೦)*

ಶಿಕ್ಷಣ ಕೇವಲ ಒಬ್ಬ ವ್ಯಕ್ತಿಯ ವೈಯಕ್ತಿಕ ಬದುಕನ್ನು ರೂಪಿಸಿದರೆ ಸಾಲದು, ಅದು ಅವನ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾಗುವಂತಿದ್ದು ಮೇಲೆ ಉದ್ಧರಿಸಿದ ನಾಲ್ಕು ಅಂಶಗಳನ್ನು ಗರ್ಭೀಕರಿಸಿಕೊಂಡದ್ದಾಗಿರಬೇಕು. ಕೇವಲ ಅಂಕಗಳಿಂದ ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು, ಅರ್ಹತೆಯನ್ನು ಗುರುತಿಸುವುದರ ಜೊತೆಗೆ ಅವನ ಆಂತರ್ಯದ ಮೌಲಿಕತೆಯನ್ನು ಗುರುತಿಸುವಂತಾಗಬೇಕು. ಶಿಕ್ಷಣದ ಮುಖ್ಯ ಗುರಿ ಮಾನವನ ವಿಕಾಸ. ಅವನ ನೈತಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಅದು ಪ್ರಚೋದನೆ ನೀಡುವಂತಿರಬೇಕು. ''ನೈತಿಕ ಬೆಳವಣಿಗೆಯಿಲ್ಲದ ಕೇವಲ ಬೌದ್ಧಿಕ ಬೆಳವಣಿಗೆ ಕಚ್ಚಾ ಅಹಂನ್ನು ಹೆಚ್ಚಾಗಿ ಕೊಬ್ಬಿಸುತ್ತದೆ... ಪ್ರೇಮ, ದಯೆ, ಕಾರುಣ್ಯಗಳಿಂದ ಅವನ ಹೃದಯವನ್ನು ಶ್ರೀಮಂತಗೊಳಿಸದೆ ಕೇವಲ ಬೌದ್ಧಿಕ ವಿದ್ಯಾಭ್ಯಾಸದಿಂದ ನಿಶಿತಮತಿಯನ್ನಾಗಿಸಿದರೆ ಅವನ ಬುದ್ಧಿ ತನ್ನ ಸ್ವಂತಹಿತಾಸಕ್ತಿಯನ್ನುಳಿದು ಇತರ ಎಲ್ಲಾ ಮೌಲ್ಯಗಳನ್ನೂ ಧಿಕ್ಕರಿಸಿ ಕೊನೆಗೆ ಸರ್ವತಿರಸ್ಕಾರಿಯಾಗಿ ಜಡವಾಗಿಬಿಡುತ್ತದೆ; ಇದು ಆಧ್ಯಾತ್ಮಿಕ ಸಾವನ್ನು ಸೂಚಿಸುತ್ತದೆ. ವಿಕಾಸದ ಉತ್ತುಂಗದಲ್ಲಿರುವ ಮಾನವನಲ್ಲಿ ಇದು ಬೌದ್ಧಿಕ ಸಾವಿಗಿಂತಲೂ ಘೋರವಾದದ್ದು.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು: ಸಂಪುಟ ೩, ಪು.೨೩೨)*


ಶಿಕ್ಷಣದಲ್ಲಿ ಬೌದ್ಧಿಕ ಬೆಳವಣಿಗೆಗಷ್ಟೇ ಒತ್ತುಕೊಟ್ಟು ಜೀವನ ಮೌಲ್ಯಗಳ ಕಡೆಗೆ ಹಾಗೂ ಮಾನಸಿಕ ಶಕ್ತಿಯ ಕಡೆಗೆ ಗಮನಹರಿಸದೆ ಹೋದರೆ ಏನಾಗುತ್ತದೆ ಎಂಬುದನ್ನು ಮೇಲಿನ ಮಾತುಗಳು ಎಚ್ಚರಿಸುತ್ತವೆ. ವ್ಯಕ್ತಿ ಸ್ವಾರ್ಥಿಯಾಗಿ ಬೇರೆಲ್ಲವನ್ನೂ ಕಡೆಗಣಿಸುತ್ತಾನೆ. ಉಳಿದೆಲ್ಲ ಭಾವನೆಗಳೂ ಶೂನ್ಯವಾಗಿ ಸ್ವಂತ ಸುಖಕ್ಕಷ್ಟೇ ದಾಸನಾಗುತ್ತಾನೆ. ಸೌಲಭ್ಯಗಳ ಗುಲಾಮನಾಗುತ್ತಾನೆ. ''ಸೌಲಭ್ಯಗಳು ಎಂಬ ಭಾವನೆಯೇ ಮಾನವ ಬಾಳಿನ ಕೆಟ್ಟ ವಿಷ... ಯಾವಾಗ ಈ ವಿಶೇಷ

ಸೌಲಭ್ಯಗಳು ಇಲ್ಲದಾಗುವವೋ ಆಗ ಮಾನವಕುಲಕ್ಕೆ ಹೆಚ್ಚು ಬೆಳಕು, ಪ್ರಗತಿ ಉಂಟಾಗುತ್ತದೆ.'' *(The Complete Works of Swami Vivekananda, Vol.1, p.423).*

ಮಾನವ ನಿಜವಾದ ಮಾನವನಾಗಿ ಉಳಿಯಬೇಕಾದರೆ, ಬೆಳೆಯಬೇಕಾದರೆ ಅವನಿಗೆ ಸರಿಯಾದ ಶಿಕ್ಷಣದ ಅಗತ್ಯವಿದೆ. ಅದು ಅವನೊಬ್ಬನಿಂದಲೇ ಪೂರ್ಣಗೊಳ್ಳುವುದಿಲ್ಲ, ಅದಕ್ಕೆ ಸರಿಯಾದ ಗುರುವಿನ ಮಾರ್ಗದರ್ಶನವೂ ಬೇಕಾಗುತ್ತದೆ. ಇದಕ್ಕೆ ಸ್ವಾಮಿ ವಿವೇಕಾನಂದರ ವಿದ್ಯಾಭ್ಯಾಸದ ಕಲ್ಪನೆ ಅಳವಡಿಕೆಯಾಗುವುದು ಅಗತ್ಯ. ಅವರ ಕಲ್ಪನೆಯಲ್ಲಿ ನಿಜವಾದ ವಿದ್ಯಾಭ್ಯಾಸ ಬೇರೆ. ಅದು ಮಾನವಕುಲಕ್ಕೆ ಒಳಿತಾಗುವ ಸರ್ವಸ್ವವನ್ನೂ ಒಳಗೊಂಡದ್ದು. ''ವಿದ್ಯಾಭ್ಯಾಸವೆಂದರೆ ನಿಮ್ಮ ಮೆದುಳಿಗೆ ಗಿಡಿಯಲ್ಪಟ್ಟು ಅಲ್ಲಿ ಜೀವನವಿಡೀ ಜೀರ್ಣವಾಗದೆ ಕೊಳೆಯುತ್ತಿರುವ ಮಾಹಿತಿಗಳ ಗಾತ್ರವಲ್ಲ, ನಮ್ಮ ಬದುಕನ್ನು ಕಟ್ಟುವ, ನಮ್ಮನ್ನು ಮನುಷ್ಯರನ್ನಾಗಿಸುವ, ಶೀಲವಂತಿಕೆಯನ್ನೀಯುವ, ರಕ್ತಗತವಾಗಿ ನಮ್ಮಲ್ಲಿ ಒಂದಾಗಿ ಸೇರಿಹೋಗಬಹುದಾದ ಪರಿಕಲ್ಪನೆಗಳು ಬೇಕು. ನಿಮ್ಮ ಕೈಬೆರಳೆಣಿಕೆ ಯಷ್ಟು ಪರಿಕಲ್ಪನೆಗಳನ್ನು ಜೀರ್ಣಿಸಿಕೊಂಡು ನಿಮ್ಮ ಬದುಕಿನ, ಶೀಲದ ಭಾಗವನ್ನಾಗಿ ಮಾಡಿಕೊಂಡಿರೋ, ನಿಮ್ಮ ಆ ವಿದ್ಯಾಭ್ಯಾಸವು ಒಂದು ಇಡೀ ಪುಸ್ತಕ ಭಂಡಾರವನ್ನೇ ಬಾಯಿಪಾಠ ಮಾಡಿಕೊಂಡಿರುವವನದಕ್ಕಿಂತ ಹೆಚ್ಚು.''

ಸ್ವಾಮಿ ವಿವೇಕಾನಂದರ ಈ ವಿದ್ಯಾಭ್ಯಾಸದ ಕಲ್ಪನೆ ಆಧುನಿಕ ಶಿಕ್ಷಣ ಕ್ರಮದಲ್ಲಿ ಬೆರೆಯದ ಹೊರತು, ಅದಕ್ಕೆ ತಕ್ಕ ಮಾರ್ಗದರ್ಶನ ನೀಡುವ ಗುರು ದೊರೆಯದ ಹೊರತು ಅದು ಪೂರ್ಣಗೊಂಡಂತಾಗುವುದಿಲ್ಲ. ವಿವೇಕಾನಂದರು ಹೇಳುವಂತೆ: ''ನಮಗಿಂದು ಬೇಕಾಗಿರುವುದು ಮಾನವ ನಿರ್ಮಾಣದ ಧರ್ಮ, ಮಾನವ ನಿರ್ಮಾಣದ ಸಿದ್ಧಾಂತಗಳು ಹಾಗೂ ಎಲ್ಲೆಡೆಯೂ ಮಾನವ ನಿರ್ಮಾಣದ ವಿದ್ಯಾಭ್ಯಾಸ.'' ಇದಕ್ಕೆ ಆದರ್ಶ ಗುರು ಬೇಕು, ಆಧುನಿಕ ಶಿಕ್ಷಣ ಕ್ರಮದಲ್ಲಿ ಅದಕ್ಕೆ ತಕ್ಕ ಮಾರ್ಪಾಡುಗಳು ಬೇಕು. ✷

ಯುವಚೇತನ



ನಮ್ಮ ಏಕಮಾತ್ರ ಸಮಾನ ಭೂಮಿಕೆಯೆಂದರೆ ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಅದೊಂದೇ ಏಕಮಾತ್ರ ಸಾಧಾರಣ ಭೂಮಿ. ಅದರ ಮೇಲೆ ಮಾತ್ರ ನಮ್ಮ ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ. ಯೂರೋಪಿನಲ್ಲಿ ರಾಜನೀತಿಯ ಭಾವನೆ ಜನಾಂಗದ ಏಕತೆಗೆ ಕಾರಣ. ಏಷ್ಯಾಖಂಡದಲ್ಲಿ ಧಾರ್ಮಿಕ ಆದರ್ಶಗಳು ಜನಾಂಗದ ಏಕತೆಗೆ ಮೂಲ. ಭವಿಷ್ಯದ ಭಾರತದ ಸಂಘಟನೆಗೆ ಧಾರ್ಮಿಕ ಏಕತೆ ಮೊದಲನೆಯ ಆವಶ್ಯಕತೆ. ಭರತಖಂಡದ ಆದ್ಯಂತವು ಒಂದು ಧರ್ಮವನ್ನೊಪ್ಪಿಕೊಳ್ಳಬೇಕು. ಒಂದು ಧರ್ಮವೆಂದರೆ ಏನು? ಕ್ರೈಸ್ತರು, ಮಹಮ್ಮದೀಯರು, ಬೌದ್ಧರು ತಿಳಿದುಕೊಂಡಿರುವಂತಹ ಒಂದು ಧರ್ಮವಲ್ಲ. ನಮ್ಮ ವಿಭಿನ್ನ ಸಂಪ್ರದಾಯಗಳಲ್ಲಿ, ಅವರವರ ಸಿದ್ಧಾಂತಗಳು ಪರಸ್ಪರ ಎಷ್ಟೇ ವಿರುದ್ಧವಾಗಿರಲಿ, ಅವುಗಳಲ್ಲೆಲ್ಲಾ ಒಂದು ಸರ್ವಸಾಮಾನ್ಯ ತಳಹದಿ ಇದೆ. ಈ ಧರ್ಮಗಳಲ್ಲಿ ಕೆಲವು ಸಾಮಾನ್ಯ ಭೂಮಿಕೆಗಳು ಇವೆ. ಅವುಗಳ ಪರಿಧಿಯಲ್ಲಿ ಈ ನಮ್ಮ ಧರ್ಮವು ಅನಂತ ವೈವಿಧ್ಯವನ್ನು ಒಪ್ಪಿಕೊಳ್ಳುತ್ತದೆ. ಅನಂತವಾದ ಆಲೋಚನಾ ಸ್ವಾತಂತ್ರ್ಯವನ್ನೂ ತಮ್ಮದೇ ರೀತಿಯಲ್ಲಿ ಜನರು ಬಾಳುವ ಅವಕಾಶವನ್ನೂ ಅದು ಒಪ್ಪಿಕೊಳ್ಳುತ್ತದೆ. ನಮಗೆಲ್ಲಾ ಇದು ಗೊತ್ತಿದೆ. ನಮ್ಮಲ್ಲಿ ಯಾರು ಸ್ವಲ್ಪ ಆಲೋಚನೆ ಮಾಡಬಲ್ಲರೋ ಅವರಿಗಾದರೂ ಇದು ಗೊತ್ತಿದೆ. ಪ್ರಾಣಶಕ್ತಿಯನ್ನು ನೀಡುವ ನಮ್ಮ ಧರ್ಮದ ಈ ಸರ್ವಸಾಮಾನ್ಯ ತತ್ತ್ವಗಳನ್ನು ಎಲ್ಲರಿಗೂ ಪ್ರಚಾರ ಮಾಡಬೇಕಾಗಿದೆ. ಈ ದೇಶದಲ್ಲಿರುವ ಸ್ತ್ರೀ, ಪುರುಷ, ಮಕ್ಕಳೆಲ್ಲರೂ ಇದನ್ನು ತಿಳಿದುಕೊಳ್ಳಲಿ, ತಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರಲಿ. ಇದೇ ನಮ್ಮ ಪ್ರಥಮ ಕರ್ತವ್ಯ. ಆದುದರಿಂದ ಇದನ್ನು ನಾವು ಸಾಧಿಸಬೇಕು.

* * *

''ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್! ದೇವಾ ಭಾಗಂ ಯಥಾ ಪೂರ್ವೇ''

''ನೀವೆಲ್ಲ ಒಂದು ಮನಸ್ಸಿನವರಾಗಿ, ಒಂದು ಭಾವನೆಯವರಾಗಿ, ಪ್ರಾಚೀನ ಕಾಲದಲ್ಲಿ ಒಮ್ಮತದವರಾದುದರಿಂದ ದೇವತೆಗಳಿಗೆ ಬಲಿಯನ್ನು ಸ್ವೀಕರಿಸಲು ಸಾಧ್ಯವಾಯಿತು.'' ಮನುಷ್ಯರೂ ಏಕಮತದವರಾಗಿರುವುದರಿಂದಲೇ ದೇವತೆಗಳನ್ನು ಪೂಜಿಸಲು ಸಾಧ್ಯವಾಯಿತು. ಒಮ್ಮತವೇ ಸಮಾಜಶಕ್ತಿಯ ರಹಸ್ಯ. ದ್ರಾವಿಡ, ಆರ್ಯ, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಪ್ರಶ್ನೆಯ ಮೇಲೆ ನೀವು ಹೋರಾಡಿದಷ್ಟೂ ಭವಿಷ್ಯ ಭಾರತ ನಿರ್ಮಾಣಕ್ಕೆ, ಮಾಡಬೇಕಾದ ಶಕ್ತಿ ಸಂಗ್ರಹಕ್ಕೆ ದೂರವಾಗುವೆವು. ಇದನ್ನು ಗಮನದಲ್ಲಿಡಿ. ಭವಿಷ್ಯ ಭಾರತ ಸಂಪೂರ್ಣವಾಗಿ ಇದರ ಮೇಲೆ ನಿಂತಿದೆ. ಈ ಇಚ್ಛಾಶಕ್ತಿಯನ್ನು ಸಂಗ್ರಹಿಸುವುದು, ಅದನ್ನು ಏಕೀಭೂತ ಮಾಡುವುದು, ಶತಮುಖವಾಗಿ ಹರಿಯುತ್ತಿರುವುದನ್ನು ಏಕಮುಖವಾಗಿ ಮಾಡುವುದು, ಇದೇ ರಹಸ್ಯ. *('ಭಾರತದ ಭವಿಷ್ಯ' ಉಪನ್ಯಾಸದಿಂದ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೬೦-೬೧ ಮತ್ತು ೧೭೧)*

ಸ್ವಾಮಿ ನಿತ್ಯಸ್ಥಾನಂದ

ಕ್ಷೇತ್ರ ಮತ್ತು ಕ್ಷೇತ್ರಜ್ಞ



ಸಾಮಾನ್ಯವಾಗಿ ನಮ್ಮ ಗಮನವೆಲ್ಲ ಹೊರಮುಖವಾಗಿರುತ್ತದೆ. ಹೊರಜಗತ್ತು ನಮಗೆ ಅತ್ಯಂತ ಸತ್ಯವಾಗಿ ಕಂಡುಬರುತ್ತದೆ. ನಮ್ಮ ಗಮನವನ್ನು ನಮ್ಮೆಡೆಗೇ ಹರಿಸಲು ಪ್ರಾರಂಭಿಸಿದಾಗ ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತದೆ. ಆಗ ಪ್ರಧಾನವಾಗಿ ನಮ್ಮ ಅರಿವಿಗೆ ಬರುವುದು ದೇಹೇಂದ್ರಿಯಗಳು. ಸ್ವಲ್ಪ ಒಳಕ್ಕೆ ಹೋದಾಗ ವಿವಿಧ ಮಾನಸಿಕ ವೃತ್ತಿಗಳು ನಮ್ಮ ಗಮನಕ್ಕೆ ಬರುತ್ತವೆ. ಇನ್ನೂ ಒಳಕ್ಕೆ ಹೋದಾಗ ಜೀವಾತ್ಮನ ಅರಿವು ಉಂಟಾಗುತ್ತದೆ. ಮೊದಲು ಹೊರ ಜಗತ್ತಿನ ವಸ್ತುಗಳು ನಮ್ಮ ಅರಿವಿನ ವಿಷಯವಾಗಿರುತ್ತವೆ; ಮುಂದೆ ಸ್ಥೂಲದೇಹವು ನಮ್ಮ ಅರಿವಿನ ವಿಷಯವಾಗಿರುತ್ತವೆ. ಮುಂದೆ, ಇನ್ನೂ ಹಿಂದೆ ಹೋದಾಗ ಮಾನಸಿಕ ವೃತ್ತಿಗಳೇ ಅರಿವಿನ ವಿಷಯವಾಗಿರುತ್ತವೆ. ಆದರೆ ಆ ಅರಿವು ಅರಿವಾಗಿಯೇ ಉಳಿಯುತ್ತದೆ, ವಿಷಯವಾಗುವುದಿಲ್ಲ. 'ದೃಗ್‌ದೃಶ್ಯ ವಿವೇಕ'ದ ಮೊದಲನೆಯ ಮಂತ್ರವು ಇದನ್ನು ಸ್ಪಷ್ಟಪಡಿಸುತ್ತದೆ:

ರೂಪಂ ದೃಶ್ಯಂ ಲೋಚನಂ ದೃಶ್ಯಂ ತದ್ದೃಶ್ಯಂ ದೃಕ್ತು ಮಾನಸಮ್।
ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ ॥

'ಹೊರಗಿನ ರೂಪಗಳು ವಿಷಯ, ಅವನ್ನು ನೋಡುವ ಕಣ್ಣು ವಿಷಯಿ. ಕಣ್ಣು ಮನಸ್ಸಿಗೆ ವಿಷಯವಾಗಿ, ಮನಸ್ಸು ವಿಷಯಿ ಆಗುತ್ತದೆ. ಮನಸ್ಸಿನ ವೃತ್ತಿಗಳು ಸಾಕ್ಷೀಚೈತನ್ಯಕ್ಕೆ ವಿಷಯವಾಗುತ್ತವೆ. ಆದರೆ ಸಾಕ್ಷಿಯು ವಿಷಯಿಯಾಗಿಯೇ ಇರುತ್ತಾನೆ, ವಿಷಯವಾಗುವುದಿಲ್ಲ.'

ರೂಪ ವಿವಿಧವಾದರೂ ಕಣ್ಣು ಒಂದೇ ಆಗಿರುವುದರಿಂದ ಎಲ್ಲವನ್ನೂ ನೋಡುತ್ತದೆ, ಕಣ್ಣಿನಲ್ಲಿ ವೈವಿಧ್ಯವಿದ್ದರೂ ಏಕವಾದ ಮನಸ್ಸು ಅದನ್ನೆಲ್ಲ ನೋಡುತ್ತದೆ. ಹಾಗೆಯೇ ವೈವಿಧ್ಯಮಯ ಧೀವೃತ್ತಿಗಳನ್ನು ಏಕವಾದ ಪ್ರಜ್ಞೆ ನೋಡುತ್ತದೆ.

ಈ ರೀತಿಯ ವಿಷಯ-ವಿಷಯಿ ವಿವೇಕವೇ ಭಗವದ್ಗೀತೆಯ ಹದಿಮೂರನೇ ಅಧ್ಯಾಯದ ಮುಖ್ಯ ವಿಷಯವಾಗಿದೆ – ಅಂದರೆ ವಿಷಯಿಯನ್ನು, ಅಂದರೆ ಆತ್ಮನನ್ನು ವಿಷಯವರ್ಗದಿಂದ ಪ್ರತ್ಯೇಕಿಸಿ ಅರಿಯುವುದು. ದೇಹೇಂದ್ರಿಯ ಮನಸ್ಸುಗಳಿಂದ ಕೂಡಿದ ಈ ವ್ಯಕ್ತಿತ್ವವೇ ವಿಷಯ, ಅದನ್ನು ಇಲ್ಲಿ **ಕ್ಷೇತ್ರ** ಎಂದು ಕರೆಯಲಾಗಿದೆ. ಇದನ್ನು ಸಾಕ್ಷಿಯಂತೆ ಅರಿಯುವವನು **ಕ್ಷೇತ್ರಜ್ಞ** ಅಥವಾ ಆತ್ಮಾ. ಕ್ಷೇತ್ರವು ವೈವಿಧ್ಯಮಯ, ಇದನ್ನು ಅರಿಯುವ ಆತ್ಮನು ಏಕೈಕನಾಗಿರಬೇಕು. ಅವನಿಂದಾಗಿಯೇ ಈ ವ್ಯಕ್ತಿತ್ವಕ್ಕೆ ಒಂದು ಐಕ್ಯತೆ ಬಂದಿರುವುದು. ಶರೀರ ಮನಸ್ಸುಗಳೆಲ್ಲವೂ ಜಡವಾಗಿರುವುದು, ಹಾಗೂ ಒಂದು ಜಡವು ಮತ್ತೊಂದು ಜಡವನ್ನು ಅರಿಯಲಾರದು. ಅರಿಯುವ ಅಂಶ ಚೈತನ್ಯಕ್ಕೆ ಸೇರಿದುದು. ಆದ್ದರಿಂದ ಅಂತರಾತ್ಮನೇ ವಿಷಯಗಳನ್ನೂ ಅರಿಯುವವನು. ಅವನು ಬುದ್ಧಿಯೊಡನೆ ಸೇರಿದಾಗ ದ್ರಷ್ಟೃವಾಗುತ್ತಾನೆ.

ಮುಂಜ ಎಂಬ ಹುಲ್ಲಿನ ಮೃದುವಾದ ಗರ್ಭಭಾಗವನ್ನು ಹೊರ ಪದರದಿಂದ ಬಿಡಿಸಿ ತೆಗೆಯುವಂತೆ ಶರೀರತ್ರಯದಿಂದ ಆತ್ಮನನ್ನು ಬೇರ್ಪಡಿಸಬೇಕು ಎಂದು ಕಠೋಪನಿಷತ್ತು ಹೇಳುತ್ತದೆ. ಶ್ರೀ ವಿದ್ಯಾರಣ್ಯರು 'ಪಂಚದಶೀ'ಯಲ್ಲಿ ಇದೇ ವಿಷಯವನ್ನು ಇನ್ನೊಂದು ವಿಚಾರಧಾರೆಯ ಮೂಲಕ ವಿವರಿಸುತ್ತಾರೆ: ನಾವು ಜಾಗ್ರತಾವಸ್ಥೆಯಿಂದ ಸ್ವಪ್ನಾವಸ್ಥೆಗೆ ಹೋದಾಗ ಸ್ಥೂಲದೇಹದೊಡನೆ ತಾದಾತ್ಮ್ಯವಿರುವುದಿಲ್ಲ; ಸ್ಥೂಲದೇಹವನ್ನು ಮರೆತೇಬಿಡುತ್ತೇವೆ. ಆದರೆ ಕನಸಿನಲ್ಲಿ ದೃಶ್ಯಗಳನ್ನು ನೋಡುತ್ತಾ ನಾವಿರುತ್ತೇವೆ. ಇದರಿಂದ ನಾವು ಸ್ಥೂಲದೇಹವಲ್ಲ ಎಂಬುದು ತಿಳಿದುಬರುತ್ತದೆ. ಹಾಗೆಯೇ ಸುಷುಪ್ತಿಯ ಅವಸ್ಥೆಗೆ ಹೋದಾಗ ಮನಸ್ಸೂ ಇರುವುದಿಲ್ಲ, ಆದರೆ ನಾವಿರುತ್ತೇವೆ. ಇದರಿಂದ ನಾವು ಮನಸ್ಸಿನಿಂದಲೂ ಬೇರೆ ಎಂಬುದು ತಿಳಿದುಬರುತ್ತದೆ. ಮುಂದೆ ತುರೀಯಾವಸ್ಥೆಯನ್ನು ತಲುಪಿದಾಗ ಕಾರಣ ಶರೀರವೂ ಉಳಿಯದೆ ಆತ್ಮನೊಬ್ಬನೇ ಉಳಿಯುತ್ತಾನೆ. ಇದನ್ನೇ **ಕ್ಷೇತ್ರ ಮತ್ತು ಕ್ಷೇತ್ರಜ್ಞ ವಿವೇಕ** ಎಂದು ಕರೆಯುವುದು.

ಸಂಸಾರವೆಂಬ ಬೆಳೆಯನ್ನು ಬೆಳೆಸುವುದಕ್ಕೆ ಈ ದೇಹವು ಹೊಲವಾಗಿರುವುದರಿಂದ ಇದನ್ನು ಕ್ಷೇತ್ರವೆಂದು ಕರೆಯಲಾಗಿದೆ, ಎಂದು ಶ್ರೀಧರಸ್ವಾಮಿಗಳು ವಿವರಿಸುತ್ತಾರೆ. ಶ್ರೀಶಂಕರಾಚಾರ್ಯರು ಇದಕ್ಕೆ ಇನ್ನೂ ವಿಶೇಷ ಅರ್ಥಗಳನ್ನು ನೀಡುತ್ತಾರೆ: **ಕ್ಷತತ್ರಾಣಾತ್ ಕ್ಷಯಾತ್ ಕ್ಷರಣಾತ್ ಕ್ಷೇತ್ರವತ್ ವಾ ಅಸ್ಮಿನ್ ಕರ್ಮಫಲನಿವೃತ್ತೇಃ ಕ್ಷೇತ್ರಂ ಇತಿ** – 'ಶರೀರವನ್ನು ಗಾಯಾದಿಗಳಿಂದ ರಕ್ಷಿಸಬಹುದು, ಅದು ಕ್ಷೀಣಿಸುತ್ತದೆ, ಅದು ಬದಲಾಗುತ್ತದೆ ಮತ್ತು ಅದು ಕರ್ಮಫಲವನ್ನು ಪಡೆಯಲು ಹೊಲದಂತಿದೆ, ಆದ್ದರಿಂದ ಅದು ಕ್ಷೇತ್ರ.'

ಈ ಶರೀರವು ಸಂಸಾರಕ್ಕೆ ಕಾರಣವಾಗಿದ್ದರೂ ಇದರ ಮೂಲಕವೇ ನಾವು ಸಂಸಾರಸಾಗರವನ್ನು ದಾಟಿಹೋಗಬೇಕಾಗಿದೆ. ಈ ಮಾನವ ದೇಹವೆಂಬುದು ಒಂದು ನೌಕೆಯಿದ್ದಂತೆ, ಇದನ್ನು ಅನೇಕ ಜನ್ಮಗಳ ಪುಣ್ಯಫಲವನ್ನು ತೆತ್ತು ಈ ದುಃಖಸಾಗರವನ್ನು ದಾಟಿಹೋಗಲು ಕೊಂಡುಕೊಂಡಿದ್ದೇವೆ, ಹಾಗೂ ಇದು ಮುರಿದು ಹೋಗುವುದಕ್ಕೆ ಮುಂಚೆಯೇ ಇದನ್ನು ದಾಟಿಬಿಡಬೇಕು – ಎಂದು

ಭಾಗವತವು ಹೇಳುತ್ತದೆ. (**ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ। ಪಾರಂ ದುಃಖೋದಧೇಃ ಗಂತುಂ ತರ ಯಾವನ್ನ ಭಿದ್ಯತೇ॥**) ಆದ್ದರಿಂದಲೇ ವಚನಕಾರರು ಹೇಳುತ್ತಾರೆ: 'ಶರೀರ ವೆಂತೆಂಬ ಹೊಲವ ಹಸನು ಮಾಡಿ, ಪರತತ್ತ್ವಬೆಳೆಯನ್ನು ಬೆಳೆ ದುಣ್ಣಿರೋ.' ಸಂಸಾರವೆಂಬ ಕಳೆ ಬೆಳೆಯುವ ಕ್ಷೇತ್ರದಲ್ಲಿಯೇ ಪರ ತತ್ತ್ವವೆಂಬ ಬೆಳೆಯನ್ನೂ ಬೆಳೆಸಬಹುದು.

ದೇಹವನ್ನು ಕ್ಷೇತ್ರಕ್ಕೆ ಹೋಲಿಸಿರುವುದು ತುಂಬ ಔಚಿತ್ಯಪೂರ್ಣ ವಾಗಿದೆ. ಈ ಕ್ಷೇತ್ರದಲ್ಲಿ ಕಳೆಯನ್ನೂ ಬೆಳೆಸಬಹುದು, ಬೆಳೆಯನ್ನೂ ಬೆಳೆಸಬಹುದು. ಕಳೆಯನ್ನು ಬೆಳೆಸುವುದಕ್ಕೆ ಏನೂ ಪ್ರಯತ್ನಪಡ ಬೇಕಾಗಿಲ್ಲ, ಸುಮ್ಮನೆ ಸೋಮಾರಿಯಾಗಿಯೇ ಕಾಲ ಕಳೆದರಾ ಯಿತು. ಅನೇಕರ ಜೀವನ ಹೀಗೆಯೇ ನಿರರ್ಥಕವಾಗಿ ಕಳೆದು ಹೋಗುತ್ತದೆ. ಮತ್ತನೇಕರು ಕಾಡನ್ನು ಬೆಳೆಸಿ ಅನೇಕ ಹಿಂಸ್ರ ಪಶು ಗಳಿಗೆ ತಾಣವಾಗುತ್ತಾರೆ, ಹಾಗೆಯೇ ಅವರ ವ್ಯಕ್ತಿತ್ವವೂ ಕಾಡಿನಂತೆ ಜಟಿಲವಾಗುತ್ತದೆ. ಉತ್ತಮ ಬೆಳೆಯನ್ನು ಬೆಳೆಸಲು ತುಂಬ ಪ್ರಯತ್ನಪಡಬೇಕು, ಬಹಳಷ್ಟು ಸಾಧನೆಯ ಆವಶ್ಯಕತೆ ಇದೆ. ಅನೇ ಕರು ಪ್ರಯಾಸದಿಂದ ಪ್ರಾಪಂಚಿಕ ಯಶಸ್ಸೆಂಬ ಬೆಳೆಯನ್ನು ಬೆಳೆಸು ತ್ತಾರೆ. ಇನ್ನು ಕೆಲವರು ಸದ್ಗುಣಗಳ ಹೂದೋಟವನ್ನೂ ಬೆಳೆಸಿ ಆಕ ರ್ಷಕ ವ್ಯಕ್ತಿಗಳಾಗುತ್ತಾರೆ. ಮತ್ತೆ ಕೆಲವರು ಉತ್ತಮ ಹಣ್ಣಿನ ಗಿಡ ಗಳನ್ನು ಬೆಳೆಸಿ ಲೋಕಹಿತ ಕಾರ್ಯಗಳನ್ನು ನಡೆಸುತ್ತಾರೆ. ಎಲ್ಲೋ ಕೆಲವರು ಮಾತ್ರ ನಿವೃತ್ತಿಮಾರ್ಗವನ್ನು ಅನುಸರಿಸಿ ಈ ಕ್ಷೇತ್ರದ ಹಿಂದಿರುವ ಕ್ಷೇತ್ರಜ್ಞನನ್ನು ಅರಿಯಲು ಪ್ರಯತ್ನಿಸುತ್ತಾರೆ.

ಈ ಭೂಮಿಯಲ್ಲಿ ಸಾರವಸ್ತುವಿದೆ, ಅದೇ ಎಲ್ಲ ಬಗೆಯ ಮರ ಗಿಡಗಳಿಗೆ ಪುಷ್ಟಿಯನ್ನು ಒದಗಿಸುತ್ತದೆ. ಯಾವುದೇ ಆಗಲಿ, ಕಳೆ ಯಾಗಲಿ ಬೆಳೆಯಾಗಲಿ, ಅದಕ್ಕೆ ಪುಷ್ಟಿ ದೊರೆಯುವುದು ಈ ಸಾರ ವಸ್ತುವಿನಿಂದಲೇ. ಹಾಗೆಯೇ ಈ ಶರೀರದ ಹಿಂದೆ ಒಂದು ಸಾರ ವಸ್ತುವಿದೆ, ಅದೇ ನಮ್ಮ ಅಂತರಂಗದ ದಿವ್ಯತೆ, ಆತ್ಮತತ್ತ್ವ, ಅಥವಾ ಕ್ಷೇತ್ರಜ್ಞ. ಅದೇ ಇಷ್ಟಾನಿಷ್ಟಗಳೆರಡಕ್ಕೂ, ಒಳಿತುಕೆಡಕುಗಳೆರಡಕ್ಕೂ ಶಕ್ತಿಯನ್ನು ನೀಡುತ್ತಿರುವುದು; ಅದೇ ಅಜ್ಞಾನ, ಸುಜ್ಞಾನ, ದುರ್ಜ್ಞಾನಗಳೆಲ್ಲವನ್ನೂ ಬೆಳಗುತ್ತಿರುವುದು. ಶ್ರೀರಾಮಕೃಷ್ಣರು ಹೇಳುವಂತೆ, ಒಂದೇ ಬೆಳಕಿನ ಅಡಿ ಒಬ್ಬನು ಭಾಗವತ ಓದುತ್ತಾನೆ, ಮತ್ತೊಬ್ಬನು ಫೋರ್ಜರಿ ಮಾಡುತ್ತಾನೆ, ಇಲ್ಲಿ ಬೆಳಕು ನಿರಪೇಕ್ಷ.

ಈ ಕ್ಷೇತ್ರಜ್ಞನೇ ನಾನು ಎಂದು ಶ್ರೀಕೃಷ್ಣನು ಹೇಳುತ್ತಾನೆ. ಅಂದರೆ ಆ ಪರಬ್ರಹ್ಮ ವಸ್ತುವೇ ಎಲ್ಲ ಜೀವಿಗಳಲ್ಲಿ ಆತ್ಮರೂಪದಲ್ಲಿ ನೆಲೆಸಿರುವುದು, ಇದನ್ನೇ ಸ್ವಾಮಿ ವಿವೇಕಾನಂದರು 'ಸುಪ್ತದಿವ್ಯತೆ' ಎಂದು ಕರೆದಿರುವುದು. ಇದೇ ವಿವಿಧ ಜ್ಞಾನರೂಪದಲ್ಲಿ, ಕ್ರಿಯಾ ರೂಪದಲ್ಲಿ ಮತ್ತು ಅನುಭವರೂಪದಲ್ಲಿ ವ್ಯಕ್ತವಾಗುತ್ತಿರುವುದು. ಕೇನೋಪನಿಷತ್ತಿನ ಮೊದಲನೆಯ ಮತ್ತು ಎರಡನೆಯ ಮಂತ್ರ ಗಳಲ್ಲಿ ಈ ಭಾವನೆಯು ತುಂಬ ಸುಂದರವಾಗಿ ವ್ಯಕ್ತವಾಗಿದೆ. ಶಿಷ್ಯನು ಪ್ರಶ್ನಿಸುತ್ತಾನೆ: ಮನಸ್ಸು, ಪ್ರಾಣ ಮತ್ತು ಇಂದ್ರಿಯಗಳನ್ನು ಅವು ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಲು ಪ್ರೇರೇಪಿಸುತ್ತಿರು ವವರು ಯಾರು? ಈ ಪ್ರಶ್ನೆಯಲ್ಲಿ, ಶಾಂಕರಭಾಷ್ಯವು ಸೂಚಿಸು ವಂತೆ, ಮೂರು ಪ್ರಶ್ನೆಗಳು ಅಡಕವಾಗಿವೆ:

೧. ಯಾರ ಸನ್ನಿಧಿ ಮಾತ್ರದಿಂದ ಮನಸ್ಸು ಪ್ರಾಣೇಂದ್ರಿಯ ಗಳು ತಮ್ಮ ತಮ್ಮ ಕೆಲಸ ಮಾಡುತ್ತಿವೆ?

೨. ಯಾರಿಗಾಗಿ ಈ ಕೆಲಸಗಳೆಲ್ಲವೂ ನಡೆಯುತ್ತಿವೆ?

೩. ಇಂದ್ರಿಯಗಳ ಮೂಲಕ ನಿಜವಾಗಿಯೂ ನೋಡು ವವನು ಯಾರು? ಮನಸ್ಸಿನ ಮೂಲಕ ಚಿಂತಿಸುವವನು ಯಾರು?

ಮುಂದಿನ ಮಂತ್ರವು ಉತ್ತರಿಸುತ್ತದೆ: ಆತ್ಮತತ್ತ್ವದಿಂದಾಗಿಯೇ ಈ ಎಲ್ಲ ಕ್ರಿಯೆಗಳು ನಡೆಯುತ್ತಿವೆ. ಇಲ್ಲಿ ಅವನ ಸನ್ನಿಧಿ ಮಾತ್ರ ಪ್ರಯೋಜನ, ಅವನು ನಿಷ್ಕ್ರಿಯ, ಯಾವುದೇ ಕ್ರಿಯೆಯಲ್ಲೂ ತೊಡಗುವುದಿಲ್ಲ, ಎಲ್ಲ ಕ್ರಿಯೆಗಳೂ ಪ್ರಕೃತಿಗೆ ಸೇರಿರುವುದು. ಗೀತೆ ಇದನ್ನು ಸ್ಪಷ್ಟಪಡಿಸುತ್ತದೆ:

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತದಾತ್ಮಾನಮಕರ್ತಾರಂ ಸ ಪಶ್ಯತಿ ॥

'ಪ್ರಕೃತಿಯೇ ಎಲ್ಲ ಕೆಲಸಗಳನ್ನೂ ಮಾಡುತ್ತಿರುವುದು. ಯಾರು ಆತ್ಮನನ್ನು ಅಕರ್ತೃ ಎಂದು ತಿಳಿಯುತ್ತಾನೊ ಅವನೇ ನಿಜವಾದ ಜ್ಞಾನಿ.'

ಶ್ರೀರಾಮಕೃಷ್ಣರು ಮೋಹಕವಾದ ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ: ಮದುವೆಯ ಉತ್ಸವ ನಡೆಯುತ್ತಿದೆ. ಮನೆಯ ಯಜಮಾನನು ಒಂದು ಕಡೆ ಸುಮ್ಮನೆ ಕುಳಿತಿರುತ್ತಾನೆ. ಯಜಮಾನಿಯು ಎಲ್ಲ ಕೆಲಸಗಳನ್ನೂ ನಿರ್ವಹಿಸುತ್ತಾಳೆ, ಮತ್ತು ಆಗಾಗ ಬಂದು ಯಜಮಾನನಿಗೆ ವರದಿ ಒಪ್ಪಿಸುತ್ತಾಳೆ. ಇಲ್ಲಿ ಯಜ ಮಾನನ ಸಾನ್ನಿಧ್ಯ ಮಾತ್ರ ಬೇಕಾಗಿರುವುದು. ಅವನು ಏನೂ ಕೆಲಸ ಮಾಡುವುದಿಲ್ಲ. (ಇದು ಹಿಂದಿನ ಕಾಲದ ಕುಟುಂಬಕ್ಕೆ ಅನ್ವಯಿಸು ವಂತಹದು, ಈಗಿನ ಕಾಲದಲ್ಲಿ ನಡೆಯುವುದಿಲ್ಲ.)

ಎರಡನೆಯ ಪ್ರಶ್ನೆ, ಯಾರಿಗಾಗಿ ಈ ಕ್ರಿಯೆಗಳೆಲ್ಲವೂ ನಡೆಯು ತ್ತಿದೆ? ಎಂಬುದು. ಸಾಂಖ್ಯದರ್ಶನದ ಒಂದು ಮುಖ್ಯ ತತ್ತ್ವವನ್ನು ಈ ಪ್ರಶ್ನೆಯು ಸೂಚಿಸುತ್ತದೆ. ಅದಾವುದೆಂದರೆ **ಸಂಘಾತಃ ಪರಾರ್ಥತ್ವಾತ್** – ಅಂದರೆ ಎಲ್ಲ ಸಂಯುಕ್ತಗಳೂ ಇತರರಿಗಾಗಿ ಇರು ವುದು. ಉದಾಹರಣೆಗೆ ಮನೆಯು ಒಂದು ಸಂಯುಕ್ತ – ಅನೇಕ ವಸ್ತುಗಳಿಂದ ಕೂಡಿ ಆಗಿದೆ. ಅದು ಇರುವುದು ತನಗಾಗಿ ಅಲ್ಲ, ಅದರಲ್ಲಿ ವಾಸಿಸುವ ವ್ಯಕ್ತಿಗಾಗಿ. ಹಾಗೆಯೇ ಈ ದೇಹೇಂದ್ರಿಯ ಮನಸ್ಸುಗಳು ಒಂದು ಸಂಯುಕ್ತ. ಅವುಗಳ ಕ್ರಿಯೆಗಳು ಯಾರಿ ಗಾಗಿ? ಕಣ್ಣು ತನಗಾಗಿ ನೋಡುವುದಿಲ್ಲ, ಕಿವಿ ತನಗಾಗಿ ಕೇಳುವು ದಿಲ್ಲ, ಹಾಗೆಯೇ ಈ ಕ್ಷೇತ್ರದಲ್ಲಿ ನಡೆಯುವ ಯಾವ ಕ್ರಿಯೆಗಳೂ

ಅದಕ್ಕಾಗಿ ಅಲ್ಲ, ಅದಕ್ಕಿಂತ ಪ್ರತ್ಯೇಕವಾದ, ಸಂಯುಕ್ತವಲ್ಲದ ಆತ್ಮನಿಗಾಗಿ, ಅಥವಾ ಕ್ಷೇತ್ರಜ್ಞನಿಗಾಗಿ. ಈ ವಿಚಾರವು ಇಪ್ಪತ್ತನೆಯ ಶ್ಲೋಕದಲ್ಲಿ ಸೂಚಿತವಾಗಿದೆ:

ಕಾರ್ಯಕರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥

'ಎಲ್ಲ ಕ್ರಿಯೆಗಳಿಗೆ ಕಾರಣವಾಗಿರುವುದು ಪ್ರಕೃತಿ ಮತ್ತು ಕ್ರಿಯಾಫಲಗಳಾದ ಸುಖದುಃಖಗಳನ್ನು ಅನುಭವಿಸುವುದಕ್ಕೆ ಪುರುಷನು ಕಾರಣ.' ಪ್ರಕೃತಿಯು ಜಡವಾಗಿರುವುದರಿಂದ ಅದಕ್ಕೆ ಕರ್ತೃತ್ವವನ್ನು ಆರೋಪಿಸುವುದಕ್ಕೆ ಆಗುವುದಿಲ್ಲ. ಕರ್ತೃತ್ವ ಭೋಕ್ತೃತ್ವಗಳೆರಡೂ ಪ್ರಕೃತಿ-ಪುರುಷ ಸಂಯೋಗದಿಂದ (ಚಿಜ್ಜಡಗ್ರಂಥಿ) ಉಂಟಾಗುತ್ತದೆ. ಈ ಚಿಜ್ಜಡಗ್ರಂಥಿಯಿಂದ ಚಿತ್ತನ್ನು ಬೇರ್ಪಡಿಸಬೇಕು. ಅದಕ್ಕಾಗಿಯೇ ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ಇವೆರಡರ ಸ್ವಭಾವವನ್ನು ವಿಂಗಡಿಸಿ ತೋರಿಸಿದ್ದಾನೆ.

ಮೂರನೆಯ ಪ್ರಶ್ನೆ: ಇಂದ್ರಿಯಗಳ ಮೂಲಕ ನಿಜವಾಗಿಯೂ ನೋಡುವವನು ಯಾರು? ಮನಸ್ಸಿನ ಮೂಲಕ ಚಿಂತಿಸುವವನು ಯಾರು? ನಿಜವಾಗಿಯೂ ನೋಡಿದರೆ ಕಣ್ಣು ಒಂದು ಕ್ಯಾಮರಾ ಇದ್ದಂತೆ, ಕ್ಯಾಮರಾ ನೋಡಲಾರದು. ಒಂದು ಜಡವಸ್ತು ಇನ್ನೊಂದು ಜಡವಸ್ತುವನ್ನು ನೋಡಲಾರದು ಅಥವಾ ಅನುಭವಿಸಲಾರದು. ನೋಡುವ, ಕೇಳುವ, ಅನುಭವಿಸುವ ಅಂಶ ಆತ್ಮನಿಗೆ ಸಂಬಂಧಿಸಿರುವುದು. ನಾವು ಒಂದು ವಸ್ತುವನ್ನು, ಉದಾಹರಣೆಗೆ ಒಂದು ಹಾರುವ ಹಕ್ಕಿಯನ್ನು ನೋಡಿದಾಗ ಅದಕ್ಕೆ ಸಂಬಂಧಿಸಿದ ಇಂದ್ರಿಯ ಸಂವೇದನೆಗಳೆಲ್ಲ ಇಂದ್ರಿಯಗಳ ಮೂಲಕ ಮಿದುಳಿಗೆ ಹೋಗಿ, ಅಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ಅವು ಮುದ್ರಿತವಾಗುತ್ತವೆ. ಹಕ್ಕಿಯ ಬಣ್ಣ ಒಂದು ಕೇಂದ್ರದಲ್ಲಿ, ಅದರ ಧ್ವನಿ ಇನ್ನೊಂದು ಕೇಂದ್ರದಲ್ಲಿ, ಅದರ ಚಲನೆ ಮತ್ತೊಂದು ಕೇಂದ್ರದಲ್ಲಿ ಇತ್ಯಾದಿ. ಇವೆಲ್ಲವೂ ಎಲ್ಲಿ ಕೂಡಿಸಲ್ಪಟ್ಟು ಹಾರುವ ಹಕ್ಕಿಯ ಒಂದು ಪೂರ್ಣ ರೂಪವನ್ನು ಪಡೆಯುತ್ತದೆ? ಮತ್ತು ಅದನ್ನು ಯಾರು ನೋಡುತ್ತಾರೆ? ಇದು ನರವಿಜ್ಞಾನದಲ್ಲಿ ಒಂದು ದೊಡ್ಡ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕೇನೋಪನಿಷತ್ತಿನಲ್ಲಿದೆ. ಮಿದುಳಿನ ಕೇಂದ್ರಗಳಲ್ಲಿ ಮುದ್ರಿತವಾದ ಇಂದ್ರಿಯಾಂಶಗಳೆಲ್ಲವೂ ಮನಸ್ಸಿನಲ್ಲಿ ಕೇಂದ್ರೀಕೃತವಾಗಿ, ಅಲ್ಲಿ ಹಾರುವ ಹಕ್ಕಿಗೆ ಸಂಬಂಧಿಸಿದ ಚಿತ್ತವೃತ್ತಿಯು ನಿರ್ಮಾಣವಾಗುತ್ತದೆ. ಅದನ್ನು ಆತ್ಮನು ತನ್ನ ಬೆಳಕಿನಿಂದಲೇ ನೋಡುತ್ತಾನೆ. ಆಗ 'ಇದು ಹಾರುವ ಹಕ್ಕಿ, ಅದನ್ನು ನಾನು ನೋಡುತ್ತಿದ್ದೇನೆ' ಎಂಬ ಅರಿವು ಉಂಟಾಗುತ್ತದೆ. ಹೀಗೆ ಎಲ್ಲ ಅನುಭವಗಳ ಹಿಂದೆ ಆತ್ಮನ ಅಸ್ತಿತ್ವವಿದೆ. ನಮ್ಮ ಸಾಮಾನ್ಯ ತಿಳಿವಳಿಕೆ ಏನೆಂದರೆ, ನಾವು ಬುದ್ಧಿ-ಮನಸ್ಸುಗಳ ಮೂಲಕ ಅರಿಯುತ್ತೇವೆ ಎಂಬುದು. ಅವುಗಳಲ್ಲಿ ಆ ಶಕ್ತಿ ಉಂಟಾಗಿರುವುದು ಆತ್ಮಚೈತನ್ಯದ ಅಸ್ತಿತ್ವದ ಮೂಲಕ. ತಪ್ತ ಅಯಃಪಿಂಡವು (ಕಾದ ಕಬ್ಬಿಣ) ಸುಡುತ್ತದೆ ಎಂದು ನಾವು ಹೇಳುತ್ತೇವೆ. ಆದರೆ ನಿಜವಾಗಿ ಸುಡುವುದು ಅಯಃಪಿಂಡವಲ್ಲ, ಅದರಲ್ಲಿರುವ ಉಷ್ಣಾಂಶ. ಹಾಗೆಯೇ ಆತ್ಮಚೈತನ್ಯದಿಂದ ಬುದ್ಧಿಮನಸ್ಸುಗಳು ಚೋದನಾತ್ಮಕವಾಗಿ ಅವು ತಮ್ಮ ಕ್ರಿಯೆಗಳನ್ನು ನೆರವೇರಿಸುತ್ತವೆ.

ನಿಜವಾಗಿ ತಿಳಿದುಕೊಳ್ಳಬೇಕಾದ ಆತ್ಮನ ಸ್ವರೂಪವನ್ನು ಶ್ರೀಕೃಷ್ಣನು ಈಗ ವಿವರಿಸುತ್ತಾನೆ. ಈ ಆತ್ಮತತ್ತ್ವವು ಸತ್ತೂ ಅಲ್ಲ, ಅಸತ್ತೂ ಅಲ್ಲ ಎಂದು ಶ್ರೀಕೃಷ್ಣನು ವಿವರಿಸುವುದು ದೊಡ್ಡ ಒಗಟಾಗಿ ಕಂಡುಬರುತ್ತದೆ. ಅದು ಅಸತ್ ಅಲ್ಲ ಎಂದರೆ ಅದಕ್ಕೆ ಅಸ್ತಿತ್ವವೇ ಇಲ್ಲವೆ? ಎಂದು ಕೇಳಿದರೆ, ಅದು ಸತ್ತೂ ಅಲ್ಲ ಎಂದು ಹೇಳುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ ಅದು **'ಸದಸದೇರ್ ಪಾರ್'**- ಅಂದರೆ ಅದು ಸತ್ ಮತ್ತು ಅಸತ್ ಎರಡನ್ನೂ ಮೀರಿದುದು. ಶ್ರೀಧರಸ್ವಾಮಿಗಳು ಈ ವಾಕ್ಯಕ್ಕೆ ಈ ಕೆಳಗಿನ ವಿವರಣೆಯನ್ನು ನೀಡುತ್ತಾರೆ: **ವಿಧಿಮುಖೇನ ಪ್ರಮಾಣಸ್ಯ ವಿಷಯಃ ಸತ್ ಶಬ್ದೇನ ಉಚ್ಯತೇ । ನಿಷೇಧಸ್ಯ ವಿಷಯಃ ತು ಅಸತ್ ಶಬ್ದೇನ ಉಚ್ಯತೇ । ಇದಂ ತು ತದುಭಯವಿಲಕ್ಷಣಂ, ಅವಿಷಯತ್ವಾತ್ ಇತ್ಯರ್ಥಃ ।** – 'ವಿಧಾಯಕ ಶಾಸ್ತ್ರವಾಕ್ಯದ ವಿಷಯವನ್ನು 'ಸತ್' ಎನ್ನಲಾಗುತ್ತದೆ. ನಿಷೇಧಿಸುವ ಶಾಸ್ತ್ರವಾಕ್ಯದ ವಿಷಯವನ್ನು 'ಅಸತ್' ಎನ್ನಲಾಗುತ್ತದೆ. ಆದರೆ ಆತ್ಮತತ್ತ್ವವು ಈ ಎರಡಕ್ಕಿಂತಲೂ ಭಿನ್ನವಾದದ್ದು – ಏಕೆಂದರೆ ಅದು ಬುದ್ಧಿಗೆ ನಿಲುಕುವಂತದಲ್ಲ.' ಅಂದರೆ ಆತ್ಮತತ್ತ್ವವನ್ನು 'ಇದೆ ಇದೆ' ಎಂದಾಗಲಿ, 'ಇಲ್ಲ ಇಲ್ಲ' ಎಂದಾಗಲಿ ನಿರ್ದೇಶಿಸಲಾಗುವುದಿಲ್ಲ. ಒಂದು ವಸ್ತುವನ್ನು ನಿರ್ದೇಶಿಸಿ ಸೂಚಿಸುವುದೆಂದರೆ ಅದನ್ನು ಇತರ ವಸ್ತುಗಳಿಂದ ಪ್ರತ್ಯೇಕಿಸುವುದು ಎಂದರ್ಥ. ಆತ್ಮತತ್ತ್ವವು ಏಕವಾಗಿರುವುದರಿಂದ, ಎರಡನೆಯದು ಇಲ್ಲದಿರುವುದರಿಂದ ಅದನ್ನು ಹೇಗೆ ನಿರ್ದೇಶಿಸುವುದು? ಯಾರು ನಿರ್ದೇಶಿಸುವುದು? ಪಾಲ್ ತಿಲಿಚ್ ಎಂಬ ಚಿಂತಕರು ಈ ವಿಷಯವನ್ನು ತುಂಬ ಮಾರ್ಮಿಕವಾಗಿ ಹೇಳುತ್ತಾರೆ: 'ದೇವರ ಅಸ್ತಿತ್ವದ ಪ್ರಮಾಣೀಕರಣವು ದೇವರ ಅನಸ್ತಿತ್ವದ, ಪ್ರಮಾಣೀಕರಣದಷ್ಟೇ ನಾಸ್ತಿಕತೆಯನ್ನು ಸೂಚಿಸುತ್ತದೆ.'

'ಪಂಚದಶೀ'ಯ ಒಂದು ಶ್ಲೋಕವು ಇದೇ ವಿಷಯವನ್ನು ಒತ್ತಿ ಹೇಳುತ್ತದೆ:

ವಿಕಲ್ಪತದಭಾವಾಭ್ಯಾಮಸಂಸ್ಪೃಷ್ಟಾತ್ಮವಸ್ತುನಿ ।
ವಿಕಲ್ಪಿತತ್ವಲಕ್ಷತ್ವಸಂಬಂಧಾದ್ಯಾಸ್ತು ಕಲ್ಪಿತಾಃ ॥ ೧.೩೨॥

'ವಿಕಲ್ಪದಿಂದಲೂ ವಿಕಲ್ಪದ ಅಭಾವದಿಂದಲೂ ಸೋಂಕಲ್ಪಡದ ಪರಮಾತ್ಮ ವಸ್ತುವಿನಲ್ಲಿ ವಿಕಲ್ಪತ್ವ (ಅದು ಸವಿಕಲ್ಪವೊ ನಿರ್ವಿಕಲ್ಪವೊ ಎಂಬ ವಿಕಲ್ಪ), ಲಕ್ಷ್ಯತ್ವ (ಶಾಸ್ತ್ರವಾಕ್ಯದಿಂದ ಅದು ಸೂಚಿಸಲ್ಪಡುತ್ತದೆ ಎಂಬುದು), ಸಂಬಂಧ ಇವೇ ಮೊದಲಾದವು ಕಲ್ಪಿತವಾಗಿದೆ.'

'ಎಲ್ಲೆಲ್ಲಿಯೂ ಅದರ ಕೈಕಾಲುಗಳು, ಎಲ್ಲೆಲ್ಲಿಯೂ ಅದರ ಕಣ್ಣು, ಕಿವಿ, ಮುಖಗಳು. ಅದು ಹೀಗೆ ಎಲ್ಲವನ್ನೂ ಆವರಿಸಿ

ಕೊಂಡಿದೆ' ಎಂದು ಈ ಆತ್ಮತತ್ತ್ವವನ್ನು ಕುರಿತಾಗಿ ಶ್ರೀಕೃಷ್ಣನು ಹೇಳುತ್ತಾನೆ. ಈ ಮಾತಿನ ಅರ್ಥವನ್ನು ವಿವರಿಸುತ್ತ ಶ್ರೀಧರಸ್ವಾಮಿಗಳು ಹೇಳುತ್ತಾರೆ: 'ಸಕಲ ಪ್ರಾಣಿಗಳ ಕೈಕಾಲು ಮುಂತಾದ ಉಪಾಧಿಗಳ ಮೂಲಕ ಎಲ್ಲ ಕಾರ್ಯಚಟುವಟಿಕೆಗಳಿಗೂ ಆಧಾರವಾಗಿದೆ ಎಂದರ್ಥ.' ಶ್ರೀರಾಮಕೃಷ್ಣರು ಇದನ್ನು ಸುಂದರ ಉದಾಹರಣೆಯ ಮೂಲಕ ವಿವರಿಸುತ್ತಾರೆ: ಸಿಂಹ, ಹುಲಿ, ಕುದುರೆ ಮುಂತಾದ ಮುಖಾಕೃತಿಗಳ ಮೂಲಕ ಭಾವಣಿಯ ನೀರು ಬರುವಂತೆ ಮಾಡಿರುತ್ತಾರೆ. ಆದರೆ ಸಿಂಹವಾಗಲಿ ಹುಲಿಯಾಗಲಿ ನೀರು ಸುರಿಸುತ್ತಿಲ್ಲ. ಚಿಕ್ಕ ಮಕ್ಕಳು ಸಿಂಹ ಮೊದಲಾದವು ನೀರು ಉಗುಳುತ್ತಿವೆ ಎಂದು ಮಾತನಾಡಿಕೊಳ್ಳುತ್ತಾರೆ. ನಿಜವಾಗಿಯೂ ನೀರು ಮೋಡಕ್ಕೆ ಸೇರಿದ್ದು. ಹಾಗೆಯೇ ಎಲ್ಲ ಜೀವಿಗಳ ಮೂಲಕ ಕ್ರಿಯಾರೂಪದಲ್ಲಿ ವ್ಯಕ್ತವಾಗುತ್ತಿರುವುದು ಈ ಚೈತನ್ಯಶಕ್ತಿಯೇ. ಆದರೂ ಆತ್ಮನು ನಿಷ್ಕ್ರಿಯ. ವಿದ್ಯುಚ್ಛಕ್ತಿಯ ಮೂಲಕ ಒಂದು ಯಂತ್ರ ಕೆಲಸ ಮಾಡುತ್ತದೆ. ಆದರೆ ಯಂತ್ರ ಮಾಡುವ ಕೆಲಸಕ್ಕೂ ವಿದ್ಯುಚ್ಛಕ್ತಿಗೂ ಯಾವ ಸಂಬಂಧವೂ ಇಲ್ಲ. ಯಂತ್ರದ ಗುಣದೋಷಗಳನ್ನು ಯಾರೂ ವಿದ್ಯುಚ್ಛಕ್ತಿಗೆ ಆರೋಪಿಸುವುದಿಲ್ಲ. ಈ ವಿಷಯವನ್ನೇ **ಸರ್ವೇಂದ್ರಿಯ-ಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಂ** ಎಂಬ ಮಾತಿನ ಮೂಲಕ ಶ್ರೀಕೃಷ್ಣನು ವಿವರಿಸಿದ್ದಾನೆ.

ಆತ್ಮನು ಕೇವಲ 'ಉಪದ್ರಷ್ಟಾ' – ಕೇವಲ ಸಾಕ್ಷಿಯಂತೆ ನೋಡುವವನು ಅಷ್ಟೇ. ಇಲ್ಲಿ 'ನೋಡುವವನು' ಎಂಬ ಕ್ರಿಯಾಪದವನ್ನು ಉಪಯೋಗಿಸಿದ್ದರೂ (ಭಾಷೆಯ ಮಿತಿಯಿಂದ) ನೋಡುವುದು ಒಂದು ಕ್ರಿಯೆ ಅಲ್ಲ. ಶ್ರೀಧರಸ್ವಾಮಿಗಳು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ: ಋತ್ವಿಕ್, ಯಜಮಾನ ಮೊದಲಾದವರು ಯಜ್ಞ ಮಾಡುತ್ತಿರುವಾಗ ತಟಸ್ಥನಾಗಿರುವ ಇನ್ನೊಬ್ಬನು ಅವರೆಲ್ಲರ ಗುಣ ದೋಷಗಳನ್ನೂ ನೋಡುತ್ತಿರುತ್ತಾನೆ – ಕೇವಲ ಸಾಕ್ಷಿ ಅಷ್ಟೇ, ಯಜ್ಞಕ್ರಿಯೆಗೂ ಯಜ್ಞಫಲಕ್ಕೂ ಮತ್ತು ಅವನಿಗೂ ಯಾವ ಸಂಬಂಧವೂ ಇಲ್ಲ. ಆತ್ಮನು ಕೇವಲ ಅನುಮೋದಿಸುತ್ತಾನೆ (ಅನುಮಂತ) – ಒಳಿತಾಗಲಿ, ಕೆಡುಕಾಗಲಿ. ಸ್ವಾಮಿ ಯತೀಶ್ವರಾನಂದರು ಈ ವಿಷಯವನ್ನು ಹೀಗೆ ವಿವರಿಸುತ್ತಾರೆ:

'ಈ ಜಗತ್ತಿನ ತಂದೆ ಅಥವಾ ಜಗನ್ಮಾತೆ ಸಾಕ್ಷಿಯಾಗಿ ತಮ್ಮ ಮಕ್ಕಳು ಈ ಜಗತ್ತಿನಲ್ಲಿ ಆಟವಾಡುತ್ತಿರುವುದನ್ನೇ ನೋಡುತ್ತಿದ್ದಾರೆ. ಮಗು ಈ ಬೊಂಬೆಯಾಟದಿಂದ, ಈ ಬಾಲಿಶ ಕ್ರಿಯೆಯಿಂದ ಬೇಸತ್ತಾಗ ಭಗವಂತನು ಅವರೆಡೆಗೆ ಬರುತ್ತಾನೆ, ಮತ್ತು ಈ ಮಿಥ್ಯಾಕ್ರೀಡಾಂಗಣದಿಂದ ಅದನ್ನು ಬೇರೆಡೆಗೆ ಕರೆದುಕೊಂಡು ಹೋಗುತ್ತಾನೆ. ಮಕ್ಕಳು ಬೊಂಬೆಯಾಟ ಆಡುವರು, ಮನೆ ಆಟ ಆಡುವರು, ಬಸ್ಸಿನ ಆಟ ಆಡುವರು – ಹೀಗೆ ಅನೇಕ ಆಟ ತಿಂಡಿಗಳಲ್ಲಿ ಮಗ್ನರಾಗಿರುವರು. ಅವರು ಅದರಿಂದ ಬೇಸತ್ತು ತಿರಸ್ಕಾರದಿಂದ ಅದರ ವಿಷಯಕ್ಕೆ ವಿಮುಖರಾಗುವವರೆಗೆ ದೇವರು ಏನೂ ಮಾಡಲಾರ. ದೇವರಿಗೆ ಇದೊಂದು ಮೋಜು. ಒಂದು ದಿನ ಮಗುವಿಗೆ ಸ್ವಲ್ಪ ಬುದ್ಧಿ ಬಂದಮೇಲೆ ಚಿಂತಿಸತೊಡಗುತ್ತದೆ, 'ಏನು ಮಾಡಿದೆ ಈ ಜೀವನದಲ್ಲಿ?' ಎಂದು. ಆಗ ಭಗವಂತನು ಅದಕ್ಕೆ ಧ್ವನಿಗೂಡಿಸಿ, 'ಹೌದು, ನೀನೇನು ಮಾಡಿದೆ, ಮಗು? ನಿನಗಾರು ಇದನ್ನು ಮಾಡಲು ಹೇಳಿದರು? ಮೂರ್ಖನಂತೆ ಕೊನೆ ಮೊದಲಿಲ್ಲದ ಈ ಆಟದಲ್ಲಿ ಮಗ್ನವಾಗಿರಲು ಯಾರು ಹೇಳಿದರು ನಿನಗೆ? ಈ ಬೊಂಬೆಗಳ ಮೋಹಜಾಲದಲ್ಲಿ ಸಿಲುಕಿಕೊಳ್ಳಲು ನಿನಗೆ ಯಾರು ಹೇಳಿದರು?' ಆದರೆ ಎಷ್ಟೋ ಬಾರಿ ಆಗಲೆ ಸಮಯ ಮೀರಿ ಹೋಗಿರುತ್ತದೆ, ಮಗು ತನ್ನ ಜರ್ಜರಿತ ಜೀವನದ ಮುರುಕು ಮನೆಯ ಮುಂದೆ ಕುಳಿತು ಪರಿತಪಿಸುತ್ತದೆ. *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಪು.೭)*

ಆತ್ಮನು ಕೇವಲ ಸಾಕ್ಷಿಯಾಗಿರುವುದರಿಂದ ಕರ್ಮವಾಗಲಿ ಕರ್ಮಫಲವಾಗಲಿ ಅವನಿಗೆ ಅಂಟುವುದಿಲ್ಲ. ಆದ್ದರಿಂದ ನಮ್ಮನ್ನು ಆತ್ಮದೊಡನೆ ಒಂದಾಗಿಸಿಕೊಂಡು, ಎಲ್ಲ ಕ್ರಿಯೆಗಳಲ್ಲಿ ಭಾಗವಹಿಸಿಯೂ, ನಾವು ನಿರ್ಲಿಪ್ತರಾಗಿರಬೇಕು ಎಂಬುದು ಶ್ರೀಕೃಷ್ಣನ ಅಭಿಪ್ರಾಯ **(ನ ಕರೋತಿ ನ ಲಿಪ್ಯತೇ)**. ಆಸಕ್ತಿ ಎಂಬ ಮೇಣ ಮನಸ್ಸಿನಲ್ಲಿ ಇಲ್ಲದಿದ್ದರೆ ಕರ್ಮಫಲ ಅಂಟುವುದಿಲ್ಲ. ಕಂಪ್ಯೂಟರ್‌ನಲ್ಲಿ ಕೆಲಸ ಮಾಡುತ್ತಿರುವಾಗ ಆಗಾಗ ಸೇವ್ ಮಾಡುತ್ತಿರಬೇಕು. ಇಲ್ಲದಿದ್ದರೆ ವಿದ್ಯುತ್ ನಿಂತುಹೋದಾಗ ಅಥವಾ ಕಂಪ್ಯೂಟರ್ ಆರಿಸಿದಾಗ ಟೈಪ್ ಮಾಡಿರುವುದೆಲ್ಲ ಹೊರಟುಹೋಗುತ್ತದೆ. ಆದರೆ ಇಲ್ಲಿ ಎಲ್ಲ ಕೆಲಸ ಮಾಡಬೇಕು, ಆದರೆ 'ಸೇವ್' ಮಾಡಬಾರದು.

ಶ್ರೀರಾಮಕೃಷ್ಣರು ಹೇಳುವಂತೆ ನಾವು ಒಣಗಿದ ತೆಂಗಿನ ಕಾಯಿಯಂತೆ ಇರಬೇಕು. ಹಸಿ ತೆಂಗಿನಕಾಯಿಯಲ್ಲಿ ನೀರಿರುತ್ತದೆ ಮತ್ತು ತಿರುಳು ಕರಟದೊಂದಿಗೆ ಅಂಟಿಕೊಂಡಿರುತ್ತದೆ. ಒಣಗಿರುವುದರಲ್ಲಿ ನೀರೂ ಇರುವುದಿಲ್ಲ , ಹಾಗೂ ತಿರುಳು ಕರಟದಿಂದ ಬೇರೆಯಾಗಿರುತ್ತದೆ – ಅಲುಗಾಡಿಸಿದರೆ ಶಬ್ದ ಕೇಳಿಸುತ್ತದೆ. ಹೀಗೆಯೇ ನಮ್ಮ ಮನಸ್ಸಿನಲ್ಲಿರುವ ಸಂಸ್ಕಾರಗಳ ನೀರು ತಪಸ್ಸಿನ ಶಾಖದಿಂದ ಬತ್ತಿಹೋಗಬೇಕು, ಹಾಗೂ ಆತ್ಮನು ಉಪಾಧಿಗಳಿಂದ ಪ್ರತ್ಯೇಕವಾಗಬೇಕು – ಕ್ಷೇತ್ರಜ್ಞನನ್ನು ಕ್ಷೇತ್ರದಿಂದ ಬೇರ್ಪಡಿಸಬೇಕು. ಶ್ರೀಕೃಷ್ಣನು ಕೊನೆಯ ಶ್ಲೋಕದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾನೆ: 'ಹೀಗೆ ಕ್ಷೇತ್ರ ಮತ್ತು ಕ್ಷೇತ್ರಜ್ಞರ ಭೇದವನ್ನು ಜ್ಞಾನಚಕ್ಷುವಿನ ಮೂಲಕ ಯಾರು ತಿಳಿದುಕೊಳ್ಳುತ್ತಾರೋ ಅವರು ಬ್ರಹ್ಮವನ್ನು ಹೊಂದುತ್ತಾರೆ.'

ಈ ಅಧ್ಯಾಯದಲ್ಲಿ ಹೇಳಿರುವ ಮುಖ್ಯಾಂಶಗಳು: ಕ್ಷೇತ್ರವೆಂದರೆ ಯಾವುದು, ಅದರ ಸ್ವರೂಪವೇನು, ಕ್ಷೇತ್ರಜ್ಞ ಯಾರು, ಅವನ ಸ್ವರೂಪವೆಂತಹುದು, ಇವರಿಬ್ಬರನ್ನೂ ಪ್ರತ್ಯೇಕಿಸಿ ಅರಿಯುವ ವಿಧಾನ, ಇದಕ್ಕೆ ಬೇಕಾದ ಸಾಧನೆಗಳು ಮತ್ತು ಈ ವಿವೇಕದಿಂದ ಆಗುವ ಪ್ರಯೋಜನ.

ಸಚ್ಚಿದಾನಂದನೇ ಗುರು



ಎಲ್ಲರಿಗೂ ಮುಕ್ತಿ ದೊರೆಯುತ್ತದೆ. ಆದರೆ ಗುರುವಿನ ಉಪದೇಶಕ್ಕನುಸಾರ ನಡೆದುಕೊಳ್ಳಬೇಕು. ಅಡ್ಡಮಾರ್ಗ ಹಿಡಿದರೆ ದಾರಿಗೆ ಹಿಂದಿರುಗಿ ಬರಲು ಕಷ್ಟಪಡಬೇಕಾಗುತ್ತದೆ. ಮುಕ್ತಿ ದೊರೆಯಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಬಹುಶಃ ಈ ಜನ್ಮದಲ್ಲಿ ದೊರೆಯದೆ ಹೋಗಬಹುದು. ಮತ್ತೆ, ಬಹುಶಃ ಅನೇಕ ಜನ್ಮಗಳ ನಂತರ ದೊರೆತುಬಿಡಬಹುದು.

❋ ಸಿಕ್ಕಿಸಿಕ್ಕಿದವರೆಲ್ಲಾ ಗುರು ಆಗಲಾರರು. ಮರದ ದಿಮ್ಮಿ ತಾನೂ ತೇಲಿಹೋಗಬಲ್ಲುದು, ಅನೇಕ ಜಂತುಗಳನ್ನೂ ಹೊತ್ತುಕೊಂಡು ಹೋಗಬಲ್ಲುದು. ಬೆಂಡಿನ ಮೇಲೆ ಹತ್ತಿ ಕುಳಿತರೆ, ಬೆಂಡೂ ಮುಳುಗಿ ಹೋಗುತ್ತದೆ, ಹತ್ತಿದವನೂ ಮುಳುಗಿ ಹೋಗುತ್ತಾನೆ. ಅದಕ್ಕಾಗಿಯೇ ಭಗವಂತನು ಯುಗಯುಗದಲ್ಲೂ ಗುರುರೂಪದಿಂದ ಅವತೀರ್ಣನಾಗುತ್ತಾನೆ. ಸಚ್ಚಿದಾನಂದನೇ ಗುರು.

❋ ಈ ಮೂರು ಮಾತುಗಳನ್ನು – ಗುರು, ಕರ್ತ, ತಂದೆ ಎಂಬುದನ್ನು ಎತ್ತಿದರೆ ನನಗೆ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ. ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೆ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ. ನನ್ನದು ಸಂತಾನಭಾವ. ಮಾನವನ ಅಂತಸ್ತಿನಲ್ಲಿರುವ ಗುರುಗಳು ಲಕ್ಷಗಟ್ಟಲೆ ಸಿಗುತ್ತಾರೆ. ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೆ ಇಚ್ಛೆಯಿದೆ?

❋ ಕೇವಲ ಸಚ್ಚಿದಾನಂದನೇ ಗುರು. ಮನುಷ್ಯ ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮ ಜಾಗೃತಿಯನ್ನುಂಟುಮಾಡಿದ್ದೇ ಆದರೆ, ಆಗ ತಿಳಿದುಕೊಳ್ಳಬೇಕು, ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದ ಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದ ನಂತರ ಗುರು–ಶಿಷ್ಯರ ಭೇದವಿರದು. ಅದು ಬಹಳ ತೊಡಕಿನ ಸನ್ನಿವೇಶವನ್ನು ಸೃಜಿಸುತ್ತದೆ. ಅಲ್ಲಿ ಗುರು–ಶಿಷ್ಯರು ಒಬ್ಬರನ್ನೊಬ್ಬರು ಗುರುತಿಸಲಾರರು. ಇದಕ್ಕಾಗಿಯೆ ಜನಕರಾಜ ಶುಕದೇವನಿಗೆ ಹೇಳಿದ: 'ನಿನಗೆ ಬ್ರಹ್ಮಜ್ಞಾನ ಬೇಕಾಗಿದ್ದರೆ ಮೊದಲು ಗುರುದಕ್ಷಿಣೆ ಕೊಡು.' ಏಕೆಂದರೆ ಬ್ರಹ್ಮಜ್ಞಾನ ದೊರೆತ ನಂತರ ಗುರು, ಶಿಷ್ಯರೆಂಬ ಭೇದ ಬುದ್ಧಿ ಇರದು. ಭಗವಂತನ ಸಾಕ್ಷಾತ್ಕಾರವಾಗದೆ ಇರುವವರೆಗೆ ಮಾತ್ರ ಗುರು–ಶಿಷ್ಯ ಸಂಬಂಧ.

❋ ಡಾಕ್ಟರುಗಳಲ್ಲಿ ಮೂರು ವಿಧ – ಉತ್ತಮ, ಮಧ್ಯಮ, ಅಧಮ. ಯಾವ ಡಾಕ್ಟರ್ ರೋಗಿಯ ನಾಡಿ ಹಿಡಿದು ನೋಡಿ, 'ಔಷಧ ಕುಡಿಯಪ್ಪ' ಅಂತ ಹೇಳಿ ಹೊರಟುಹೋಗುತ್ತಾನೋ, ಆತ ಅಧಮ ಡಾಕ್ಟರ್. ಮಧ್ಯಮ ಡಾಕ್ಟರ್, ವಿವಿಧ ರೀತಿಯಿಂದ ಔಷಧ ಕುಡಿಯುವಂತೆ ರೋಗಿಗೆ ತಿಳಿಸಿ ಆತನ ಮನಸ್ಸನ್ನು ಒಪ್ಪಿಸುತ್ತಾನೆ. ಆದರೆ ಯಾವ ಡಾಕ್ಟರ್ ಯಾವ ವಿಧದಿಂದಲೂ ರೋಗಿ ಔಷಧ ಸೇವಿಸದಿರುವುದನ್ನು ನೋಡಿ, ಆತನ ಎದೆಮೇಲೆ ಮಂಡಿಯೂರಿ ಬಲಾತ್ಕಾರದಿಂದ ಕುಡಿಸಿಬಿಡುತ್ತಾನೋ, ಆತನೇ ಉತ್ತಮ ಡಾಕ್ಟರ್. ಹಾಗೇ ಆಚಾರ್ಯರಲ್ಲೂ ಮೂರು ವಿಧ. ಅಧಮ ಆಚಾರ್ಯ ಶಿಷ್ಯರಿಗೆ ಉಪದೇಶವಿತ್ತು ಮತ್ತೆ ಅವರು ಬದುಕಿದ್ದಾರೆಯೇ ಸತ್ತರೇ ಎಂಬುದರ ಗೋಜಿಗೆ ಹೋಗುವುದಿಲ್ಲ. ಮಧ್ಯಮ ಆಚಾರ್ಯ ತನ್ನ ಶಿಷ್ಯರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ತಾನು ಕೊಟ್ಟ ಉಪದೇಶ ಸರಿಯಾಗಿ ಬೇರೂರಲೆಂದು ಅದನ್ನು ಪದೇಪದೇ ಅವರಿಗೆ ತಿಳಿಸುತ್ತಾನೆ. ಬಹಳವಾಗಿ ಅನುನಯ ವಿನಯ ತೋರಿಸುತ್ತಾನೆ, ಪ್ರೀತಿ ತೋರಿಸುತ್ತಾನೆ. ಆದರೆ ಯಾರು ತನ್ನ ಶಿಷ್ಯರು ಯಾವ ವಿಧದಿಂದಲೂ ದಾರಿಗೆ ಬಾರದೆ ಇರುವುದನ್ನು ನೋಡಿ ಕೊನೆಗೆ ಬಲ ಪ್ರಯೋಗವನ್ನು ಮಾಡಿಯೇಬಿಡುತ್ತಾನೊ, ಆತ ಉತ್ತಮ ಆಚಾರ್ಯ.

❋ ಒಬ್ಬ ಇನ್ನೊಬ್ಬನನ್ನು ಸಂಸಾರಬಂಧನದಿಂದ ಮುಕ್ತನನ್ನಾಗಿ ಮಾಡಲು ಸಾಧ್ಯವೆ? ಈ ಭುವನಮೋಹಿನಿ ಮಾಯೆ ಯಾರದೋ ಆತನೇ ಅದರಿಂದ ಮನುಷ್ಯರನ್ನು ಮುಕ್ತರನ್ನಾಗಿ ಮಾಡಬಲ್ಲ. ಸಚ್ಚಿದಾನಂದ ಗುರುವೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಶರಣ್ಯರೇ ಇಲ್ಲ. ಯಾರು ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿಲ್ಲವೋ, ಯಾರಿಗೆ ಆತನಿಂದ ಆದೇಶ ದೊರತಿಲ್ಲವೋ, ಯಾರು ಭಗವಂತನ ಶಕ್ತಿಯಿಂದ ಶಕ್ತಿಯುತರಾಗಿಲ್ಲವೋ ಅವರ ಕೈಯಲ್ಲಿ ಜೀವರ ಭವಬಂಧನವನ್ನು ಬಿಡಿಸಲು ಎಂದಿಗಾದರೂ ಸಾಧ್ಯವಾಗುವುದೆ?

❋ ಜೀವ ಸಚ್ಚಿದಾನಂದನೇ ಅಲ್ಲದೆ ಇನ್ನು ಬೇರೆ ಏನೂ ಅಲ್ಲ. ಆದರೆ ಈ ಮಾಯೆ, ಎಂದರೆ ಅಹಂಕಾರ ಅನೇಕ ಉಪಾಧಿಗಳನ್ನು ಸೃಷ್ಟಿಸಿರುವುದರಿಂದ ಆತ ತನ್ನ ನಿಜಸ್ವರೂಪವನ್ನು ಮರೆತು ಬಿಟ್ಟಿದ್ದಾನೆ.

❋ ಚೌಧುರಿ: ಮಹಾಶಯರೆ, ಗುರುವಿಲ್ಲದೆ ಭಗವಂತನ ಸಾಕ್ಷಾತ್ಕಾರ ದೊರೆಯುವುದಿಲ್ಲವೆ?

ಶ್ರೀರಾಮಕೃಷ್ಣರು: ಸಚ್ಚಿದಾನಂದನೇ ಗುರು. ಶವಸಾಧನೆ ಮಾಡಿ, ಇನ್ನೇನು ಇಷ್ಟ ದರ್ಶನವಾಗುತ್ತದೆ ಎನ್ನುವಾಗ ಗುರು ಕಾಣಿಸಿಕೊಂಡು ಸಾಧಕನಿಗೆ ಹೇಳುತ್ತಾನೆ: 'ನೋಡಲ್ಲಿ! ನಿನ್ನಿಷ್ಟದೇವರನ್ನು ನೋಡಲ್ಲಿ.' ಬಳಿಕ ಗುರು ಇಷ್ಟದೇವನಲ್ಲಿ ಲೀನನಾಗಿ ಬಿಡುತ್ತಾನೆ. ಯಾರು ಗುರುವೋ ಆತನೇ ಇಷ್ಟದೇವ. ಗುರು ಭಗವಂತನಲ್ಲಿಗೆ ಕೊಂಡೊಯ್ಯುವ ದಾರ. ಹೆಂಗಸರು ಅನಂತನ ವ್ರತ ಆಚರಿಸುತ್ತಾರೆ. ಆದರೆ ಅವರು ಪೂಜೆ ಮಾಡುವುದು ವಿಷ್ಣುವನ್ನು. ಆತನ ಮೂಲಕವೇ ಭಗವಂತನ ಅನಂತತೆಯನ್ನು ಪೂಜೆ ಮಾಡುತ್ತಾರೆ.

ಶ್ರೀರಾಮಕೃಷ್ಣ ವಚನವೇದ ದಿಂದ

ಆಧ್ಯಾತ್ಮಿಕ ಸಂಭಾಷಣೆ



ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

ಪ್ರಶ್ನೆ: ಯಾರದು ಕೊನೆಯ ಜನ್ಮವೋ ಅವರು ಇಲ್ಲಿಗೆ ಬಂದೇ ತೀರ ಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇದೊಂದು ಅಂಧಾಭಿಮಾನದ ಮಾತಾಗುವುದಿಲ್ಲವೆ?

ಮಹಾರಾಜ್: ಹೌದು, 'ಇಲ್ಲಿಗೆ' ಎನ್ನುವುದನ್ನು ಒಂದು ವೇಳೆ ಬರೀ ಅವರ ಮಾತು ಎಂದು ಭಾವಿಸಿದರೆ ಅದು ಅಂಧಾಭಿಮಾನ. ಅವರ ಆದರ್ಶದ ಬಗ್ಗೆ ಭಾವಿಸಿದರೆ, ಆಗ ಅದು ಹಾಗಾಗುವುದಿಲ್ಲ.

ಪ್ರಶ್ನೆ: ಇಲ್ಲಿ ಕೊನೆಯ ಜನ್ಮವೆಂದರೆ ಜನನ-ಮರಣಗಳಿಂದ ಮುಕ್ತಿ ಎಂದು ತಾನೆ ಅರ್ಥ?

ಮಹಾರಾಜ್: ಅಂದರೆ ಮುಂದೆ ಜನಿಸುವುದಿಲ್ಲ ಎಂದರ್ಥ.

ಪ್ರಶ್ನೆ: ಮುಕ್ತಿ ಎಂಬುದು ಪುಸ್ತಕದ ವಿಚಾರವಲ್ಲ, ಈ ಹಿಂದೆ ಕೂಡ ಬಹು ಜನರು ಮುಕ್ತರಾಗಿದ್ದಾರೆ ಎಂದು ನಾವು ನಂಬುತ್ತೇವೆ.

ಮಹಾರಾಜ್: ಹಿಂದಿನ ವಿಚಾರದ ಬಗ್ಗೆ ಅವರು ಹೇಳುತ್ತಿಲ್ಲ, ಇಲ್ಲಿಗೆ ಬರಬೇಕು ಎಂಬುದು ವರ್ತಮಾನದ ಮತ್ತು ಭವಿಷ್ಯತ್ತಿನ ವಿಚಾರ.

ಪ್ರಶ್ನೆ: ಅಂದರೆ ಅವರೊಂದು ಹೊಸ ಶರತ್ತನ್ನು ಹಾಕಿದರೆ?

ಮಹಾರಾಜ್: ಹೊಸ ಶರತ್ತಲ್ಲ, ಕೆಲವು ಹೊಸ ಆದರ್ಶಗಳು. ಅವತಾರ ಪುರುಷರು ಬಂದಾಗ ಹಳೆಯ ಆದರ್ಶಗಳನ್ನು ರಕ್ಷಣೆ ಮಾಡುವುದರೊಂದಿಗೆ, ಕೆಲವು ಹೊಸತನ್ನೂ ಸೇರಿಸಿ ಹೋಗುತ್ತಾರೆ.

ಪ್ರಶ್ನೆ: ಪೂರ್ವಕಾಲದಲ್ಲಿಯೂ ಮನುಷ್ಯರು ಮುಕ್ತಿ ಗಳಿಸಿದ್ದಾರೆ, ಈಗ ಮುಕ್ತಿಗಾಗಿ ಇನ್ನೊಂದು ಹೊಸ ಆದರ್ಶವನ್ನು ಏಕೆ ಸ್ವೀಕರಿಸಬೇಕು?

ಮಹಾರಾಜ್: ಹಿಂದೆ ಮುಕ್ತಿಗಾಗಿ ತೋರಿಸಿದ ಪಥ ಬಹು ಕಠಿಣವಾದದ್ದು. ಹೊಸ ಅವತಾರದಲ್ಲಿ ಆ ಪಥವನ್ನು ಸರಳ ಮಾಡಿಕೊಟ್ಟಿದ್ದಾರೆ.

ಪ್ರಶ್ನೆ: ಅಂದರೆ ಈಗಿನ ಮುಕ್ತಿಯ ದಾರಿ ಕಠಿಣವಲ್ಲ, ಸುಲಭವಾಗಿದೆ.

ಮಹಾರಾಜ್: ಹೌದು.

ಪ್ರಶ್ನೆ: ಇಲ್ಲಿಗೆ ಬರಲೇಬೇಕು ಎಂಬ ಮಾತು ತುಸು ಒತ್ತಾಯ ಬಲವಂತದ್ದಾಗುವುದಿಲ್ಲವೆ? ಇದೊಂದು condition ಆಗದೆ?

ಮಹಾರಾಜ್: ಬರಲೇಬೇಕು ಎಂದರೆ ಈ ಭಾವಧಾರೆಯವನ್ನು ಸ್ವೀಕರಿಸಬೇಕು ಎಂದು ಅರ್ಥ.

ಪ್ರಶ್ನೆ: ಈ ಭಾವಧಾರೆಯನ್ನು ಬಿಟ್ಟರೆ ಮುಕ್ತಿ ಸಿಗುವುದಿಲ್ಲವೆ?

ಮಹಾರಾಜ್: ಇದನ್ನು ಹೇಳುವುದು ಕಷ್ಟ.

ಪ್ರಶ್ನೆ: ಅವರ ಬಳಿಗೆ ಹೋಗುವುದು ಎಂದು ತಿಳಿದರೆ ಅದು ಅಂಧಾನುಕರಣೆ; ಅವರ ಆದರ್ಶದ ಭಾವವನ್ನು ಗ್ರಹಿಸಿದರೆ ಅದು ಅಂಧಾನುಕರಣೆ ಅಲ್ಲವೆಂದಿರಿ. ಅವರ ಬಳಿಗೆ ಹೋಗುವುದು ಮತ್ತು ಅವರ ಆದರ್ಶವನ್ನು ಸ್ವೀಕರಿಸುವುದು, ಇವೆರಡರ ಮಧ್ಯೆ ವ್ಯತ್ಯಾಸವೇನು?

ಮಹಾರಾಜ್: ಅವರು ಎಂದರೆ ಯಾರು?

ಪ್ರಶ್ನೆ: ಶ್ರೀರಾಮಕೃಷ್ಣರು.

ಮಹಾರಾಜ್: ಶ್ರೀರಾಮಕೃಷ್ಣರು – ಅವರ ದೇಹತ್ಯಾಗವಾಗಿ ಹೋಗಿದೆ. ಆದರೇನು? ಅವರು ಯಾವ ಆದರ್ಶವನ್ನು ಕೊಟ್ಟು ಹೋಗಿದ್ದಾರೋ, ಆ ಭಾವವನ್ನು ಸ್ವೀಕರಿಸಬೇಕು.

ಪ್ರಶ್ನೆ: ಸರಿ, ಆದರೆ 'ಅವರ' ಹತ್ತಿರ ಬರುವುದು ಎಂದರೆ ಅದು ಅಂಧಾಭಿಮಾನ ಎನ್ನಬಹುದಲ್ಲವೆ?

ಮಹಾರಾಜ್: ಅಂಧಾಭಿಮಾನ ಎಂದು ನಾವು ಹೇಳುತ್ತೇವಷ್ಟೆ, ಆದರೆ ಗೀತೆಯಲ್ಲಿ **'ಸ ಏವಾಽಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ'** *(೪.೩)* ಎಂದು ಹೇಳಿದೆ. ಈ ಸನಾತನಧರ್ಮ ಸದಾ ಇದೆ ಮತ್ತು ಇರುತ್ತದೆ. ಠಾಕೂರರೂ ಇದನ್ನೇ ಹೇಳಿದ್ದಾರೆ. ಅಂಧಾಭಿಮಾನವಾಗುತ್ತಿದ್ದರೆ ಅವರಿಗೆ ಈ ಮಾತನ್ನು ಹೇಳಲು ಆಗುತ್ತಿರಲಿಲ್ಲ.

ಪ್ರಶ್ನೆ: ಹಾಗಾದರೆ, ಸ್ವಯಂ ಭಗವಂತನೇ ಈ ಯುಗದಲ್ಲಿ ಅವನ ಭಾವ ಮತ್ತು ಆದರ್ಶಗಳನ್ನು ಹೇಳಿದ್ದಾನೆ. ಇದು ಹೇಗೆ ಹೊಸತು?

ಮಹಾರಾಜ್: ಅಂದರೆ, ಇಲ್ಲಿ ಹೊಸ ಜೀವಂತಿಕೆ ಸಂಚಾರವಾಗಿದೆ.

ಪ್ರಶ್ನೆ: ಆದರ್ಶವೆಂದಾಗ ಹೊಸತೇನಾದರೂ ಇರುವುದಿಲ್ಲವೆ?

ಮಹಾರಾಜ್: ಹೌದು, ಆ ಆದರ್ಶದಲ್ಲಿ ಹೊಸತನವೂ ಉಂಟು.

ಪ್ರಶ್ನೆ: ಅದು ಯಾವುದು ಮಹಾರಾಜ್? ಶ್ರೀರಾಮಕೃಷ್ಣರ ಜೀವನ ಮತ್ತು ಆದರ್ಶದಲ್ಲಿ ಮತ್ತೆ ಹೊಸತನವೇನಿದೆ? ಇದರ ಬಗ್ಗೆ ಸ್ವಲ್ಪ ಹೇಳಿ.

ಮಹಾರಾಜ್: ಹೊಸತನವೆಂದರೆ ಯಜ್ಞಯಾಗಾದಿಗಳನ್ನು ಇನ್ನು ಮಾಡಬೇಕಾಗಿಲ್ಲ. ಭಗವನ್ನಾಮ ಸ್ಮರಣೆ ಮಾಡಿದರೆ ಸಾಕು. ಇದೇ ಹೊಸ ಆದರ್ಶ. ಯಜ್ಞ-ಯಾಗಾದಿಗಳನ್ನು ಮಾಡಬೇಕಾಗಿಲ್ಲ ಎಂದು ಬೇರೆ ಯಾರು ಹೇಳಿದ್ದಾರೆ? ಶ್ರೀರಾಮಕೃಷ್ಣರೇ ಹೇಳಿದರು.

ಪ್ರಶ್ನೆ: ಚೈತನ್ಯ ದೇವ ಕೂಡ ನಾಮಸ್ಮರಣೆ ಮಾಡಬೇಕೆಂದು ಹೇಳಿದ.

ಮಹಾರಾಜ್: ಚೈತನ್ಯದೇವ ಹೇಳಿದ್ದೇನೋ ಸರಿ, ಒಪ್ಪತಕ್ಕದ್ದೆ. ಆದರೆ ಅವನ ಆದರ್ಶ ಯಾವ ಸ್ಥಿತಿಯಲ್ಲಿದೆ ಎಂದು ನಾವು ಈಗ ನೋಡುತ್ತಿದ್ದೇವೆ. ಆದರ್ಶ ಯಾವಾಗ ಕಳೆಗುಂದುವುದೋ, ಅದನ್ನು ಪುನರುಜ್ಜೀವನಗೊಳಿಸಲು ಅವತಾರಗಳ ಆವಿರ್ಭಾವವಾಗುತ್ತದೆ ಆದ್ದರಿಂದ ಅವತಾರಗಳ ಆದರ್ಶ ಒಂದೆಡೆ ಸನಾತನ, ಇನ್ನೊಂದೆಡೆ ಅಷ್ಟೇ ನವೀನ.

ಪ್ರಶ್ನೆ: ಕಲಿಯುಗದಲ್ಲಿ ಕರ್ಮ ಮಾಡುವುದು ಬಹಳ ಕಠಿಣವೆಂದು ಠಾಕೂರ್ ಅದಕ್ಕಾಗಿಯೇ ಹೇಳಿದ್ದರು. ಕರ್ಮವೆಂದರೆ ವೈದಿಕ ಕರ್ಮ, ಅಂದರೆ ಯಾಗ ಯಜ್ಞಾದಿಗಳೆ?

ಮಹಾರಾಜ್: ಹೌದು.

ಪ್ರಶ್ನೆ: ಅಂದರೆ ಪುನಃ ಕರ್ಮಯೋಗದ ಉದಯವಾಯಿತು.

ಮಹಾರಾಜ್: ಕರ್ಮ ಎಂದು ಹೇಳುವಾಗ ಅವರು ಅದನ್ನು ಯಾವ ದೃಷ್ಟಿ ಕೋನದಿಂದ ಹೇಳಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ತಿನ್ನುವುದು, ಉಡುವುದು ಇತ್ಯಾದಿಗಳನ್ನು ಅವರು ನಿಷೇಧ ಮಾಡಿದ್ದಾರೆಯೆ? ಅವೂ ಕರ್ಮವಲ್ಲವೆ?

ಪ್ರಶ್ನೆ: ಅವರು ವೈದಿಕ ಕ್ರಿಯೆಗಳಿಂದ ಸಾಧಕನನ್ನು ಮುಕ್ತಗೊಳಿಸಿದರು, ಅದನ್ನು ಸಹಜವಾಗಿಸಿದರು.

ಮಹಾರಾಜ್: ಯಾಗಯಜ್ಞಾದಿಗಳಿಂದ ಮುಕ್ತಿ ಸಿಗದು. ಯಾರಿಗೆ 'ಮೊಲದ ಕೊಂಬಿ'ನಲ್ಲಿ ಹಾಗೂ ಸ್ವರ್ಗಕ್ಕೆ ಹೋಗಲು ಆಸೆಯಿದೆಯೊ ಅವರು ಅದನ್ನು ಮಾಡಲಿ. ಸಂನ್ಯಾಸಿಗಳು ಯಾಗ, ಯಜ್ಞಗಳನ್ನು

ತ್ಯಾಗ ಮಾಡಿದರು. ಯಾಗ ಯಜ್ಞಾದಿಗಳು ಅಷ್ಟೊಂದು ಆವಶ್ಯಕವಾಗಿದ್ದರೆ, ಅದನ್ನು ಬಿಟ್ಟುಬಿಡಲು ಹೇಳುತ್ತಿರಲಿಲ್ಲ.

ಪ್ರಶ್ನೆ: ಯಾಗ ಯಜ್ಞಾದಿಗಳನ್ನು ಗೃಹಸ್ಥರೂ ಬಿಟ್ಟುಬಿಟ್ಟಿದ್ದಾರೆ. ಅಥವಾ ವಿರಕ್ತಿ ಹೊಂದಿ ತ್ಯಾಗ ಮಾಡಿದ್ದಾರೆ!

ಮಹಾರಾಜ್: ಇಲ್ಲಿ ವಿರಕ್ತಿಯೆಂದರೆ ಮುಖ ಸೊಟ್ಟಗೆ ಮಾಡಿ ತ್ಯಜಿಸುವುದಲ್ಲ, ವಿರಕ್ತಿ ಎಂದರೆ ಆಸೆಯಿಲ್ಲದಿರುವುದು.

ಪ್ರಶ್ನೆ: ಏನೇ ಆಗಲಿ, ನಾವೀಗ ನೋಡುವ ಹಾಗೆ, ಮುಕ್ತಿ ಬೇಕಾದವರು ಶ್ರೀರಾಮಕೃಷ್ಣರ ಈ ನವೀನ ಆದರ್ಶಗಳನ್ನು ಸ್ವೀಕರಿಸಬೇಕಾಗುತ್ತದೆ. ಆದರೆ, ಒಂದು ಪ್ರಶ್ನೆ ಹಾಗೇ ಉಳಿಯಿತು: ಕೆಲವು ಪ್ರಾಚೀನ ಮಾರ್ಗಗಳನ್ನು ಅನುಸರಿಸಿದರೆ ಮುಕ್ತಿ ಸಿಗುವುದಿಲ್ಲವೆ?

ಮಹಾರಾಜ್: ಠಾಕೂರ್ ಪ್ರಾಚೀನ ಮಾರ್ಗಗಳನ್ನು ನಿಷೇಧಿಸಿದರೆ?

ಪ್ರಶ್ನೆ: ಇಲ್ಲ, ಹಾಗೆ ಹೇಳಿಲ್ಲ. ಆದರೆ ಇಲ್ಲಿಗೆ ಬರಲೇಬೇಕು ಎಂದು ಒತ್ತು ನೀಡಿ ಹೇಳಿದ್ದಾರಲ್ಲವೆ?

ಮಹಾರಾಜ್: ಈ ಎಲ್ಲ ಪಥಗಳೂ ಆ ಒಬ್ಬ ಭಗವಂತನೆಡೆಗೆ ಕರೆದುಕೊಂಡು ಹೋಗುವ ಮಾರ್ಗ. ಇದೇ ಶ್ರೀರಾಮಕೃಷ್ಣರ ವೈಶಿಷ್ಟ್ಯ.

ಪ್ರಶ್ನೆ: ಈ ಉದಾರ ಭಾವನೆಯನ್ನು ಸ್ವೀಕರಿಸಬೇಕು. ಅಲ್ಲವೆ?

ಮಹಾರಾಜ್: ಹೌದು.

ಪ್ರಶ್ನೆ: ಇದರರ್ಥ, 'ಇಲ್ಲಿ' ಎಂದರೆ ಒಂದು ಈ ಮಾರ್ಗವೆಂದೇ ಅರ್ಥ ಮಾಡಿಕೊಳ್ಳಬೇಕು.

ಮಹಾರಾಜ್: ಅದನ್ನೇ ಠಾಕೂರ್ ಬಾರಿಬಾರಿಗೂ ಹೇಳಿದರು. ಅವರದು ಸಮನ್ವಯಭಾವ. ಒಂದು ಭಾವವನ್ನು ದೃಢವಾಗಿ ಹಿಡಿದುಕೊ. ಹಾಗೆಂದು ಉಳಿದ ಆದರ್ಶಗಳನ್ನು ತಿರಸ್ಕಾರದಿಂದ ನೋಡಬಾರದು. ಶ್ರದ್ಧಾಸಂಪನ್ನನಾಗಿರಬೇಕು, ಯಾರೊಂದಿಗೂ ವಾದವಿವಾದ ಮಾಡಬೇಡ. ಕಾರಣ, ನಿನಗೆ ಅವರ ಮತ, ಧರ್ಮಗಳ ಬಗ್ಗೆ ಏನೂ ತಿಳಿಯದು. ನೀನು ನಂಬಿದ ಮಾರ್ಗದಲ್ಲೇ ದೃಢವಾದ ನಿಷ್ಠೆಯನ್ನಿಟ್ಟುಕೊಂಡಿರು; ಅದರೊಂದಿಗೇ ಉಳಿದ ಮತ, ಧರ್ಮಗಳ ಬಗ್ಗೆ ಶ್ರದ್ಧಾಸಂಪನ್ನನಾಗಿರು. ಇದೇ ಶ್ರೀರಾಮಕೃಷ್ಣರ ಅಭಿಪ್ರಾಯ.

ಪ್ರಶ್ನೆ: ಮಹಾರಾಜ್, ತೋತಾಪುರಿ ದಕ್ಷಿಣೇಶ್ವರಕ್ಕೆ ಬರುವ ಮೊದಲೇ ಅದ್ವೈತ ದರ್ಶನದಲ್ಲಿ ಪ್ರತಿಷ್ಠಿತನಾಗಿದ್ದನೆಂದು ಕೇಳಿದ್ದೇವೆ. ಒಂದು ದಿನ ಅವನು ಶ್ರೀರಾಮಕೃಷ್ಣರ ಜೊತೆ ಧಾರ್ಮಿಕ ಚರ್ಚೆ ನಡೆಸುತ್ತಿದ್ದ. ರಾತ್ರಿಯಾಗಿದ್ದುದರಿಂದ ಧುನಿ ಉರಿಯುತ್ತಿತ್ತು. ಆಗ ಅಲ್ಲಿಗೆ ಒಬ್ಬ ಬಂದು, ತಂಬಾಕು ಹೊತ್ತಿಸಲು ಆ ಧುನಿಯಿಂದ ಒಂದು ಕೆಂಡವನ್ನು ತೆಗೆದುಕೊಂಡ. ಅದನ್ನು ನೋಡಿದ ತೋತಾಪುರಿ, ಆತನಿಗೆ ಚಿಮಟಿಯಿಂದ ಹೊಡೆಯಲು ಹೋದ. ಇದನ್ನು ನೋಡಿದ ಶ್ರೀರಾಮಕೃಷ್ಣರು ನಗುತ್ತ, 'ಇದು ನಿನ್ನ ಬ್ರಹ್ಮಜ್ಞಾನದ ಗದ್ದಲವೆ?' ಎಂದರು. ಇಲ್ಲಿ ಅವರು ಏನು ಹೇಳಹೊರಟರು ಮಹಾರಾಜ್?

ಮಹಾರಾಜ್: ಶ್ರೀರಾಮಕೃಷ್ಣರು ಹೇಳುತ್ತಾರೆ, ಬ್ರಹ್ಮಜ್ಞಾನ ಹೊಂದಿದ ವ್ಯಕ್ತಿಯ ವ್ಯವಹಾರವೂ ಅದಕ್ಕೆ ಅನುರೂಪವಾಗಿ ಇರುತ್ತದೆ. ಎಲ್ಲೆಡೆ ಬ್ರಹ್ಮನನ್ನು ನೋಡುವವನು ಬ್ರಹ್ಮನನ್ನು ಹೊಡೆಯಲು ಮುನ್ನುಗ್ಗುತ್ತಾನೆಯೆ? ಬ್ರಹ್ಮಜ್ಞಾನಿಯ ನಡೆನುಡಿ ಒಂದೇ ರೀತಿ ಇರುವುದಿಲ್ಲ ಎಂದು ಸ್ಥಿರವಾಗುತ್ತದೆ. ಒಬ್ಬನಿಗೆ ಮುಂಗೋಪವಿದ್ದರೆ ಅದು ಹೋಗುವುದಿಲ್ಲ. ಮೊದಲು ಇತ್ತು, ನಂತರವೂ ಹಾಗೇ ಉಳಿಯುತ್ತದೆ. ಅದಕ್ಕೆ ಕಾರಣವಿಷ್ಟೆ, ಬ್ರಹ್ಮಜ್ಞಾನವಾದದ್ದು ನಿಜ, ಆದರೆ ಆತನ ಸಂಸ್ಕಾರಕ್ಕನುಗುಣವಾಗಿ ಆತನ ವ್ಯವಹಾರ ಪುನರಾವೃತ್ತಿ ಹೊಂದುತ್ತದೆ.

ಪ್ರಶ್ನೆ: ಬ್ರಹ್ಮಜ್ಞಾನವಾದ ಮೇಲೂ ಹೀಗೆ ಕ್ರೋಧವೃತ್ತಿ ಬರಬಹುದೆ?

ಮಹಾರಾಜ್: ಸಾಧ್ಯ, ಆದರೆ ಅದು ನಿಂದ್ಯವಾದದ್ದು. ನಮ್ಮ ಋಷಿಗಳೇನು ಕಡಿಮೆ ಕೋಪಿಷ್ಠರೆ? ಮಾತುಮಾತಿಗೂ ಹಿಡಿ ಶಾಪ ಹಾಕುತ್ತಿದ್ದರು. ಶಪಿಸಿದವನಿಗೆ ವಿಶಾಪವನ್ನೂ ಕೊಡುತ್ತಿದ್ದರು. ನಾಗರ ಹಾವಿನಂತೆ. ಕಡಿದರೆ ಪ್ರತಿಯಾಗಿ ಕಡಿಯಲು ಸೆಟೆದು ನಿಲ್ಲುತ್ತಿದ್ದರು.

ಪ್ರಶ್ನೆ: ಅಂದರೆ ತೋತಾಪುರಿಯ ಜ್ಞಾನ ಅಪೂರ್ಣವಾಗಿತ್ತೆ?

ಮಹಾರಾಜ್: ಅಪೂರ್ಣತೆಯೆಂದರೆ ಅದು ಜ್ಞಾನದ ಅಪೂರ್ಣತೆ ಅಲ್ಲ, ಆದರೆ ಆತ ಏನು ವ್ಯವಹಾರ ಮಾಡುತ್ತಾನೋ, ಅದರಲ್ಲಿ ಮಿಥ್ಯಾತ್ವದ ಬೋಧೆ ಉಳಿದುಬಿಡುತ್ತದೆ.

ಪ್ರಶ್ನೆ: ವ್ಯವಹಾರದಲ್ಲಿ ಮಿಥ್ಯಾತ್ವದ ಬೋಧೆ ಇರುತ್ತಿದ್ದರೆ ಹೀಗೇಕೆ ವ್ಯವಹರಿಸಿದ? ಮಿಥ್ಯೆಯ ಬೋಧೆ ಇರುತ್ತಿದ್ದರೆ ಕೋಪಿಸಿಕೊಳ್ಳುತ್ತಿದ್ದನೆ?

ಮಹಾರಾಜ್: ಅದು ಕ್ರೋಧವಲ್ಲ, ಕ್ರೋಧಾಭಾಸ.

ಪ್ರಶ್ನೆ: ಕ್ರೋಧಭಾಸವೆ? ಚಿಮಟಿ ಹಿಡಿದುಕೊಂಡು ಹೊಡೆಯಲು ಹೋಗುವುದು ಕ್ರೋಧಾಭಾಸವೆ?

ಮಹಾರಾಜ್: ಹೊಡೆಯಬಾರದೆ?

ಪ್ರಶ್ನೆ: ಶರತ್ ಮಹಾರಾಜರು ಬರೆದಿದ್ದಾರೆ, ಠಾಕೂರರ ಗುರುದೇವ ಕೂಡ ಅಪೂರ್ಣನಾಗಿದ್ದ. ಠಾಕೂರರ ಸಂಸ್ಪರ್ಶದಿಂದ ಅವನು (ತೋತಾಪುರಿ) ಪೂರ್ಣತೆಯನ್ನು ಪಡೆದ. ಇದು ಹೇಗೆ?

ಮಹಾರಾಜ್: ಅಪೂರ್ಣತೆ ಎಂದರೆ ತೋತಾಪುರಿ ಶಕ್ತಿ (ದೇವಿ)ಯನ್ನು ಸ್ವೀಕರಿಸಿರಲಿಲ್ಲ. ಪರಮಹಂಸರ ಸಂಪರ್ಕದಿಂದಾಗಿ ಸ್ವೀಕರಿಸಿದ.

ಪ್ರಶ್ನೆ: ಅಲ್ಲೊಂದು ಅಲೌಕಿಕ ಘಟನೆ ನಡೆದಿತ್ತು.

ಮಹಾರಾಜ್: ಅಲೌಕಿಕ ಘಟನೆಯಲ್ಲ. ಅಲೌಕಿಕ ಘಟನೆಯೆಂದರೆ ಮಿಥ್ಯೆಯಲ್ಲ.

ಪ್ರಶ್ನೆ: ಗಂಗೆಯಲ್ಲಿ ನೀರಿಲ್ಲದ ಕಾರಣ ತೋತಾಪುರಿಗೆ ಮುಳುಗಿ ಸಾಯಲೂ ಸಾಧ್ಯವಾಗಲಿಲ್ಲ. ಇದರಲ್ಲಿ ಆತನ ಅವಿದ್ಯೆಯನ್ನು ಕಾಣಬೇಕೋ, ಅಥವಾ ಮಾಯೆಯನ್ನು ಕಾಣಬೇಕೋ, ಇದು ಸರಿಯಾಗಿ ಅರ್ಥವಾಗುತ್ತಿಲ್ಲ, ಮಹಾರಾಜ್.

ಮಹಾರಾಜ್: ಮುಳುಗಿ ಸಾಯಲಾಗಲಿಲ್ಲ ಎಂದಿಲ್ಲಿ ತಿಳಿದು ಬರುವುದಲ್ಲ, ಮಾಯೆಯ ಪ್ರಭಾವವೇ ಇಲ್ಲಿ ತಿಳಿದು ಬರುವುದು.

ಪ್ರಶ್ನೆ: ಲೌಕಿಕವೂ, ಅಲೌಕಿಕವೂ ಎಲ್ಲವೂ ಮಾಯೆಯ ಪ್ರಭಾವವೇ.

ಮಹಾರಾಜ್: ಲೌಕಿಕ, ಅಲೌಕಿಕ ಎಂದು ನಮ್ಮ ಬುದ್ಧಿಗೆ ಹೊಳೆದಂತೆ ನಾವು ಪ್ರತ್ಯೇಕಿಸುತ್ತೇವೆ. ಯಾವುದನ್ನು ನಮ್ಮ ಬುದ್ಧಿಯಿಂದ ಅರಿಯಲಾಗುವುದಿಲ್ಲವೋ ಅದನ್ನು ಅಲೌಕಿಕ ಎನ್ನುತ್ತೇವೆ. ಇದು ಆ ವಿಚಾರವಲ್ಲ. ಇಲ್ಲಿ ಇದರಿಂದ ತೋತಾಪುರಿಗೆ ಏನು ಲಾಭವುಂಟಾಯಿತು? ಆತನಿಗೆ ಮಾಯೆಯ ಪ್ರಭಾವ ಏನು ಮತ್ತು ಮಾಯೆಯ ಅಸ್ತಿತ್ವ ಏನು ಎಂಬುದು ಅರ್ಥವಾಯಿತು, ಅಷ್ಟೆ.

ಪ್ರಶ್ನೆ: ಆತನಿಗೆ ದರ್ಶನವುಂಟಾಗಿತ್ತೆಂದು ಹೇಳುತ್ತಾರೆ.

ಮಹಾರಾಜ್: ದರ್ಶನವೆಂದರೆ ಎರಡು ಕಣ್ಣುಗಳಿಂದ ನೋಡುವುದೆ?

ಪ್ರಶ್ನೆ: ದರ್ಶನವಾದ ಮೇಲೆ ಆತ ಸರ್ವತ್ರ ಜಗನ್ಮಾತೆಯ ದರ್ಶನ ಪಡೆದನೆಂದು ಹೇಳುತ್ತಾರೆ.

ಮಹಾರಾಜ್: ಹೌದು, ಹಾಗಾಯಿತು. ಈ 'ದರ್ಶನ'ವೆಂಬುದೇ ಒಂದು ದೊಡ್ಡ ಗೊಂದಲ. ಬ್ರಹ್ಮಜ್ಞಾನವಾದ ಮೇಲೆ ಬ್ರಹ್ಮದರ್ಶನ ವಾಗುವುದಿಲ್ಲವೆ? ಇಷ್ಟದೇವತೆಯ ದರ್ಶನವಾಯಿತೆಂದರೆ, ಕಣ್ಣಿನಿಂದ ನೋಡುವುದೇ? ಕಣ್ಣಿನ ಮೂಲಕ ನೋಡುವಂಥದಾಗಿದ್ದರೆ ಎಲ್ಲರೂ ನೋಡುತ್ತಿದ್ದರು. ಕಣ್ಣಿನ ಮೂಲಕವಲ್ಲ, ಬುದ್ಧಿ ಶುದ್ಧವಾದಾಗ ದರ್ಶನ ವುಂಟಾಗುವುದು. ಅಂತಹ ಶುದ್ಧ ಬುದ್ಧಿ ನಮಗೆಲ್ಲರಿಗೂ ಇಲ್ಲ. ಆ ಬುದ್ಧಿ ಹೊಳೆದಾಗ, ನಮ್ಮ ದೃಷ್ಟಿ ಬೇರೆಯೇ ಆಗಿಬಿಡುತ್ತದೆ.

ಪ್ರಶ್ನೆ: ಶಂಕರಾಚಾರ್ಯರಿಂದ ಪ್ರತಿಷ್ಠಾಪಿತವಾದ ಅದ್ವೈತವಾದದಲ್ಲಿ ಮಾಯಾತತ್ತ್ವವನ್ನು ಚೆನ್ನಾಗಿ ಸ್ಥಾಪನೆ ಮಾಡಲಾಗಿದೆ. ಅದೇ ಸಂಪ್ರ ದಾಯದಲ್ಲಿ ಬಂದ ತೋತಾಪುರಿಗೆ ಇದರ ಬಗ್ಗೆ ತಿಳಿದಿರಲಿಲ್ಲವೆ?

ಮಹಾರಾಜ್: ಅಯ್ಯಾ! ಮಾಯೆ ಎಂದರೆ ಮಿಥ್ಯೆ ಎಂದು ಹೇಳುತ್ತಾರೆ. ಅದನ್ನು ಪ್ರತಿಷ್ಠಿಸುವುದು ಎಲ್ಲಿ ಬಂತು?

ಪ್ರಶ್ನೆ: ಮಾಯೆಗೆ ಮಿಥ್ಯೆ ಎಂದು ಹೇಳುವುದು ತಿಳಿದ ವಿಷಯವೆ, ಅದನ್ನೇ ಶಂಕರಾಚಾರ್ಯರು ಪುನಃ ಪುನಃ ಹೇಳುತ್ತಾರೆ. ಅದೇ ಸಂಪ್ರ ದಾಯದಿಂದ ಬಂದ ತೋತಾಪುರಿಗೆ ಅದು ತಿಳಿಯಲಿಲ್ಲವೆ?

ಮಹಾರಾಜ್: ಮಾಯೆಯಿತ್ತು, ಆದರೆ ಮಾಯೆಯ ಈ ರೀತಿಯ ಪ್ರಭಾವ ಆತನಿಗೆ ತಿಳಿದಿರಲಿಲ್ಲ.

ಪ್ರಶ್ನೆ: ಮಾಯೆ ಮಿಥ್ಯೆ ಎಂಬುದನ್ನು ತಿಳಿದಿದ್ದ.

ಮಹಾರಾಜ್: ಅದಷ್ಟನ್ನು ತಿಳಿದಿದ್ದ.

ಪ್ರಶ್ನೆ: ಮಾಯೆಯ ಪ್ರಭಾವವನ್ನು ಅವನು ಸ್ವೀಕಾರ ಮಾಡುತ್ತಿರಲಿಲ್ಲ. ಅವನು ಶಕ್ತಿಯನ್ನು ಒಪ್ಪುತ್ತಿರಲಿಲ್ಲ ಅಂದರೆ, ಈಶ್ವರ ಸಗುಣ, ಸಾಕಾರ ರೂಪ ಆಗಲು ಸಾಧ್ಯ ಎಂಬುದನ್ನು ಅವನು ಸ್ವೀಕರಿಸಲಿಲ್ಲವೆ?

ಮಹಾರಾಜ್: ಸಾಕಾರವಲ್ಲ, ಸಗುಣವೆಂದು ಹೇಳು. ಗುಣವನ್ನು ಒಪ್ಪ ದಿದ್ದರೆ ಆತನ ಜಗದ್ವ್ಯಾಪಾರ ಹೇಗೆ ನಡೆಯುತ್ತದೆ? ಗುಣದ ಆರೋಪ ವನ್ನು ಮಾಡದೆ ವ್ಯವಹಾರ ಸಾಧ್ಯವಿಲ್ಲ. ಆದರೆ ಬ್ರಹ್ಮಜ್ಞಾನಿಗೆ ಇದು ಮಿಥ್ಯೆ ಎಂಬ ಅರಿವು ಇರುತ್ತದೆ. ಮಿಥ್ಯಾತ್ವದ ಜ್ಞಾನವಿರುತ್ತದೆ. ವ್ಯವ ಹಾರ ಮಾಡುತ್ತನಾದರೂ ಅದು ಮಿಥ್ಯೆ ಎಂಬ ಅರಿವಿರುತ್ತದೆ. ಈ ವ್ಯವ ಹಾರದ ಪ್ರಭಾವ ಹೇಗಿರುತ್ತದೆಂದರೆ: ಶ್ರೀರಾಮಚಂದ್ರ ಅವತಾರ ಪುರುಷ; ಆದರೆ ಸೀತೆಯನ್ನು ಅಪಹರಿಸಿದಾಗ ಹೃದಯ ಬಿರಿಯುವಂತೆ ಅತ್ತ. ಶ್ರೀರಾಮಕೃಷ್ಣರು ಅವತಾರ ಪುರುಷರು; ಅಕ್ಷಯನೆಂಬ ಹುಡುಗ ತೀರಿಕೊಂಡಾಗ ಅಳುತ್ತ, 'ಅಂಗವಸ್ತ್ರ ಹಿಂಡಿದ ಹಾಗೆ ನನ್ನ ಜೀವ ಹಿಂಡಿ ದಂತಾಗುತ್ತಿದೆ' ಎಂಬಂತೆ ಅನುಭವಿಸಿದರು. ಮಾಯೆಯ ಪ್ರಭಾವಕ್ಕೆ ಅನುಸಾರವಾಗಿ ವ್ಯವಹಾರವಿರುತ್ತದೆ. ನಾವು ವಿಚಾರ ಮಾಡುವಾಗ ಕೇವಲ ಒಂದೇ ದೃಷ್ಟಿಯಿಂದ ತತ್ತ್ವವಿಚಾರ ಮಾಡುತ್ತೇವೆ. ಇನ್ನೂ ಹಲವು ದೃಷ್ಟಿಗಳಿವೆ ಎಂಬುದನ್ನು ನಾವು ಗಮನಿಸುವುದಿಲ್ಲ. '**ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ**' ಎನ್ನಲಾಗಿದೆ. 'ಅವನು (ಬ್ರಹ್ಮನು) 'ಅನೇಕವಾಗುತ್ತೇನೆ' ಎಂದು ಯೋಚಿಸಿದ. ಅನೇಕವಾಗುತ್ತೇನೆಂದರೆ, ಆತನಿಂದ ಅನೇಕವಾಗಲು ಸಾಧ್ಯ ಎಂದರ್ಥ. ಅಷ್ಟೇ ಅಲ್ಲ, ಆತ ಅಜ್ಞಾ ನವೂ ಆಗಬಲ್ಲ, ಕೋಪಿಷ್ಠನಾಗಬಲ್ಲ, ಇನ್ನೇನು ಬೇಕಾದರೂ ಆಗ ಬಲ್ಲ. ಇಲ್ಲೊಂದು ಪ್ರಶ್ನೆ ಏಳುತ್ತದೆ, ಅವನು ಹೀಗೆಲ್ಲ ಆಗಬಲ್ಲನೆಂದರೆ ಅವನಿಗೂ ಸಾಮಾನ್ಯ ಜನರಿಗೂ ಏನು ವ್ಯತ್ಯಾಸ? ವ್ಯತ್ಯಾಸವಿದು: ಇದೆಲ್ಲ ಮಿಥ್ಯೆ ಎಂಬ ಅರಿವು ಅವನಿಗಿದ್ದೇ ಇರುತ್ತದೆ. ಅದು ಜಾಗೃತ ವಾಗಿರುತ್ತದೆ. ದೇಹಧಾರಣೆ ಮಾಡಿದ ಮೇಲೆ ಅದಕ್ಕೆ ದಂಡ ತೆರಲೇ ಬೇಕಾಗುತ್ತದೆ. ಜ್ಞಾನಿ ಪ್ರಜ್ಞಾಪೂರ್ವಕ ಅನುಭವಿಸುತ್ತಾನೆ. ಮೂರ್ಖ ಗೋಳಿಡುತ್ತ ಅನುಭವಿಸುತ್ತಾನೆ. ಜ್ಞಾನಿ ಅರಿತು ಪ್ರಾರಬ್ಧವನ್ನು ಅನು ಭವಿಸುತ್ತಾನೆ. ಅಜ್ಞಾನಿಯು ಬಹಳ ಕಷ್ಟದಿಂದ ಅನುಭವಿಸುತ್ತಾನೆ.

ಪ್ರಶ್ನೆ: 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿದೆ, ಸ್ವಾಮೀಜಿ ಹರ ಮೋಹನನಿಗೆ ಹಾತಿ (ಆನೆ) ನಾರಾಯಣ-ಮಾವುತ ನಾರಾಯಣ ಕಥೆಯನ್ನು ಏಳು ದಿನಗಳ ಕಾಲ ಅರ್ಥೈಸಿ ಹೇಳಿದರು, ಅಂತ. ಇಲ್ಲಿ ಸ್ವಾಮೀಜಿಯವರ ಇಂಗಿತವೇನಿತ್ತು?

ಮಹಾರಾಜ್: ಸ್ವಾಮೀಜಿ ಏಳು ದಿನಗಳವರೆಗೆ ಆ ಕಥೆಯ ಅಂತ ರಾರ್ಥವನ್ನು ವಿವರಿಸಿ ಹೇಳಿದ್ದರು. ನನ್ನಿಂದ ಅದು ಸಾಧ್ಯವೆ?

ಪ್ರಶ್ನೆ: ಏಳುದಿನ ಅಲ್ಲದಿದ್ದರೆ ಒಂದು ದಿನದ ಮಟ್ಟಿಗಾದರೂ ಸಾಧ್ಯ.

ಮಹಾರಾಜ್: ಮಾವುತ ನಾರಾಯಣ ಒಬ್ಬನಿಗೆ ಹೇಳುತ್ತಾನೆ, 'ದಾರಿ ಬಿಡು, ದಾರಿಬಿಡು' ಅಂತ. ಆದರೆ ಆ ವ್ಯಕ್ತಿ ದಾರಿಯಿಂದ ಸರಿಯಲಿಲ್ಲ. ಆತ ಯೋಚಿಸಿದ, ಆನೆ ಕೂಡ ನಾರಾಯಣನೇ ಅಲ್ಲವೆ? ಆನೆ ನಾರಾ ಯಣನೇ ಆಗಿರಬಹುದು, ಆದರೆ ಮಾವುತನೂ ಅವನೇ ಅಲ್ಲವೆ? ಮಾವುತ ನಾರಾಯಣನ ಮಾತನ್ನು ಏಕೆ ಕೇಳಬಾರದು? ಅಂದರೆ ಸರ್ವತ್ರ ನಾರಾಯಣನ ದರ್ಶನವಾದರೂ, ಎಲ್ಲರೊಂದಿಗೆ ಒಂದೇರೀತಿ ವ್ಯವಹರಿಸಲು ಆಗುವುದಿಲ್ಲ. ಠಾಕೂರರು ಇನ್ನೊಂದು ಉಪಮೆ ಕೊಡು ತ್ತಾರೆ. ಕೆಲವು ಬಗೆಯ ನೀರಿನಿಂದ ಕೈಕಾಲು ತೊಳೆಯಬಹುದು, ಇನ್ನು ಕೆಲವು ನೀರಿನಲ್ಲಿ ಸ್ನಾನ ಮಾಡಬಹುದು, ಕೆಲವು ಬಗೆಯ ನೀರನ್ನು ಕುಡಿ ಯಬಹುದು. ಹೀಗೆ ನೀರಿನಲ್ಲಿಯೂ ಭೇದವಿದೆ. ಎಲ್ಲವೂ ನಾರಾ ಯಣನೇ ಆಗಿದ್ದರೂ, ಎಲ್ಲರೊಡನೆ ಒಂದೇರೀತಿ ವ್ಯವಹರಿಸಲಾಗದು.

ಪ್ರಶ್ನೆ: ಅಂದರೆ ಒಬ್ಬೊಬ್ಬ ನಾರಾಯಣನ ಹತ್ತಿರ ಒಂದೊಂದು ರೀತಿ ವ್ಯವಹರಿಸಬೇಕಾಗುತ್ತದೆ.

ಮಹಾರಾಜ್: ಹೌದು.

ಪ್ರಶ್ನೆ: ಅಂದರೆ, ಭೇದಬುದ್ಧಿ, ನಾರಾಯಣ ಬುದ್ಧಿಗಳು ಒಟ್ಟಿಗೇ ಇರುತ್ತವೆಯೆ?

ಮಹಾರಾಜ್: ಯಾಕಿರಬಾರದು? ನೀನು ಒಂದು ಸಲ ಕೆಂಪು ಅಂಗಿ ಹಾಕುತ್ತೀಯಾ, ಇನ್ನೊಂದು ಸಲ ಹಸಿರು ಅಂಗಿ, ಅಥವಾ ಹಳದಿ ಅಂಗಿ ತೊಡುತ್ತೀಯಾ. ಆಗ ನೀನು ಬದಲಾಗುತ್ತೀಯಾ? ನೀನು ನೀನಾಗಿಯೇ ಇರುತ್ತೀಯೆ. ವ್ಯವಹಾರಭೇದ ಉಳಿಯಿತು, ಆದರೆ ಸ್ವರೂಪ ಒಂದೇ ಆಗಿದೆ. ಭಾಗವತದಲ್ಲಿ ಒಂದು ಶ್ಲೋಕವಿದೆ.

> **ತ್ವತ್ತೋಽಸ್ಯ ಜನ್ಮಸ್ಥಿತಿ ಸಂಯಮಾನ್ ವಿಭೋ**
> **ವದಂತ್ಯನೀಹಾದಗುಣಾದವಿಕ್ರಿಯಾತ್ ।**
> **ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ**
> **ತ್ವದಾಶ್ರಯತ್ವಾದುಪಚರ್ಯತೇ ಗುಣೈಃ ॥** *(೧೦.೩.೧೯)*

''ಹೇ ವಿಭೋ, ನೀನು ಬಹುರೂಪಧಾರಿ, ನಿನ್ನಿಂದಲೇ ಈ ಜಗ ತ್ತಿನ ಸೃಷ್ಟಿ-ಸ್ಥಿತಿ-ಲಯಗಳಾಗುತ್ತವೆ. ಆದರೆ ನೀನು ನಿರ್ಗುಣ, ನಿಷ್ಕ್ರಿಯ. ಆದರೂ ಇವುಗಳೇಕೆ ನಿನ್ನ ಮೂಲಕ ನಡೆಯುತ್ತವೆ? ಉತ್ತರ: ಅವು ನಿನ್ನಿಂದ ನಡೆಯುತ್ತಿಲ್ಲ, ಗುಣಗಳ ಮೂಲಕ ನಡೆಯು ತ್ತವೆ. ಈ ಗುಣಗಳು ನಿನ್ನ ಆಶ್ರಯ ಪಡೆದದ್ದರಿಂದ ಈ ಗುಣಗಳ ಕ್ರಿಯೆ ನಿನ್ನ ಮೇಲೆ ಆರೋಪಿತವಾಗಿದೆ. ಹೀಗಾಗಿ ಬ್ರಹ್ಮ ಮತ್ತು ಈಶ್ವರರು ಭಿನ್ನರಲ್ಲ, ಈಶ್ವರನ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳೆಲ್ಲವೂ ಬ್ರಹ್ಮನ ಮೇಲೆಯೇ ಆರೋಪಿತವಾಗಿವೆ.''

ಯೋಗವಾಸಿಷ್ಠದ ಕಥೆಗಳು



ಸ್ವಾಮಿ ವೀರೇಶಾನಂದ

ಕಥಾಗುಚ್ಛ – ೫

ಇಂದ್ರ ಮತ್ತು ಅಹಲ್ಯೆಯ ಕಥೆ

*(**ಗಮನಿಸಿ:** ವಾಲ್ಮೀಕಿ ರಾಮಾಯಣದಲ್ಲಿ ಬರುವ ಇಂದ್ರ ಅಹಲ್ಯೆಯರ ಕಥೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ.)*

ವಸಿಷ್ಠರು ರಾಮಚಂದ್ರನಿಗೆ ಉಪದೇಶ ಮಾಡುತ್ತಿದ್ದಾರೆ: ಓ, ಕಮಲಲೋಚನನಾದ ರಾಮಚಂದ್ರ, ಮನಸ್ಸು ಆತ್ಮದ ಅರಿವನ್ನು ನಾಶಪಡಿಸುತ್ತದೆ. ಈ ಜಗತ್ತನ್ನು ಸೃಷ್ಟಿಸುವುದು ಮನಸ್ಸೇ. ಮನಸ್ಸಿನ ಕಾರ್ಯವೇ ಜಗತ್ತಿನ ಕಾರ್ಯವೆನಿಸಿಕೊಳ್ಳುತ್ತದೆ. ದೈಹಿಕ ಚಟುವಟಿಕೆಗಳು ಕ್ರಿಯೆಗಳೇ ಅಲ್ಲ ಎಂದು ಹೇಳಬೇಕು. ಏಕೆಂದರೆ ಅವೆಲ್ಲವೂ ಮನಸ್ಸಿನ ವಿಕಾರಗಳು ಮಾತ್ರವೇ. ಮನಸ್ಸಿನ ಅದ್ಭುತ ಶಕ್ತಿಯನ್ನು ಬ್ರಹ್ಮ ಮಾತ್ರ ಅರಿತುಕೊಳ್ಳಬಲ್ಲನು. ಈ ದೇಹವೆಂಬುದು ಮನಸ್ಸು ತನ್ನ ಕಾರ್ಯವನ್ನು ಗೈಯುವುದಕ್ಕೆ ಮಾಡಿಕೊಂಡ ಪಡಿಯಚ್ಚು ಎಂದು ಹೇಳಬಹುದು. ಮನಸ್ಸು ದೇಹವನ್ನು ಚಿಂತಿಸುತ್ತ ದೇಹವೇ ಆಗಿಬಿಡುವುದು. ನಂತರ ದೇಹದಲ್ಲಿ ಬಂಧಿತನಾಗಿ, ಈ ದೇಹದ ಮೂಲಕ ಹಲವಾರು ರೀತಿಯ ನೋವುಗಳನ್ನು ಕಷ್ಟಗಳನ್ನೂ ಅನುಭವಿಸುವುದು. ಸರ್ವವ್ಯಾಪಿಯಾದ ಆತ್ಮವಸ್ತುವಿನೊಡನೆ ತನ್ನನ್ನು ತಾದಾತ್ಮ್ಯಗೊಳಿಸಿಕೊಂಡವನು ಮಾತ್ರವೇ ದೇಹದ ಸಂಕಷ್ಟಗಳಿಂದ ಪಾರಾಗಬಲ್ಲನು. ಅವನು ಮಾತ್ರವೇ 'ತಾನು ದೇಹವಲ್ಲ' ಎಂಬ ನಿಜವಾದ ಜ್ಞಾನವನ್ನು ಪಡೆದುಕೊಳ್ಳಬಲ್ಲನು. ಇಂದ್ರ ಮತ್ತು ಅಹಲ್ಯೆಯರು ಅಂಥ ದೈಹಿಕ ಬವಣೆಯಿಂದ ಸಂಪೂರ್ಣವಾಗಿ ಪಾರಾಗಿದ್ದರು.

ರಾಮ ಪ್ರಶ್ನಿಸಿದ : ಪೂಜ್ಯ ಗುರುಗಳೇ, ಈ ಇಂದ್ರ ಯಾರು? ಈ ಅಹಲ್ಯೆ ಎಂಬುವವಳು ಯಾರು? ಅವರಿಬ್ಬರ ಬಗ್ಗೆ ತಿಳಿದುಕೊಳ್ಳಬೇಕೆಂದು ನನಗೆ ಬಹಳ ಕಾತರ ಉಂಟಾಗಿದೆ. ವಸಿಷ್ಠರು ಅವರಿಬ್ಬರ ಕಥೆಯನ್ನು ಹೇಳಲಾರಂಭಿಸಿದರು:

ಬಹಳ ದಿನಗಳ ಹಿಂದೆ ಮಗಧ ರಾಜ್ಯವನ್ನು ಇಂದ್ರದ್ಯುಮ್ನ ಎಂಬ ರಾಜನು ಆಳುತ್ತಿದ್ದನು. ಅವನಿಗೆ ಅಹಲ್ಯೆ ಎಂಬ ಹೆಂಡತಿಯಿದ್ದಳು. ಆ ಊರಿನಲ್ಲಿಯೇ ಇಂದ್ರ ಎಂಬ ಹೆಸರಿನ ಯುವಕನಿದ್ದನು. ರಾಣಿಗೆ ಅವನ ಮೇಲೆ ಆಕರ್ಷಣೆ ಉಂಟಾಯಿತು. ಅವಳು ಅವನೊಡನೆ ಸಂಗ ಬೆಳೆಸಿದಳು. ಈ ಸಮಾಚಾರ ರಾಜನಿಗೆ ಮುಟ್ಟಿತು. ಅವನಿಗೆ ತುಂಬ ಕೋಪ ಬಂತು. ಚಳಿಗಾಲದ ಸಮಯ ಅದು. ಕೊರೆಯುತ್ತಿರುವ ನೀರಿನಲ್ಲಿ ಇಬ್ಬರನ್ನೂ ಮುಳುಗಿಸಿಬಿಡಿ ಎಂದು ಆಜ್ಞೆಯಿತ್ತನು. ಹಾಗೆಯೇ ಮಾಡಲಾಯಿತು. ಆದರೆ ಇಬ್ಬರೂ ನಗುನಗುತ್ತಲೇ ಇದ್ದರು. ಆನಂದಭಾವದಲ್ಲಿ ಮುಳುಗಿ ಹೋಗಿದ್ದರು.

ನಂತರ ಬೆಂಕಿಯ ಮೇಲೆ ಇಟ್ಟಿದ್ದ ದೊಡ್ಡ ಬಾಣಲೆಯಲ್ಲಿ ಅವರನ್ನು ಬಿಸುಡಲಾಯಿತು. ಅಲ್ಲಿಯೂ ಅವರಿಗೆ ಏನೂ ಆಗಲಿಲ್ಲ. ಅವರಿಬ್ಬರೂ ರಾಜನಿಗೆ ಹೇಳಿದರು: ರಾಜನೇ, ನಾವಿಬ್ಬರೂ ಮತ್ತೊಬ್ಬರನ್ನು ಚಿಂತಿಸುತ್ತ ಆನಂದದಿಂದ ಇದ್ದೇವೆ. ನಮಗೆ ಯಾವ ನೋವೂ ಉಂಟಾಗುತ್ತಿಲ್ಲ. ತದನಂತರ ಅವರಿಬ್ಬರನ್ನೂ ಆನೆಯ ಕಾಲುಗಳಿಂದ ತುಳಿಸಲಾಯಿತು. ಹೀಗಾದರೂ ಅವರಿಗೆ ಏನೂ ಆಗಲಿಲ್ಲ. ಅವರು ಹೇಳಿದರು: 'ಓ ರಾಜ, ನಾವಿಬ್ಬರೂ ಪರಸ್ಪರರ ಚಿಂತನೆಯಲ್ಲಿ ಆನಂದವಾಗಿದ್ದೇವೆ.' ಅನಂತರ ರಾಜಭಟರು ಅವರನ್ನು ಕಬ್ಬಿಣದ ಸಲಾಕೆಗಳಿಂದಲೂ, ಸರಪಳಿಗಳಿಂದಲೂ ಸಿಕ್ಕಾಪಟ್ಟೆ ಹೊಡೆದರು; ಇದಲ್ಲದೆ ಸುತ್ತಿಗೆಯಿಂದ ಬಾರಿಸಿದರು. ಇಷ್ಟಾದರೂ ಅವರು ಸ್ವಲ್ಪ ಕೂಡ ನೋವಿನ ಚಿಹ್ನೆಯನ್ನು ತೋರಗೊಡಲಿಲ್ಲ. ಅವರು ಸುಮ್ಮನೆ ನಗುತ್ತಿದ್ದರು; ಆನಂದಮಯರಾಗಿದ್ದರು.

ರಾಜನಿಗೆ ಅತ್ಯಾಶ್ಚರ್ಯವಾಯಿತು. ನಿಮಗೆ ಇಷ್ಟೊಂದು ದೈಹಿಕ ಹಿಂಸೆಯನ್ನು ಕೊಟ್ಟರೂ ನೀವಿಬ್ಬರೂ ಕಿಂಚಿತ್ತೂ ನೋವನ್ನು ಅನುಭವಿಸುತ್ತಿಲ್ಲವಲ್ಲ! ಅದು ಹೇಗೆ ಸಾಧ್ಯ? ಎಂದು ಅವರನ್ನು ಕೇಳಿದನು.

ಅದಕ್ಕೆ ಅವರಿಬ್ಬರೂ ಹೀಗೆ ಉತ್ತರಿಸಿದರು: ರಾಜನೇ, ಯಾವ ಬಗೆಯ ಚಿತ್ರಹಿಂಸೆಯೂ ನಮ್ಮನ್ನು ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ನಮ್ಮಿಬ್ಬರ ಮುಂದಿರುವ ಜಗತ್ತು ಏನು ಗೊತ್ತೆ? ನಮ್ಮಿಬ್ಬರ ಆಕಾರಗಳು ಮಾತ್ರ. ಇಡೀ ಜಗತ್ತೇ ನಮ್ಮಿಬ್ಬರಿಂದ ತುಂಬಿಕೊಂಡಿರುವ ಹಾಗೆ ನಾವು ಕಾಣುತ್ತಿದ್ದೇವೆ. ಈ ಜಗತ್ತಿನಲ್ಲಿರುವ ಎಲ್ಲ ಆಕಾರಗಳಲ್ಲೂ, ಎಲ್ಲ ಸ್ವರೂಪಗಳನ್ನೂ ನಮ್ಮನ್ನೇ ನಾವು ಕಾಣುತ್ತಿದ್ದೇವೆ. ಹೀಗಾಗಿ ನಮ್ಮಿಬ್ಬರ ಹೊರತು ಇನ್ನೇನನ್ನೂ ನಾವು ಈ ಜಗತ್ತಿನಲ್ಲಿ ಕಾಣುತ್ತಲೇ ಇಲ್ಲ. ಇದಲ್ಲದೆ ನಾವು ಆನಂದವನ್ನು ಪೂರ್ಣವಾಗಿ ಅನುಭವಿಸುತ್ತಿದ್ದೇವೆ. ಹೀಗಾಗಿ ನಮಗೆ ನಮ್ಮ ಶರೀರಗಳ ಅರಿವೇ ಇಲ್ಲ. ಹೀಗಾಗಿ ನಾವು ಯಾವ ನೋವನ್ನೂ ಅನುಭವಿಸುತ್ತಿಲ್ಲ. ನಮ್ಮ ದೇಹಗಳನ್ನು ತುಂಡುತುಂಡಾಗಿ ಮಾಡಿದರೂ ನಮಗೆ ಸ್ವಲ್ಪವೂ ನೋವುಂಟಾಗುವುದಿಲ್ಲ.

ಓ ರಾಜನೇ, ಮನಸ್ಸು ಒಂದು ವಸ್ತುವಿನ ಮೇಲೆ ಪೂರ್ತಿಯಾಗಿ ನಿಂತಿದ್ದರೆ, ಅದಕ್ಕೆ ಯಾವ ನೋವಿನ ಭಾವನೆಯೂ ಉಂಟಾಗದು. ಮನಸ್ಸು ಒಂದು ಸಂಗತಿಯಲ್ಲಿ ಸಂಪೂರ್ಣವಾಗಿ ಮಗ್ನವಾಗಿದ್ದರೆ, ದೇಹದ ನೋವುಗಳನ್ನು ಮತ್ತು ತೊಂದರೆಗಳನ್ನು ಗಮನಿಸುವವರಾರು? ಯಾರೂ ಇಲ್ಲ. ಮನಸ್ಸು ದೇಹದಲ್ಲಿ ತಾದಾತ್ಮ್ಯ

ಗೊಂಡಾಗ ಮಾತ್ರ ದೇಹದ ನೋವುಗಳ ಜೊತೆಗೆ ತನ್ನನ್ನು ಒಂದಾಗಿಸಿಕೊಳ್ಳುತ್ತದೆ. ಬೇರೆಲ್ಲಿಯೋ ಸಂಪೂರ್ಣವಾಗಿ ತಾದಾತ್ಮ್ಯ ಹೊಂದಿದ್ದರೆ, ದೇಹದ ಕಡೆ ಗಮನ ಹರಿಸುವುದಕ್ಕೆ ಅದಕ್ಕೆ ಆಗುವುದೇ ಇಲ್ಲ, ಅಲ್ಲವೆ?

ಮನಸ್ಸೆಂದರೆ ತಾನೇ ಏನು? ನೋವನ್ನು ಅನುಭವಿಸುವುದಕ್ಕೆ ಅದೊಂದು ಸಾಧನ ಅಷ್ಟೇ. ಈಗ ನಮ್ಮ ಮನಸ್ಸು ನಾವು ಇಷ್ಟಪಡುವ ಸಂಗತಿಯ ಮೇಲೆ (ಅಂದರೆ ಪರಸ್ಪರರ ಮೇಲೆ) ಸಂಪೂರ್ಣವಾಗಿ ನೆಲೆನಿಂತಿದೆ. ಹೀಗಾಗಿ ಅದಕ್ಕೆ ಹೇಗೆ ತಾನೇ ನೋವು ತಟ್ಟಲು ಸಾಧ್ಯ? ನಮ್ಮ ಪ್ರಿಯವಸ್ತುವಿನ ಮೇಲಿಟ್ಟ ನಮ್ಮ ಮನಸ್ಸನ್ನು ಜಗತ್ತಿನ ಯಾವುದೇ ಶಕ್ತಿಯೂ ಬೇರೆ ಕಡೆ ಸೆಳೆಯಲು ಸಾಧ್ಯವಿಲ್ಲ.

ಮಹಾರಾಜ, ಎಲ್ಲ ದೇಹಗಳೂ ಉಂಟಾಗುವುದು ಮನಸ್ಸಿನಿಂದಲೇ. ಎಲ್ಲವನ್ನೂ ಮಾಡುವುದು ಮನಸ್ಸೇ. ಒಂದು ರೀತಿಯಲ್ಲಿ ಹೇಳುವುದಾದರೆ, ಮನಸ್ಸೇ ಪರಮೋಚ್ಚ ದೇಹ. ಈ ದೇಹ ನಾಶವಾದರೂ ಮನಸ್ಸು ತನಗೆ ಇಷ್ಟವಾದ ರೀತಿಯಲ್ಲಿ ಹೊಸದೇಹವನ್ನು ಪಡೆದುಕೊಳ್ಳುತ್ತದೆ. ಆತ್ಮಜ್ಞಾನದಿಂದ ಮಾತ್ರವೇ ಮನಸ್ಸು ಸಂಪೂರ್ಣವಾಗಿ ನಾಶವಾಗಬಲ್ಲುದು. ಆಗ ಮಾತ್ರ ಹೊಸ ದೇಹಗಳ ಉತ್ಪತ್ತಿ ಸಾಧ್ಯವಾಗುವುದಿಲ್ಲ.

ರಾಜನಿಗೆ ಅವರ ಮಾತುಗಳ ಅಂತರಾರ್ಥದ ಅರಿವಾಯಿತು. ಮುನಿ ಭರತನು ರಾಜನ ಪಕ್ಕದಲ್ಲಿಯೇ ಕುಳಿತಿದ್ದನು. ಪರಸ್ಪರ ಇಬ್ಬರೂ ಕಾಮಾಸಕ್ತರಾಗಿದ್ದರೂ ಅರಿವಿನ ಮಾತುಗಳನ್ನೇ ಆಡಿದ್ದಾರೆ ಎಂದು ಅವನೂ ಮೆಚ್ಚುಗೆ ವ್ಯಕ್ತಪಡಿಸಿದನು. ಅವರಿಬ್ಬರೂ ಮುಕ್ತವಾಗಿ ಇರಲೆಂದು, ರಾಜನು ಅವರಿಬ್ಬರನ್ನೂ ತನ್ನ ರಾಜ್ಯದಿಂದ ವಿದೇಶಕ್ಕೆ ಬಹಿಷ್ಕರಿಸಿದನು.

ಈ ಕಥೆಯನ್ನು ಹೇಳಿದ ವಸಿಷ್ಠರು ರಾಮನಿಗೆ ಹೀಗೆ ಉಪದೇಶಿಸಿದರು: ಮಗೂ ರಾಮ, ಈ ದೇಹಕ್ಕೆ ಹಲವಾರು ಅಂಗಗಳಿವೆ. ಇವೆಲ್ಲವೂ ಸೇರಿ ಬರಿಯ ಮನಸ್ಸಲ್ಲದೆ ಬೇರೆಯಲ್ಲ. ಹಾಗೆಯೇ ಇಡೀ ಸೃಷ್ಟಿಯೂ ಕೂಡ ಮನಸ್ಸಲ್ಲದೆ ಬೇರೆಯಲ್ಲ. ಮನಸ್ಸು ನಾಶವಾದರೆ, ದೇಹ ಮತ್ತು ಜಗತ್ತು ಈ ಎರಡೂ ನಾಶವಾಗುವವು.

ಮಗುವಿನ ಕಥೆ

ವಸಿಷ್ಠರು ಮುಂದುವರೆಸುತ್ತಿದ್ದಾರೆ: ರಾಮ, ನೀನು ನಿಜಕ್ಕೂ ಧೀರ. ಮಗೂ, ಮುನಿಯೊಬ್ಬನ ಮನಸ್ಸು ಬ್ರಹ್ಮವಸ್ತುವಿಗಿಂತ ಬೇರೆಯಾಗಿರಲಾರದು. ಅವಿದ್ಯೆ ಮತ್ತು ದೋಷಗಳಿಗೆ ಅಜ್ಞಾನಿಯ ಮನಸ್ಸೇ ಕಾರಣ. ಬ್ರಹ್ಮನಲ್ಲಿ ಅನೇಕ ಶಕ್ತಿಗಳಿವೆ, ಉದಾಹರಣೆಗೆ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಭೂಮಾಶಕ್ತಿ, ಅಕೃತಾಶಕ್ತಿ ಮುಂತಾದವು. ಪರಬ್ರಹ್ಮವು ಪರಿಪೂರ್ಣವಾದುದು, ಅವಿಕಾರಿಯಾದುದು. ಗಾಳಿಯಲ್ಲಿ ನಾವು ಕಾಣುವುದು ಆತನ ಚಲನ ಶಕ್ತಿ. ಕಲ್ಲಿನಲ್ಲಿ ಕಾಣುವುದು ಅವನ ಪೆಡುಸಿನ ಶಕ್ತಿ. ಬೆಂಕಿಯಲ್ಲಿ ಶಾಖಶಕ್ತಿ, ಆಕಾಶದಲ್ಲಿರುವುದು ಅವನ ಅವಕಾಶ ಶಕ್ತಿ. ನೀರಿನಲ್ಲಿರುವುದು ಅವನ ದ್ರವಶಕ್ತಿ. ಪವಿತ್ರಾತ್ಮರ ಹೃದಯಗಳಲ್ಲಿ ಕಾಣುವುದು ಅವನ ಆನಂದವೇ. ಯೋಗಿಗಳಲ್ಲಿ ಕಾಣುವುದು ಅವನ ಬಲವೇ. ಈ ಸೃಷ್ಟಿಯಲ್ಲಿ ಕಾಣಸಿಗುವ ಎಲ್ಲ ರೀತಿಯ ಸೃಜನಾತ್ಮಶಕ್ತಿಯೂ ಅವನದೇ. ಒಂದು ಕಲ್ಪದ ಕಡೆಯಲ್ಲಿ ಉಂಟಾಗುವ ಮಹಾಪ್ರಳಯದಲ್ಲಿ ಅವನ ಸಂಹಾರಶಕ್ತಿಯೂ ವ್ಯಕ್ತವಾಗುತ್ತದೆ.

ರಾಮ, ಒಂದು ಬೀಜದಲ್ಲಿ ದೊಡ್ಡ ಮರವೇ ಅಡಗಿರುವಂತೆ, ಎಲ್ಲವೂ ಬ್ರಹ್ಮನಲ್ಲಿಯೇ ಅಡಕವಾಗಿದೆ. ಅಂಥ ಬ್ರಹ್ಮವು ಏಕಮೇವ ಅದ್ವಿತೀಯವಾದುದು. ತನ್ನ ಮಾಯಾಶಕ್ತಿಯಿಂದ ಅದು ಬಹುರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಚಿಂತಿಸುವ ಕ್ರಿಯೆಯಲ್ಲಿ ಬ್ರಹ್ಮವು ತಾನಾಗಿಯೇ ಮನಸ್ಸಾಗಿ ಪರಿಣಮಿಸುತ್ತದೆ. ಅವಿದ್ಯೆಯೆಂಬ ಉಪಾಧಿಯ ಮೂಲಕ ಜೀವಾತ್ಮನಾಗಿ, ಮಾಯೆಯೆಂಬ ಉಪಾಧಿಯ ಮೂಲಕ ಈಶ್ವರನಾಗಿ, ವಿಕ್ಷೇಪಶಕ್ತಿಯ (ಮಾಯೆಯದೇ ಒಂದು ಬಗೆ) ಮೂಲಕ ವಿಶ್ವವಾಗಿ ಕಾಣಿಸಿಕೊಳ್ಳುವುದು ಆ ಪರಬ್ರಹ್ಮವೇ.

ರಾಮ, ಬಂಧನ ಮತ್ತು ಮುಕ್ತಿ – ಇವೆರಡೂ ಅಜ್ಞಾನಿಯ ಕಲ್ಪನೆಗಳಲ್ಲದೆ ಬೇರೆಯಲ್ಲ. ಆತ್ಮನಿಗೆ ಬಂಧನವಿದೆ ಎಂದು ಹೇಳುವುದು ತಪ್ಪು. ಏಕೆಂದರೆ ಆತ್ಮವು ನಿತ್ಯಮುಕ್ತವಾದುದು. ಹಾಗೆಯೇ ಆತ್ಮನಿಗೆ ಮುಕ್ತಿ ದೊರಕುವುದು ಎಂದು ಹೇಳುವುದೂ ಸರಿಯಲ್ಲ. ಏಕೆಂದರೆ ಆತ್ಮನು ಎಂದಿಗೂ ಮುಕ್ತನೇ. ಆದರೂ ಲೋಕದ ಜನರು ಅಜ್ಞಾನದಲ್ಲಿ ಮುಳುಗಿರುತ್ತಾರೆ. ಹೀಗಾಗಿ, ಒಬ್ಬಳು ತಾಯಿ ತನ್ನ ಮಗನಿಗೆ ಹೇಳಿದ ಅಡುಗೂಲಜ್ಜಿ ಕಥೆಯ ಹಾಗೆ ಇವೆಲ್ಲವೂ ನಿಜವೆಂದೇ ನಂಬಿಬಿಡುತ್ತಾರೆ.

ರಾಮ ಕೇಳಿದ: 'ಗುರುದೇವಾ, ದಯವಿಟ್ಟು ಆ ಕಥೆಯನ್ನು ಹೇಳಿ. ಕೇಳಬೇಕೆಂದು ಬಹಳ ಆಸಕ್ತಿಯುಂಟಾಗಿದೆ.' ವಸಿಷ್ಠರು ಕಥೆಯನ್ನು ಹೇಳಲಾರಂಭಿಸಿದರು:

ಒಂದು ಮನೆ. ಅಮ್ಮ, ಮಗು ಇಬ್ಬರೇ ಇದ್ದರು. ಮಗುವಿಗೆ ಕಥೆ ಕೇಳಬೇಕೆಂಬ ಹುಚ್ಚು, ತಾಯಿಯನ್ನು ಕಾಡಲಾರಂಭಿಸಿದ. ಕೊನೆಗೆ ತಾಯಿ ಕಥೆ ಹೇಳಲಾರಂಭಿಸಿದಳು:

ಒಂದಾನೊಂದು ಕಾಲದಲ್ಲಿ, ಶೂನ್ಯವೆಂಬ ನಗರದಲ್ಲಿ ಮೂರು ರಾಜಕುಮಾರರು ವಾಸಿಸುತ್ತಿದ್ದರು. ಅವರು ಮೂವರೂ ಧಾರ್ಮಿಕರು, ಗುಣಶೀಲರು, ಔದಾರ್ಯವಂತರು. ಅವರು ಮೂವರಲ್ಲಿ ಇಬ್ಬರು ಹುಟ್ಟೇ ಇರಲಿಲ್ಲ; ಮೂರನೆಯವನೋ ತನ್ನ ತಾಯಿಯ ಗರ್ಭವನ್ನು ಪ್ರವೇಶಿಸಿಯೇ ಇರಲಿಲ್ಲ. ಅವರು ಮೂವರೂ ಒಂದು ಯಾತ್ರೆ ಕೈಗೊಂಡರು. ಮಾರ್ಗಮಧ್ಯದಲ್ಲಿ ಆಕಾಶವೆಂಬ ಉದ್ಯಾನವನದಲ್ಲಿ ವಿಶ್ರಾಂತಿ ಪಡೆದರು. ಅಲ್ಲಿ ವಿವಿಧ ಬಗೆಯ ಹಣ್ಣುಗಳನ್ನು ತಿಂದರು. ಮೇಲುದಿಕ್ಕಿನೆಡೆಗೆ ತಮ್ಮ ಪ್ರಯಾಣವನ್ನು ಬೆಳೆಸಿದರು. ಬಹಳ ದೂರ ಹೋದ ಮೇಲೆ, ಮಧ್ಯಾಹ್ನದ ಸಮಯದ ವೇಳೆಗೆ, ಮೂರು ನದಿಗಳು ಕೂಡುವ ಸಂಗಮಸ್ಥಾನವೊಂದನ್ನು ಕಂಡರು. ಆ ನದಿಗಳು ವೇಗವಾಗಿ ಹರಿಯುತ್ತಿದ್ದವು; ಉಬ್ಬರದ ಅಲೆಗಳು ಅವುಗಳಲ್ಲಿ ಏಳುತ್ತಿದ್ದವು. ಆ ಮೂರು ನದಿಗಳಲ್ಲಿ ಎರಡರಲ್ಲಿ ನೀರೇ ಇರಲಿಲ್ಲ; ಮೂರನೆಯದರಲ್ಲಿ ಇದ್ದದ್ದು ಬರಿಯ ಮರಳು. ಅವ

ರೆಲ್ಲರೂ ಕಡೆಯ ನದಿಯಲ್ಲಿ ಸ್ನಾನ ಮಾಡಿ, ಬಹಳಷ್ಟು ಕಾಲ ಆಟವಾಡಿ, ಸಿಹಿಯಾಗಿದ್ದ ನೀರನ್ನು ಕುಡಿದು ಉತ್ಸಾಹಗೊಂಡರು.

ಆ ಮೂವರೂ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಸೂರ್ಯಾಸ್ತದ ಹೊತ್ತಿಗೆ ಒಂದು ನಗರವನ್ನು ತಲುಪಿದರು. ಆ ನಗರಕ್ಕೆ ಅಸ್ತಿತ್ವವೇ ಇರಲಿಲ್ಲ. ಅಲ್ಲಿ ಮೂರು ಮನೆಗಳನ್ನು ಕಟ್ಟಿದರು. ಒಂದು ಮನೆಗೆ ಅಡಿಪಾಯವೇ ಇರಲಿಲ್ಲ. ಇನ್ನೊಂದಕ್ಕೆ ಗೋಡೆಗಳೇ ಇರಲಿಲ್ಲ. ಮೂರನೆಯದಕ್ಕೆ ಗೋಡೆಯಾಗಲಿ, ಮಾಡಾಗಲಿ ಇರಲಿಲ್ಲ. ಕಣ್ಣಿಗೇ ಕಾಣದ ನಗರದಲ್ಲಿ ಕಟ್ಟಿದ ಆ ಮೂರು ಸುಂದರವಾದ ಮನೆಗಳಲ್ಲಿ ಆ ಮೂವರು ರಾಜಕುಮಾರರೂ ಸುಖವಾಗಿ ಕಾಲಕಳೆಯುತ್ತಿದ್ದರು.

ಒಮ್ಮೆ ತಮ್ಮ ತಮ್ಮ ಮನೆಗಳಲ್ಲಿ ಅವರು ಮೂರು ಮಡಕೆಗಳನ್ನು ಕಂಡರು. ಮೊದಲ ಎರಡು ಮಡಕೆಗಳು ಎತ್ತಿದಾಗ ಚೂರುಚೂರಾಗಿ ಹೋದವು. ಮೂರನೆಯದು ಮುಟ್ಟಿದೊಡನೆಯೇ ಪುಡಿಪುಡಿಯಾಗಿ ಹೋಯಿತು. ಆ ಮಡಕೆಗಳಲ್ಲಿ ಪ್ರತಿಯೊಂದರಲ್ಲಿಯೂ ಅವರು, ಎಂಟು ಸೇರುಗಳಿಂದ ಹನ್ನೆರಡು ಸೇರುಗಳನ್ನು ಕಳೆದರೆ ಎಷ್ಟಾಗುವುದೋ ಅಷ್ಟು ಪ್ರಮಾಣದ ಅಕ್ಕಿಯನ್ನು ಹಾಕಿದರು. ನೀರು ಬೆಂಕಿಗಳಿಲ್ಲದೆಯೇ ಅದ್ಭುತವಾಗಿ ಅಡುಗೆ ಮಾಡಿದರು. ತಾವು ತಯಾರಿಸಿದ ಆಹಾರವನ್ನು ಬಾಯಿಯಿಲ್ಲದ, ನಾಲಗೆಯಿಲ್ಲದ ಮತ್ತು ಹಲ್ಲುಗಳೂ ಇಲ್ಲದ ಅಸಂಖ್ಯಾತ ಜನರಿಗೆ ಹಂಚಿದರು. ಉಳಿದ ಆಹಾರವನ್ನು ಹರ್ಷದಿಂದ ಸೇವಿಸಿದರು. ಸಾಯಂಕಾಲದ ಹೊತ್ತಿಗೆ ಅವರು ಕಾಡಿಗೆ ಬೇಟೆಗಾಗಿ ಹೋದರು. ಅಲ್ಲಿ ತಮ್ಮ ಸಮಯವನ್ನು ಆನಂದವಾಗಿ ಕಳೆದರು.

ಕಥೆ ಮುಗಿಯಿತು. ಕಥೆಯನ್ನು ಕೇಳಿದ ಮಗುವಿಗೆ ತುಂಬ ಸಂತೋಷವಾಯಿತು. ತಾಯಿ ಹೇಳಿದ್ದರಲ್ಲಿ ಪ್ರತಿಯೊಂದನ್ನೂ ಮಗು ನಂಬಿಬಿಟ್ಟಿತು.

ವಸಿಷ್ಠರು ಈ ವೃತ್ತಾಂತದ ಸಾರವನ್ನು ಹೀಗೆ ಹೇಳುತ್ತಾರೆ: ರಾಮ, ವಿವೇಕವಿಲ್ಲದ ಮತ್ತು ಆತ್ಮವಿಚಾರವನ್ನು ಮಾಡದ ಅಜ್ಞಾನಿಗಳು ಹೀಗೆಯೇ ಈ ಜಗತ್ತು ಸತ್ಯವೆಂದು ನಂಬಿಬಿಡುತ್ತಾರೆ. ಈ ಜಗತ್ತು ಎನ್ನುವುದು ಹೇಗಿದೆ ಗೊತ್ತೆ? ಇದು ಗಾಳಿಯಲ್ಲಿ ಕಟ್ಟಿದ ಕೋಟೆಯಂತೆ ಇದೆ. ತಾಯಿ ಹೇಳಿದ ಕಥೆಯಂತೆ ಈ ಜಗತ್ತೂ ಒಂದು ಕಾಲ್ಪನಿಕ ಸಂಗತಿ ಮಾತ್ರವೇ. ಅಸ್ತಿತ್ವವೇ ಇರದ ಸಂಗತಿಗಳಿಗೆ ಆ ತಾಯಿ ಹೆಸರು ಮತ್ತು ಆಕಾರಗಳನ್ನು ಕಲ್ಪಿಸಿ ತನ್ನ ಮಗನಿಗೆ ಹೇಳಿದಳು. ಇದೇ ರೀತಿ ನಮ್ಮ ಮನಸ್ಸು ಮಿಥ್ಯಾಜಗತ್ತಿನ ಕಣ್ಕಟ್ಟಿನ ವಸ್ತುಗಳಿಗೆ ಹೆಸರು ಮತ್ತು ರೂಪಗಳನ್ನು ಕಲ್ಪಿಸಿಕೊಳ್ಳುತ್ತದೆ.

ರಾಮ, ಈ ಜಗತ್ತು ಮನಸ್ಸಿನ ಸಂಕಲ್ಪ ಮಾತ್ರವೇ. ನಿನ್ನ ಮನಸ್ಸಿನ ಕಲ್ಪನೆಯನ್ನು ಬಿಟ್ಟು ಬೇರೆ ಯಾವುದಕ್ಕೂ 'ಇರುವಿಕೆ' ಎನ್ನುವುದು ಇಲ್ಲವೇ ಇಲ್ಲ. ಈ ಮಾನಸಿಕ ಕಲ್ಪನೆಯೇ ಸ್ವರ್ಗ, ಭೂಮಿ, ಆಕಾಶ, ವಾಯು, ನದಿಗಳು, ಪರ್ವತಗಳು, ಮರಗಳು ಮುಂತಾದ ಅದ್ಭುತವಾದ ವೈವಿಧ್ಯಮಯ ರೂಪಗಳನ್ನು ಪಡೆದುಕೊಳ್ಳುತ್ತದೆ.

ರಾಮ, ಸಂಕಲ್ಪವೆಂದರೆ ಮನಸ್ಸಿನ ವಿಕಾಸ. ಸಂಕಲ್ಪವೇ ತನ್ನ ಶಕ್ತಿಯಿಂದ ವೈವಿಧ್ಯತೆಯನ್ನು ಸೃಜಿಸುತ್ತದೆ. ಇಡೀ ಜಗತ್ತೇ ಸಂಕಲ್ಪಾತ್ಮಕವಾದುದು. ಸಂಕಲ್ಪವೇ ಮನಸ್ಸಿನ ಅತ್ಯಂತ ಕ್ರಿಯಾತ್ಮಕ ಶಕ್ತಿಯಾಗಿದೆ. ಆದ್ದರಿಂದ, ಓ ರಾಮ, ನಿನ್ನ ಮನಸ್ಸಿನಿಂದ ಎಲ್ಲ ರೀತಿಯ ಸಂಕಲ್ಪಗಳನ್ನೂ ಹೊರಕ್ಕೆ ದೂಡು. ಯಾವಾಗ ಮನಸ್ಸಿನಲ್ಲಿ ಯಾವ ರೀತಿಯ ಸಂಕಲ್ಪಗಳೂ ಇರುವುದಿಲ್ಲವೋ ಅಂಥ ನಿರ್ವಿಕಲ್ಪ ಸ್ಥಿತಿಯನ್ನು ಪಡೆ ಯುವುದಕ್ಕೆ ಸರ್ವಪ್ರಯತ್ನವನ್ನೂ ಮಾಡು.

ರಾಮ, ಈ ಜಗತ್ತು ಸತ್ಯ ಎನ್ನುವ ನಿನ್ನ ತಪ್ಪು ಭಾವನೆಯನ್ನು ಕೊಡಹಿಹಾಕು. ಎಲ್ಲ ರೀತಿಯ ಭ್ರಮೆಯನ್ನೂ ಅಸತ್ಯವಾದುದನ್ನೂ ಬಿಟ್ಟುಬಿಡು. ಅಮೃತವಾದ ಬ್ರಹ್ಮ ಅಂದರೆ ಸರ್ವವ್ಯಾಪಿಯಾದ ಆತ್ಮವೊಂದೇ ಎಲ್ಲದರ ಆಧಾರ ಮತ್ತು ಅವಲಂಬನವಾಗಿದೆ. ಹೀಗಾಗಿ ಇದೊಂದೇ ಸತ್ಯ. ಈ ಸತ್ಯವಸ್ತುವಿನ ವಿಚಾರದಲ್ಲಿ ನಿನ್ನನ್ನು ನೀನು ತೊಡಗಿಸಿಕೊ. ಹೇಗೆ ವಿಚಾರ ಮಾಡಬೇಕು, ಗೊತ್ತೆ? ನೀನು ಎಂದೂ ಬಂಧಿತನಾಗಿಲ್ಲ, ನೀನು ಎಂದೆಂದಿಗೂ ಮುಕ್ತನು. ಹೀಗಿರುವಾಗ ಜೀವ ಎನ್ನುವುದು ಎಲ್ಲಿ ತಾನೇ ಇದೆ? ಮನಸ್ಸು ಎನ್ನುವುದು ಎಲ್ಲಿ ತಾನೇ ಇದೆ? ಬಂಧನ ಎನ್ನುವುದು ಎಲ್ಲಿ ತಾನೇ ಇದೆ? ಬಂಧನವಿದ್ದರೆ ತಾನೇ ಸ್ವಾತಂತ್ರ್ಯ ಇರುವುದು? ಸಂಸಾರವಿದ್ದರೆ ತಾನೇ ಮುಕ್ತಿ ಎನ್ನುವುದು ಇರುವುದು? ಈ ವಿಧಾನದಲ್ಲಿ ವಿಚಾರ ಮಾಡಬೇಕು. ತಿಳಿದುಕೋ, ಬಂಧನ ಮತ್ತು ಮುಕ್ತಿ – ಇವೆರಡೂ ಮನಸ್ಸಿನ ಕಲ್ಪನೆಗಳು ಮಾತ್ರ.


ಈ ನಶ್ವರ ದೇಹಕ್ಕೂ, ನಿತ್ಯವಾದ ಆತ್ಮನಿಗೂ ಇರುವ ಸಂಬಂಧ ಏನು ಗೊತ್ತೆ? ಒಂದು ಮಡಕೆ ಮತ್ತು ಅದರೊಳಗಿನ ಆಕಾಶದ ಸಂಬಂಧ. ಈ ನಶ್ವರ ಪ್ರಪಂಚವು ನಮಗೆ ಸತ್ಯವೆಂದು ಕಾಣುತ್ತದೆ. ಈ ವಿಶ್ವದ ಕಲ್ಪನೆ ಇರುವವರೆಗೂ, ಅಜ್ಞಾನದ ನಿದ್ರೆಯಲ್ಲಿ ಬಿದ್ದುಕೊಂಡಿರುತ್ತೇವೆ. ಈ ಪ್ರಪಂಚದ ಅನುಭವವೆನ್ನುವುದೇ ಒಂದು ಸುದೀರ್ಘ ಸ್ವಪ್ನ.

ರಾಮ, ಈ ಜಗತ್ತೆಂಬುದು ಒಂದು ಘನಘೋರ ಅರಣ್ಯವಿದ್ದಂತೆ. ಅದರಲ್ಲಿ ವ್ಯಾಧಿ ಮತ್ತು ಮೃತ್ಯುಗಳೆಂಬ ಸರ್ಪಗಳು ತಾಂಡವವಾಡುತ್ತಿವೆ. ಮನಸ್ಸೇ ಈ ಕಾಡಿನ ಒಡೆಯ. ಅದು ನಮ್ಮನ್ನು ಎಣೆಯಿಲ್ಲದ ಕಂದಕಗಳಿಗೂ ಕಷ್ಟಗಳಿಗೂ ತಳ್ಳುತ್ತದೆ. ಜಗತ್ತೆಂಬ ಮಾನಸಿಕ ಭಾವನೆಯೇ ಈ ಜಗತ್ತಿನ ಅಸ್ತಿತ್ವಕ್ಕೆ ಕಾರಣ.


ಓ ರಾಮ, ವಿಚಾರ, ತರ್ಕ ಮತ್ತು ವಿವೇಕಗಳ ಮೂಲಕ ಈ ಜಗತ್ತೆಂಬ ಭಾವನೆಯನ್ನು ನಿನ್ನ ಮನಸ್ಸಿನಿಂದ ಸಂಪೂರ್ಣವಾಗಿ ಅಳಿಸಿಬಿಡು. ಮನಸ್ಸನ್ನು ಸ್ವಲ್ಪವೂ ಸಡಿಲಬಿಡಬೇಡ. ಅದನ್ನು ನಿಷ್ಕಾರುಣ್ಯವಾಗಿ ಬಡಿದುಹಾಕು. ಅದನ್ನು ನಿಯಂತ್ರಣದಲ್ಲಿ ಇಟ್ಟುಕೋ. ಅದನ್ನು ಹೇಳಹೆಸರಿಲ್ಲದಂತೆ ನಾಶಮಾಡು. ಆಗ ಒಡನೆ ನೀನು ಸತ್ಯವನ್ನು ಕಾಣುವೆ ಮತ್ತು ಆತ್ಯಂತಿಕ ಮೋಕ್ಷವನ್ನು ಹೊಂದುವೆ. ಆಗ ಮಾತ್ರ ಎಲ್ಲ ರೀತಿಯ ನೋವು, ದುಃಖ ಮತ್ತು ಮೋಹಗಳಿಂದ ಪಾರಾಗುವೆ. ✷

ಗುರುದಕ್ಷಿಣೆ


ಕಥೆ: ಮೈಥಿಲಿ ಸೀತಾರಾಮನ್ **ಚಿತ್ರ : ಕೋವಿ**






5
ಗುರು ಕೋಪದಿಂದ…
ಹಾಗಿದ್ದರೆ ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳನ್ನು ಗುರುದಕ್ಷಿಣೆಯನ್ನಾಗಿ ಕೊಡು. ಆಗಲೇ ನಾನು ಅದನ್ನು ಸ್ವೀಕರಿಸುತ್ತೇನೆ.
6
ಅಷ್ಟೊಂದು ಚಿನ್ನದ ನಾಣ್ಯಗಳನ್ನು ನಾನು ಹೇಗೆ ಸಂಗ್ರಹಿಸಲಿ? ಇರಲಿ, ಗುರುವಿನ ಬಯಕೆಯನ್ನು ಪೂರೈಸುವುದಕ್ಕಾಗಿ ನಾನು ಏನಾದರೂ ಪ್ರಯತ್ನ ಮಾಡುತ್ತೇನೆ.
7
ಚಿಂತೆಯಿಂದ ಕದಡಿಹೋದ ಮನಸ್ಸಿನಿಂದ ಕೌತ್ಸನು ರಘು ಮಹಾರಾಜನ ಬಳಿಗೆ ಭಿಕ್ಷೆಗೆ ಹೋದ.
ರಘು ಆಗತಾನೆ ವಿಶ್ವಜಿತ್ ಎಂಬ ಯಾಗವನ್ನು ಮಾಡಿ ಮುಗಿಸಿದ್ದ. ಅವನು ತನ್ನೆಲ್ಲ ಸಂಪತ್ತನ್ನೂ ಆ ಯಾಗದ ಸಲುವಾಗಿ ದಾನ ನೀಡಿದ್ದರಿಂದ ದೇಶದ ಬೊಕ್ಕಸ ಬರಿದಾಗಿತ್ತು.
8
ಸ್ವಾಮಿ! ನಿಮ್ಮ ಆಗಮನದಿಂದ ಎಲ್ಲವೂ ಸಮೃದ್ಧಿ ಹೊಂದಲಿ. ನಿಮ್ಮ ಆಶೀರ್ವಾದದಿಂದ ನಮ್ಮ ದೇಶದ ಪ್ರಜೆಗಳೆಲ್ಲ ಚೆನ್ನಾಗಿದ್ದಾರೆ. ಹೇಳಿ ಸ್ವಾಮಿ, ನಾನೇನು ಸೇವೆ ಮಾಡಲಿ?
ಓ ರಾಜ, ನಿನಗೆ ಹಾಗೂ ನಿನ್ನ ರಾಜ್ಯಕ್ಕೆ ಒಳಿತಾಗಲಿ!
ನಾನು ತಡವಾಗಿ ಬಂದೆ. ನಿನ್ನಿಂದ ತುಸು ಭಿಕ್ಷೆ ಸ್ವೀಕರಿಸೋಣ ಎಂದು ನಾನು ಭಾವಿಸಿದ್ದೆ. ಆದರೆ ಅದು ಈಗ ಕಷ್ಟವೆಂದು ತೋರುತ್ತದೆ. ಆದ್ದರಿಂದ ನಾನಿನ್ನು ಬರುತ್ತೇನೆ.
ಇಲ್ಲ, ಋಷಿಗಳೇ! ನೀವು ಬರಿಗೈಯಲ್ಲಿ ಹೋಗಬಾರದು. ನಿಮಗೆ ಎಷ್ಟು ಸಂಪತ್ತು ಬೇಕೋ ತಿಳಿಸಿ.


9
ಕೌತ್ಸನು ತನ್ನ ಗುರುಕುಲದಲ್ಲಿ ನಡೆದ ಘಟನೆಯನ್ನೆಲ್ಲ ಮಹಾರಾಜನಿಗೆ ವಿವರಿಸಿದ. ತನಗೆ ಗುರುದಕ್ಷಿಣೆಯಾಗಿ ನೀಡಲು ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳ ಅಗತ್ಯವಿರುವುದಾಗಿಯೂ ಅವನಿಗೆ ತಿಳಿಸಿದ. ರಘು ಮಹಾರಾಜನಿಗೆ ಕೌತ್ಸನ ಗುರುಭಕ್ತಿಯ ಅರಿವಾಯಿತು.
10
ಓ ಋಷಿಗಳೇ! ಅಷ್ಟೊಂದು ಮೊತ್ತದ ಸಂಪತ್ತನ್ನು ಪಡೆಯಲು ಕುಬೇರನ ಮೇಲೆ ಆಕ್ರಮಣ ಮಾಡಬೇಕಲ್ಲದೆ ಬೇರೆ ಉಪಾಯವಿಲ್ಲ.
ಬೇಡ ಮಹಾರಾಜ, ನೀನೇನೂ ತೊಂದರೆ ತೆಗೆದುಕೊಳ್ಳಬೇಡ. ನನಗಾಗಿ ನೀನು ಯುದ್ಧ ಮಾಡಬೇಕಿಲ್ಲ.
ಇಲ್ಲ; ಋಷಿಗಳ ಅಗತ್ಯವನ್ನು ಪೂರೈಸುವುದು ರಾಜನ ಕರ್ತವ್ಯ. ಮಂತ್ರಿ, ಯುದ್ಧಕ್ಕಾಗಿ ಸೈನ್ಯವನ್ನು ಸಿದ್ಧಗೊಳಿಸು!
11
ಯಕ್ಷಲೋಕದಲ್ಲಿದ್ದ ಕುಬೇರನಿಗೆ ರಘು ತನ್ನ ಮೇಲೆ ಯುದ್ಧಕ್ಕಾಗಿ ಸನ್ನಾಹ ಮಾಡುತ್ತಿರುವ ವಿಚಾರ ತಿಳಿಯಿತು.
12
ಓ ಮಂತ್ರಿ! ರಘುವಿನೊಂದಿಗೆ ಯುದ್ಧ ಮಾಡಿದರೆ ಅದು ನಮ್ಮ ಸರ್ವನಾಶವಾಗಿ ಪರಿಣಮಿಸುವುದು.
ನಿಜ ಪ್ರಭೂ. ಈ ಯುದ್ಧವನ್ನು ತಡೆಯಲು ನಾವೇನು ಮಾಡೋಣ?
ರಘುವಿನ ಬೊಕ್ಕಸದಲ್ಲಿ ಚಿನ್ನದ ಮಳೆಗರೆಯುವಂತೆ ಆಜ್ಞಾಪಿಸುತ್ತೇನೆ!
13
ಕುಬೇರನ ಆಣತಿಯಂತೆ ಅಂದು ರಾತ್ರಿ ರಘು ಮಹಾರಾಜನ ಬೊಕ್ಕಸದಲ್ಲಿ ಚಿನ್ನದ ಮಳೆ ಸುರಿಯಿತು. ಚಿನ್ನದ ನಾಣ್ಯಗಳು ಬೀಳುವ ಸದ್ದಿಗೆ ಪ್ರಜೆಗಳೆಲ್ಲ ನಿದ್ದೆಯಿಂದ ಎಚ್ಚೆತ್ತು ಓಡಿ ಬಂದರು. ಕುಬೇರ ಚಿನ್ನದ ಮಳೆಗರೆದ ಸುದ್ದಿ ಕೇಳಿದ ಜನ ತುಂಬಾ ಆನಂದಪಟ್ಟರು. ಆಗ ರಾಜ ಕುಬೇರನ ಮೇಲೆ ಯುದ್ಧ ಸಾರುವ ಆಲೋಚನೆಯನ್ನೇ ಬಿಟ್ಟ.
14
ಆಹಾ! ಇದೆಂಥ ಆಶ್ಚರ್ಯ! ಏನು ಅದ್ಭುತ!









ಆಧಾರ : ಕಾಳಿದಾಸನ 'ರಘುವಂಶ' ಕಾವ್ಯ



ಪಾಟ್ನಾ



ಕಾಠ್ಮಂಡು

ನೇಪಾಳ ಹಾಗೂ ಇತರೆಡೆ ಭೂಕಂಪ ಪರಿಹಾರ ಕಾರ್ಯ

ನೇಪಾಳ ಹಾಗೂ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಏಪ್ರಿಲ್ 25 ರಂದು ಸಂಭವಿಸಿದ ಭೂಕಂಪದಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ರಾಮಕೃಷ್ಣ ಮಿಶನ್ ಪ್ರಾಥಮಿಕ ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ. ಅದರ ವಿವರಗಳು ಹೀಗಿವೆ:

1. ದಾರ್ಜಿಲಿಂಗ್: ಇಲ್ಲಿನ ಆಶ್ರಮವು ನೇಪಾಳದ ಸಿಂಧುಲಿ ಜಿಲ್ಲೆಯ ಜನಕಪುರ ಕಣಿವೆಯಲ್ಲಿ ಭೂಕಂಪದಿಂದ ಪೀಡಿತವಾದ 5003 ಕುಟುಂಬಗಳಿಗೆ 50,000 ಕೆ.ಜಿ. ಅಕ್ಕಿ, 5000 ಕೆ.ಜಿ. ಸೋಯಾ ಬೀನ್, 15,000 ಕೆ.ಜಿ. ಬೇಳೆ, 5000 ಪ್ಯಾಕೆಟ್ ಅರಶಿನ ಪುಡಿ, 5000 ಪ್ಯಾಕೆಟ್ ಮಸಾಲೆ ಪದಾರ್ಥಗಳು, 5000 ಕೆ.ಜಿ. ಉಪ್ಪು, 2500 ಕೆ.ಜಿ. ಬಿಸ್ಕತ್ತು, 2500 ಕೆ.ಜಿ. ಭುಜಿಯಾ, 25,000 ಕೆ.ಜಿ. ಅವಲಕ್ಕಿ, 1050 ಕೆ.ಜಿ. ಹಾಲಿನ ಪುಡಿ, 2500 ಕೆ.ಜಿ. ಸಕ್ಕರೆ, 1250 ಕೆ.ಜಿ.ಚಹಾಪುಡಿ, 50,000 ಬೆಂಕಿಪೊಟ್ಟಣ, 10,000 ಬಾರ್‌ಸೋಪು, 20,000 ಸೆಟ್ ಬ್ರಷ್-ಪೇಸ್ಟ್, 60,000 ಮೇಣದ ಬತ್ತಿ, 5000 ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಹಾಗೂ 5000 ಟರ್ಪಾಲಿನ್‌ಗಳನ್ನು ಹಂಚಿದೆ.

2. ಕಾಠ್ಮಂಡು: ಇಲ್ಲಿನ ಮಿಷನ್ ಕೇಂದ್ರವು ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಮೂಹಿಕ ಅಡುಗೆ ಮನೆಯನ್ನು ನಿರ್ಮಿಸಿ ಕೊಟ್ಟು, 750 ಮಂದಿಗೆ ಅಡುಗೆ ಮಾಡಿದ ಆಹಾರವನ್ನು ವಿತರಿಸಿತು. ಏಪ್ರಿಲ್ 28 ರಂದು ಕಠ್ಮಂಡುವಿನ ಥಾನಕೋಟ್‌ನಲ್ಲಿರುವ ಅರವಿಂದ ಅನಾಥಾಶ್ರಮದ 130 ಮಕ್ಕಳಿಗೆ 100 ಕೆ.ಜಿ. ಅಕ್ಕಿ, 20 ಕೆ.ಜಿ. ಬೇಳೆ, 5 ಕೆ.ಜಿ.ಉಪ್ಪು, 5 ಲೀ.ಎಣ್ಣೆ, 3 ಕೆ.ಜಿ. ಸಕ್ಕರೆ, 3 ಪ್ಯಾಕೆಟ್ ಚಾಕಲೇಟ್ ಹಾಗೂ 30 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. ಏಪ್ರಿಲ್ 29 ರಂದು ಕೇಂದ್ರವು ಇಲ್ಲಿಂದ 20 ಕಿ.ಮೀ. ದೂರದಲ್ಲಿರುವ ಸಕೋ ಎಂಬಲ್ಲಿ 700 ಕೆ.ಜಿ. ಅವಲಕ್ಕಿ, 700 ಕುಡಿಯುವ ನೀರಿನ ಬಾಟಲಿ, 500 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. 40 ಕಿ.ಮೀ.ದೂರದ ಶಂಕರಪುರ ನಗರ ಪಾಲಿಕೆಯಲ್ಲಿ 800 ಕೆ.ಜಿ. ಅವಲಕ್ಕಿ, 500 ನೀರಿನ ಬಾಟಲಿ ಹಾಗೂ 500 ಪ್ಯಾಕೆಟ್ ಬಿಸ್ಕತ್ತನ್ನು ವಿತರಿಸಿತು. ಏಪ್ರಿಲ್ 30 ರಂದು ಭಕ್ತಾಪುರ ಪ್ರದೇಶದ ಲಿವಾಲಿ, ಕಮಲ್ ಬಿನಾಯಕ್ ಹಾಗೂ ಘಾಟೆ ಎಂಬಲ್ಲಿ 700 ಪ್ಯಾಕೆಟ್ ಆಹಾರ (ಅವಲಕ್ಕಿ ಹಾಗೂ ಸಿಹಿತಿಂಡಿ), 500ಬಾಟಲಿ ನೀರು, 500 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. ಇದಲ್ಲದೆ 200 ಪ್ಯಾಕೆಟ್ ಅಕ್ಕಿ (ಪ್ರತಿ ಪ್ಯಾಕೆಟ್‌ಗೆ 2 ಕೆ.ಜಿ.ಯಂತೆ), 100 ಪ್ಯಾಕೆಟ್ ಬೇಳೆ (ಪ್ಯಾಕೆಟ್‌ಗೆ 100 ಗ್ರಾಂ) ಇವನ್ನು ಜಲಾತೋಲ್‌ನಲ್ಲಿರುವ ಮಹೇಶ್ವರಿ ಕ್ರೀಡಾಂಗಣದಲ್ಲಿನ ಪರಿಹಾರ ಕೇಂದ್ರದಲ್ಲಿ ವಿತರಿಸಲಾಯಿತು.

ಅತಿಹೆಚ್ಚು ಹಾನಿಗೊಳಗಾದ ಜಿಲ್ಲೆಗಳಲ್ಲಿ ಮಿಷನ್ ವಿಸ್ತೃತವಾದ ಪರಿಶೀಲನೆ ನಡೆಸಿದ ಬಳಿಕ ಭಕ್ತಾಪುರ್, ಧಧಿಂಗ್, ಗೋರ್ಖಾ, ಕಠ್ಮಂಡು, ಕವರೆ, ಲಲಿತ್‌ಪುರ್, ಮಕವಾವನ್‌ಪುರ್, ನುವಾಕೋಟ್, ರಾಮೇಚ್ಛಾಪ್, ಸಿಂಧುಪಲ್‌ಚೋಕ್ ಜಿಲ್ಲೆಗಳಲ್ಲಿನ 66 ಗ್ರಾಮಗಳಲ್ಲಿ 3865 ಕುಟುಂಬಗಳಿಗೆ ಏಪ್ರಿಲ್ 30ರಿಂದ ಮೇ 30ರ ವರೆಗೆ 7900 ಕೆ.ಜಿ. ಅಕ್ಕಿ, 780 ಕೆ.ಜಿ. ಬೇಳೆ, 1108 ಕೆ.ಜಿ. ಆಲೂಗಡ್ಡೆ, 100 ಕೆ.ಜಿ. ಕುಂಬಳಕಾಯಿ, 10 ಕೆ.ಜಿ. ಹಸಿಮೆಣಸಿನಕಾಯಿ, 10 ಕೆ.ಜಿ. ಅರಶಿನ ಪುಡಿ, 495 ಕೆ.ಜಿ. ಉಪ್ಪು, 595 ಲೀ. ಎಣ್ಣೆ, 4000 ಕೆ.ಜಿ. ಅವಲಕ್ಕಿ, 3170 ಪ್ಯಾಕೆಟ್ ಬಿಸ್ಕತ್ತು, 4000 ಕೆ.ಜಿ. ಹಾಲಿನಪುಡಿ, 79 ಕೆ.ಜಿ. ಮಕ್ಕಳ ಆಹಾರ, 497 ಕೆ.ಜಿ. ಸಕ್ಕರೆ, 100 ಕೆ.ಜಿ. ಬೆಲ್ಲ, 3 ಕೆ.ಜಿ. ಚಹಾಪುಡಿ, 2300 ನೀರಿನ ಬಾಟಲಿ, 590 ಓ.ಆರ್.ಎಸ್ .ಪ್ಯಾಕೆಟ್, 1700 ಪಾತ್ರೆ ಗಳ ಸೆಟ್(ಪ್ರತಿ ಸೆಟ್‌ನಲ್ಲಿ 1 ಪ್ಲೇಟು, 1 ಗ್ಲಾಸು, 1 ಕಪ್, 1 ಬೇಯಿಸುವ ಪಾತ್ರೆ , 2ಸೌಟು), 1000 ಬಕೆಟ್, 1000 ಮಗ್, 5000 ಕಂಬಳಿ, 1000 ಚಾಪೆ, 2000 ಸೊಳ್ಳೆಪರದೆ, 3200 ಟರ್ಪಾಲಿನ್, 3000 ಬಟ್ಟೆ ಬರೆ, 500 ಬಟ್ಟೆಸೋಪು, 800 ಸೆಟ್ ಬ್ರಷ್-ಪೇಸ್ಟ್, 800 ಟಾರ್ಚ್, 14 ಸೋಲಾರ್ ದೀಪ ಇತ್ಯಾದಿಗಳನ್ನು ಹಂಚಲಾಯಿತು.

3.ಲಕ್ನೋ: ಇಲ್ಲಿನ ಮಿಷನ್ ಕೇಂದ್ರವು ನೇಪಾಳದ ಗೋರ್ಖಾ ಮತ್ತು ದಂಗ್ ಜಿಲ್ಲೆಗಳಲ್ಲಿ ಹಾಗೂ ಭಾರತದ ಬಲರಾಮಪುರ ಜಿಲ್ಲೆಯಲ್ಲಿ ಮೇ 1 ರಿಂದು 24ರ ವರೆಗೆ 500 ಕೆ.ಜಿ. ಅವಲಕ್ಕಿ, 150 ಕೆ.ಜಿ. ಹಾಲಿನ ಪುಡಿ, 150 ಕೆ.ಜಿ. ಸಕ್ಕರೆ, 3000 ಕಂಬಳಿ, 1200 ಟರ್ಪಾಲಿನ್, 600 ಮೇಣದ ಬತ್ತಿ, 600 ಬೆಂಕಿಪೊಟ್ಟಣ ಇವನ್ನು ಹಂಚಿದೆ. ನೇಪಾಳದ ಗೋರ್ಖಾ ಜಿಲ್ಲೆಯ 15 ಗ್ರಾಮಗಳಲ್ಲಿ ಭೂಕಂಪದಿಂದ ಪೀಡಿತರಾದ 3417 ಮಂದಿ ರೋಗಿಗಳಿಗೆ ವೈದ್ಯಕೀಯ ನೆರವನ್ನೂ ಈ ಕೇಂದ್ರ ಒದಗಿಸಿದೆ.

4. ಪಾಟ್ನಾ : ಮುಝಾಫರ್‌ಪುರ್ ಆಶ್ರಮದೊಂದಿಗೆ ಈ ಆಶ್ರಮವು ಬಿಹಾರದ ರಕ್ಸಾಲ್‌ನಲ್ಲಿ ಒಂದು ಶಿಬಿರವನ್ನು ಆರಂಭಿಸಿ, ಗಡಿ ಪ್ರದೇಶಗಳಲ್ಲಿ ಆಶ್ರಯ ಪಡೆದ 1200 ಕುಟುಂಬಗಳಿಗೆ ಮೇ 1 ಹಾಗೂ 2 ರಂದು 1000 ಕೇಕ್, 1000 ಪ್ಯಾಕೆಟ್ ರಸ್ಕ್, 1000 ಪ್ಯಾಕೆಟ್ ಬಿಸ್ಕತ್ತು ಹಾಗೂ

100 ಪ್ಯಾಕೆಟ್ ಪ್ರೋಟೀನ್ ಪುಡಿ ಹಾಗೂ 1200 ನೀರಿನ ಬಾಟಲಿಗಳನ್ನು ವಿತರಿಸಿತು. ಇದರೊಂದಿಗೆ ದರ್ಭಂಗಾ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಮೋತಿಹಾರಿ ಸಾದರ್ ಆಸ್ಪತ್ರೆಗಳಿಗೆ ಸೇರಿಸಲಾದ ಜನರಿಗೆ ಮೇ 1 ರಂದು ಪ್ರೋಟಿನ್ ಪುಡಿ, ವಿಟಾಮಿನ್ ಟಾನಿಕ್, ಬಿಸ್ಕತ್ತು, ಕೇಕ್, ಹಣ್ಣು ಹಂಪಲು, ನೀರಿನ ಬಾಟಲಿ ಇತ್ಯಾದಿಗಳನ್ನು ಹಂಚಲಾಯಿತು. **ಪಾಟ್ನಾ** ಆಶ್ರಮವು ನೇಪಾಳದ ಕವರೆ ಜಿಲ್ಲೆಯಲ್ಲಿ ಪೀಡಿತರಾದ 4108 ಕುಟುಂಬ ಗಳಿಗೆ ಮೇ 8 ರಿಂದ 21ರ ವರೆಗೆ 6000 ಕೆ.ಜಿ. ಅಕ್ಕಿ, 1200ಕೆ.ಜಿ.ಬೇಳೆ, 200 ಕೆ.ಜಿ. ಎಣ್ಣೆ, 2704 ಪಾತ್ರೆಗಳ ಸೆಟ್, 2837 ಟರ್ಪಾಲಿನ್, 960 ಜಾಕೆಟ್, 4600 ಸೀರೆ, 6714 ವಿಭಿನ್ನ ಬಟ್ಟೆಬರೆ, 2564 ಚಾಪೆ, 4875 ಕಂಬಳಿ ಇವನ್ನು ವಿತರಿಸಿತು.



ಲಕ್ನೋ



ದಾರ್ಜಿಲಿಂಗ್

ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ 'ಸಾಧುನಿವಾಸ'ದ ಉದ್ಘಾಟನೆ





ಕೊಡಗಿನ ಪೊನ್ನಂಪೇಟೆಯಲ್ಲಿರುವ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ 'ಸಾಧು ನಿವಾಸ'ದ ಉದ್ಘಾಟನೆಯು ೨೦೧೫ರ ಜೂನ್ ೨ರಂದು ನೆರವೇರಿತು. ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೂ, ಟ್ರಸ್ಟಿಗಳೂ, ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಸಾಧುನಿವಾಸವನ್ನು ಉದ್ಘಾಟಿಸಿದರು. ಎರಡಂತಸ್ತಿನ ಈ ಕಟ್ಟಡದಲ್ಲಿ ಗಣಪತಿ ಹವನ, ಶ್ರೀಸೂಕ್ತ, ಶ್ರೀರಾಮಕೃಷ್ಣರ ವಿಶೇಷ ಪೂಜೆ ಮತ್ತು ಹೋಮ ಆರಂಭದಲ್ಲಿ ನಡೆಯಿತು.

ಅನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಗೌತಮಾನಂದಜಿ, ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ವೀರೇಶಾನಂದ ಸರಸ್ವತೀ ಮೊದಲಾದವರು ಆಶೀರ್ವಚನ ನೀಡಿ ಮಾತನಾಡಿದರು. ಭಕ್ತರ ಪರವಾಗಿ ಸುಂದರಿ ಮೇಡಂ, ಶ್ರೀ ಕೆ.ಪಿ.ಉತ್ತಪ್ಪ ಅವರು ಮಾತನಾಡಿದರು.

ಕಟ್ಟಡ ನಿರ್ಮಾಣ ಕಾರ್ಯದಲ್ಲಿ ವಿಶೇಷ ಶ್ರಮ ವಹಿಸಿದ, ಹಲವು ಬಗೆಯಲ್ಲಿ ಸಹಕಾರ ನೀಡಿದ ಗಣ್ಯರನ್ನು ಹಾಗೂ ಕಾರ್ಯಕರ್ತರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸ್ವಾಮಿ ಸ್ವಾತ್ಮಾರಾಮಾನಂದಜಿ ಮಹಾರಾಜ್ ಅವರ ಭಜನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ಪೊನ್ನಂಪೇಟೆ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಬೋಧಸ್ವರೂಪಾನಂದಜಿ ಮಹಾರಾಜ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ಸ್ವಾಮಿ ಪರಹಿತಾನಂದಜಿಯವರಿಂದ ವಂದನಾರ್ಪಣೆ ಹಾಗೂ ಸ್ವಾಮಿ ತದ್ಯುಕ್ತಾನಂದಜಿಯವರ ಮುಕ್ತಾಯ ಭಜನೆಯೊಂದಿಗೆ ಸಭಾಕಾರ್ಯಕ್ರಮ ಕೊನೆಗೊಂಡಿತು. ಸ್ವಾಮಿ ಶಾಂತಿವ್ರತಾನಂದಜಿ ಕಾರ್ಯಕ್ರಮದ ನಿರೂಪಣೆ ಮಾಡಿದರು.

ರಾಮಕೃಷ್ಣ ಮಠದ ವಿವಿಧ ಶಾಖೆಗಳಿಂದ ಬಂದ ಸುಮಾರು ೪೦ ಮಂದಿ ಸಾಧು-ಬ್ರಹ್ಮಚಾರಿಗಳು ಹಾಗೂ ಸುಮಾರು ೩೦೦ ಮಂದಿ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020


PACKAGE TOURS 2015
Hotel Room Accom. & South Indian Veg. Food
Yamunotri - Gangotri - Badri - Kedar
Puri - Konark - Kolkata - Darjeeling
Dwarka & Asta Jyothirlinga
INTERNATIONAL TOURS : Dubai, Singapore, Malaysia, Thailand, Sri Lanka, USA & many more...
Shri Hansaa Travels
Recognised by Department of Tourism, Govt. of Karnataka
: 640, 40th Cross, 8th Block, Jayanagar, Bangalore - 70
: hansaatravels@gmail.com
: hansaatravels.com
080-26643276 / 26543891 / 9341215612 / 9341415612

VIVEKA PRABHA (KANNADA MONTHLY)
July 2015 , Vol.16, No.07, No. of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2015-17. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2013-15

Printed at mayur graphics,Bangalore